Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–49 | ಡಿಸೆಂಬರ್ 4–10, 2023 | ಪುಟ 16 | ರೂ. 10/–
Volume-17 | Issue-49 | December 4-10, 2023 | Pages:16 | Price: 10/-



ಅಭೂತಪೂರ್ವ ಮಹಾ ಧರಣಿ

ನೀತಿ ಬದಲಿಸದ ಸರ್ಕಾರ ಬದಲಾಯಿಸುವ ಸಂಕಲ್ಪ

ಭ್ರೂಣ ಹತ್ಯೆಯ ಕರಾಳ ಮುಖಗಳು



ಪಶ್ಚಿಮ ಹಿಮಾಲಯದ ಯೋಜನೆಗಳಪರಿಶೀಲನೆ ಅಗತ್ಯ

ಮುಖ್ಯಮಂತ್ರಿಗಳ ಜನತಾ ದರ್ಶನ: ಬದಲಾಗ ಬೇಕಾದ ಆಡಳಿತ ವೈಖರಿ

ಡಾ॥ ಬಾಬಾಸಾಹೇಬರ ಕೊನೆಯ ದಿನಗಳು

ಡಿಸೆಂಬರ್ 6, ಭಾರತ ರತ್ನ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಗಲಿದ "ಪರಿನಿರ್ವಾಣವಾದ ದಿನ: ಅತ್ಯಂತ ಕರ್ತವ್ಯಶೀಲರೂ, ಸ್ವಾಭಿಮಾನಿಗಳೂ ಆಗಿದ್ದ ಅವರ ಇಡೀ ಜೀವನ ಪರಿಶ್ರಮದಿಂದಲೇ ಕೂಡಿತ್ತು. ಅವರ ಕೊನೆಯ ದಿನಗಳು ಹೇಗಿದ್ದವು? ಈ ಕುರಿತ ಒಂದು ನೋಟ.



ನಿತ್ಯಾನಂದಸ್ವಾಮಿ

ಮಹಾ ಮಾನವತಾವಾದಿ, ಸಂವಿಧಾನ ಶಿಲ್ಪಿ, ಭಾರತ ರತ್ನ 6 ಡಿಸೆಂಬರ್ 1956 ರಂದು ಅಮರರಾದರು. ಬೌದ್ಧ ಧರ್ಮಸ್ವೀಕಾರವಾದ ನಂತರ ಡಾ॥ ಅಂಬೇಡ್ಕರ್ ಬಹಳ ಕಾಲ ಬದುಕಲಿಲ್ಲ. ಅವರನ್ನು ಆವರಿಸಿದ್ದ ಮುಪ್ಪು ಮತ್ತು ಕಾಯಿಲೆಗಳು ಅವರನ್ನು ತುಂಬಾ ಕೃಶರನ್ನಾಗಿ ಮಾಡಿಬಿಟ್ಟಿದ್ದವು. ದಿನದಿಂದ ದಿನಕ್ಕೆ ಅವರ ಆರೋಗ್ಯ ಕುಸಿಯುತಿತ್ತು.

ಬಾಬಾ ಸಾಹೇಬರು ತಮ್ಮ ಜೀವನದ ಸಂಧ್ಯಾ ಕಾಲದಲ್ಲಿ ತೀವ್ರವಾದ ನೋವಿನಿಂದ ಬಳಲುತ್ತಿದ್ದರು. ಅವರ ಕೊನೆಯ ದಿನಗಳಲ್ಲಿ ಅವರು ತೀವ್ರವಾದ ತೊಳಲಾಟ, ತುಮುಲು, ಆತಂಕ, ನಿರಾಸೆಯಿಂದ ನೊಂದುಕೊಂಡಿದ್ದರು. ಅವರಿಗೆ ನೀಡಲಾದ ಔಷಧಿಗಳಿಂದ ಅವರ ದೇಹದ ಮೇಲೆ ಗಣನೀಯವಾದ ದುಷ್ಪರಿಣಾಮ ಉಂಟಾಯಿತು. ಹೀಗಾಗಿ ಅವರ ಜೀವನದ ಕೊನೆಯ ದಿನಗಳು ಸಂತೋಷದಾಯಕವಾಗಿರಲಿಲ್ಲ. ಅವರು ನೋವಿನಿಂದಲೇ ತೀರಿಕೊಂಡರು. ಇದು ಅವರು ಅನುಭವಿಸಿದ ಜೀವನದ ಇನ್ನೊಂದು ಮಜಲನ್ನು ತೆರೆದಿಡುವಂತಾಯಿತು.

ಡಾ॥ ಬಾಬಾ ಸಾಹೇಬರು ಅತ್ಯಂತ ಕರ್ತವ್ಯಶೀಲರೂ, ಸ್ವಾಭಿಮಾನಿಗಳೂ ಆಗಿದ್ದರು. ಅವರ ಪತ್ನಿ ರಾಮಾಬಾಯಿಯವರು ದೀರ್ಘಕಾಲದ ಕಾಯಿಲೆ ನಂತರ ಮೇ 27, 1935 ರಂದು ತಮ್ಮ ಕೊನೆಯುಸಿರೆಳೆದರು. ಪ್ರಾರಂಭದ ಬಹುಪಾಲು ಸಮಯವನ್ನು ಅವರು ಹೇಳಲಸಾಧ್ಯವಾದ ಹೋರಾಟಗಳಲ್ಲಿ, ಬಡತನದಲ್ಲಿ ಕಳೆದರು. ಡಾ॥ ಅಂಬೇಡ್ಕರ್ ರವರು ಸಭೆಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಪಾಲ್ಗೊಳ್ಳಲು ದೂರದ ಊರುಗಳಿಗೆ ತೆರಳಿದ್ದಾಗ ರಾಮಾಬಾಯಿರವರು ತಮ್ಮ ದಿನಗಳನ್ನು ಆತಂಕದಿಂದ ಕಳೆಯುತ್ತಿದ್ದರು. ರಾಮಬಾಯಿರವರ ನಿಧನವು ಡಾ॥ಬಾಬಾ ಸಾಹೇಬರಿಗೆ ದೊಡ್ಡ ಆಘಾತವನ್ನು ಉಂಟು ಮಾಡಿತು. ರಾಮಾಬಾಯಿಯವರ ನೆನಪು ಬಹುಕಾಲ ಅವರ ನೆನಪಿನಿಂದ ಮಾಸಿರಲಿಲ್ಲ. ಕೆಲ ಸಮಯ ಅವರು ಕಣ್ಣೀರಿಡುತ್ತಿದ್ದರು.

1947 ರಿಂದಲೂ ಡಾ॥ ಅಂಬೇಡ್ಕರ್ ರವರು ಉತ್ತಮ ಆರೋಗ್ಯ ಹೊಂದಿರಲಿಲ್ಲ. ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದರು. ಇನ್‌ಸುಲಿನ್ ಚಿಕಿತ್ಸೆ ಪಡೆಯುತ್ತಿದ್ದರು. ಚೇತರಿಕೆ ಕಂಡು ಬರುತ್ತಿರಲಿಲ್ಲ. ಎರಡೂ ಕಾಲುಗಳ ನೋವಿನಿಂದ ಅವರು ನರಳುತ್ತಿದ್ದರು. ನವೆಂಬರ್ 26, 1949 ರಂದು ಅವರು ಬರೆದು ಮುಕ್ತಾಯಗೊಳಿಸಿದ ಭಾರತದ ಸಂವಿಧಾನಕ್ಕಾಗಿ ಅವರನ್ನು ಮುಕ್ತ ಕಂಠದಿಂದ ಹಾಡಿ ಹೊಗಳಲಾಯಿತು. ಸುದೀರ್ಘ ಪರಿಶ್ರಮದಿಂದ ಅವರು ನಮ್ಮ ಸಂವಿಧಾನವನ್ನು ರಚಿಸಿದ್ದರು. ಆದರೆ ಡಾ॥ ಬಾಬಾ ಸಾಹೇಬ್ ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. "ಇಂದು ನಾವು ವೈರುಧ್ಯಗಳ ಜೀವನಕ್ಕೆ ಕಾಲಿಡುತ್ತಿದ್ದೇವೆ. ಇಲ್ಲಿ ರಾಜಕೀಯ ಸಮಾನತೆ ಇದ್ದರೂ ಸಾಮಾಜಿಕ ಸಮಾನತೆ ಇನ್ನೂ ಬಂದಿರುವುದಿಲ್ಲ. ಈ ಸಾಮಾಜಿಕ ಸಮಾನತೆ ಇಲ್ಲದೆ ರಾಜಕೀಯ ಸ್ವಾತಂತ್ರ್ಯದಿಂದ ಏನೂ ಪ್ರಯೋಜನ ಇರುವುದಿಲ್ಲ." ತಾವು ಪಟ್ಟ ಶ್ರಮ ಸಾರ್ಥಕವಾಗದು ಎಂಬ ನೋವು ಅವರನ್ನು ಕಾಡುತಿತ್ತು. ಸಮಾಜದಲ್ಲಿನ ಅನಿಷ್ಟ ಜಾತಿ ಪದ್ಧತಿಯಿಂದ ಡಾ॥ ಭೀಮರಾವ್ ಬಾಲಕನಾಗಿದ್ದ ದಿನಗಳಿಂದಲೇ ಬಹಳಷ್ಟು ನೊಂದುಕೊಂಡಿದ್ದರು. ಈ ಅರ್ಥಹೀನ ಪದ್ಧತಿಯನ್ನು ನಾಶಮಾಡಬೇಕೆಂಬ ದೃಢ ಸಂಕಲ್ಪವನ್ನು ಎಳೆಯ ವಯಸ್ಸಿನಲ್ಲೇ ಬೆಳೆಸಿಕೊಂಡಿದ್ದರು. ಆದರೆ ಜಾತಿ ಪದ್ಧತಿಯ ನಿರ್ನಾಮಕ್ಕೆ ಸಂವಿಧಾನ ಎಂಬ ಅಸ್ತ್ರವನ್ನು ಒದಗಿಸಲು ಸಾಧ್ಯವಾದರೂ ಅದು ಗುರಿ ಮುಟ್ಟಲಾರದು ಎಂಬ ವಾಸ್ತವ ಅವರನ್ನು ಚಿಂತೆಗೀಡು ಮಾಡಿತ್ತು. ಜಾತಿ ತಾರತಮ್ಯ ಕಾನೂನು ಬಾಹಿರ ಎಂದು ಘೋಷಿಸಲಾಗಿದ್ದರೂ ಶ್ರೇಣಿಕೃತ ಜಾತಿ ಪದ್ಧತಿ ಈ ಸಮಾಜದಲ್ಲಿ ಅಂತ್ಯ ಕಾಣದು ಎಂಬ ನೋವು ಅವರನ್ನು ಅವರ ಜೀವನದ ಸಂಧ್ಯಾಕಾಲದಲ್ಲಿ ಕಾಡುತಿತ್ತು. ರಾಜಕೀಯದಲ್ಲಿ ಸಮಾನತೆ ಇರುತ್ತದೆ. ರಾಜಕೀಯವಾಗಿ ಒಬ್ಬ ವ್ಯಕ್ತಿ, ಒಂದು ಮತ, ಒಂದು ಮತ ಒಂದು ಮೌಲ್ಯ ಎಂಬ ತತ್ವಕ್ಕೆ ಮಾನ್ಯತೆ ಇರುತ್ತದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಒಬ್ಬ ವ್ಯಕ್ತಿ, ಒಂದು ಮೌಲ್ಯ ಎಂಬ ತತ್ವದ ನಗ್ನ ನಿರಾಕರಣೆ ಮುಂದುವರೆಯುತ್ತದೆ. ಮನುಷ್ಯ ಮನುಷ್ಯರೊಳಗೆ ಮೇಲು ಕೀಳೆಂಬ ಜಾತಿ ಬೇದ ಅಮಾನವೀಯ ಅಸ್ಪೃಶ್ಯತೆ ಕೇವಲ ಸಂವಿಧಾನದಿಂದ ಅಳಸಿಹಾಕಲಾಗದು ಎಂಬ ನೋವು ಡಾ॥ ಬಾಬಾಸಾಹೇಬ್ ಅವರು ಅನುಭವಿಸಿದ ನೋವು. ಅಂತಿಮವಾಗಿ ಅವರು ಸ್ವೀಕರಿಸಿದ ಬೌಧ ಧರ್ಮದಿಂದಲೂ ಜಾತಿ ಪದ್ಧತಿಯನ್ನು ತೊಡೆದು ಹಾಕಲು ಸಾಧ್ಯವಾಗಲಿಲ್ಲ.

ಇಂದು ನಮಗೆ ವರ್ಗ ವಿಮೋಚನೆಗಾಗಿ ಹೋರಾಡುವುದು ಎಷ್ಟು ಮುಖ್ಯವೋ ಸಾಮಾಜಿಕ ವಿಮೋಚನೆಗಾಗಿ ಹೋರಾಡುವುದು ಅಷ್ಟೆ ಮುಖ್ಯ. ಒಂದನ್ನು ಸಾಧಿಸದೆ ಇನ್ನೊಂದನ್ನು ಸಾಧಿಸಲು ಸಾಧ್ಯವಿಲ್ಲ. ವರ್ಗ ಮತ್ತು ಜಾತಿ ಪರಸ್ಪರ ತಳಕುಹಾಕಿಕೊಂಡಿವೆ.

5 ಡಿಸೆಂಬರ್ 1956 ರಂದು ರಾತ್ರಿ ನಿದ್ರೆಯಲ್ಲಿದ್ದಾಗ ಅವರು ದಿಲ್ಲಿಯ ಸ್ವಗೃಹದಲ್ಲಿ ನಿಧನರಾದರು. ಅಂದಿನ ಪ್ರಧಾನ ಮಂತ್ರಿ ಜವಾಹರ್‌ಲಾಲ್ ನೆಹರೂ ರವರು ಧಾವಿಸಿ ಬಂದು ತಮ್ಮ ಆತ್ಮೀಯ ಗೆಳೆಯನ ಅಂತಿಮ ದರ್ಶನ ಪಡೆದು ತಮ್ಮ ಸರ್ಕಾರದ ಪರವಾಗಿ ಹೂಗುಚ್ಛವನ್ನರ್ಪಿಸಿದರು. ಡಾ॥ ಬಾಬಾಸಾಹೇಬರ ನಿಧನದ ವಾರ್ತೆ ಇಡೀ ದೆಹಲಿ ಉದ್ದಗಲಕ್ಕೂ ಕಾಡ್ಗಿಚ್ಚಿನಂತೆ ಹಬ್ಬಿತು. ಅಪ್ರತಿಮ ನಾಯಕನಿಗೆ ಅಂತಿಮ ನಮನ ಸಲ್ಲಿಸಲು ಎಲ್ಲ ಸಮುದಾಯಗಳ ಮಹಿಳೆಯರು ಮತ್ತು ಪುರುಷರು ಶೋಕತಪ್ತರ ಪ್ರವಾಹದಂತೆ ಸೇರತೊಡಗಿದರು. ದಲಿತರು ಪರಿಶಿಷ್ಟ ಜಾತಿಗಳ ಒಕ್ಕೂಟದ ಬಾವುಟಗಳನ್ನು ಹಿಡಿದುಕೊಂಡಿದ್ದರು, ಕಪ್ಪು ಬ್ಯಾಡ್ಜ್‌ಗಳನ್ನು ಅವರು ಧರಿಸಿಕೊಂಡು ಅಗಲಿದ ನಾಯಕನಿಗೆ ಶೋಕ ಸಲ್ಲಿಸುತ್ತಿದ್ದರು. ಹೂಮಾಲೆಗಳಿಂದ ಸಿಂಗರಿಸಲ್ಪಟ್ಟ ಅವರ ಪಾರ್ಥಿವ ಶರೀರವನ್ನು ದಿವಾನ ಖಾನೆಯಲ್ಲಿ ಇಡಲಾಗಿತ್ತು.

ಡಾ॥ ಅಂಬೇಡ್ಕರ್‌ರವರ ದೇಹವನ್ನು ಅಂತ್ಯ ಸಂಸ್ಕಾರಕ್ಕಾಗಿ ಮುಂಬೈಗೆ ತರಲಾಗುವುದೆಂದೂ, ಯಾರೂ ದೆಹಲಿಯಿಂದ ಮುಂಬೈಗೆ ಧಾವಿಸಬೇಕಾಗಿಲ್ಲ ಎಂದು ಪ್ರಕಟಿಸಲಾಯಿತು. ವಿಮಾನದ ಬಾಡಿಗೆಗಾಗಿ ಹಣವನ್ನು ಸಂಗ್ರಹಿಸಲಾಯಿತು. ಬಾಡಿಗೆ ವಿಮಾನವು ರಾತ್ರಿ 9.45ಕ್ಕೆ ಸಪ್ದರ್ ಜಂಗ್ ವಿಮಾನ ನಿಲ್ದಾಣದಿಂದ ಹೊರಟಿತು. "ಬಾಬಾಸಾಹೇಬ್ ಅಂಬೇಡ್ಕರ್ ಅಮರ್ ರಹೇ" ಎಂಬ ದುಃಖಪೂರಿತ ಘೋಷಣೆ ಮುಂಬೈ ಬೀದಿಗಳಲ್ಲಿ ಪ್ರತಿಧ್ವನಿಸುತಿತ್ತು. ಪೂನ, ಸತಾರ, ನಾಗಪುರ ಮತ್ತು ನಾಸಿಕ್‌ನಂತಹ ಸ್ಥಳಗಳಿಂದ ಸಾವಿರಾರು ಜನ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಮುಂಬೈಗೆ ಆಗಮಿಸಿದ್ದರು. ಮುಂಬೈನಲ್ಲಿರುವ 61 ಜವಳಿ ಮಿಲ್ಲುಗಳಲ್ಲಿ 35 ಮಿಲ್ಲುಗಳ ಕಾರ್ಮಿಕರು ಒಂದು ದಿನದ ಮುಷ್ಕರ ಮಾಡಿ ಕಾಲ್ನಡಿಗೆಯಲ್ಲಿ ಆಗಮಿಸಿದರು. ಎರಡು ರೈಲ್ವೆ ಕಾರ್ಯಾಗಾರಗಳು ಸಹ ಮುಚ್ಚಿದ್ದವು.

ಬಾಬಾಸಾಹೇಬರ್ ಅಂತಿಮ ಯಾತ್ರೆ ಮುಂಬೈನಲ್ಲಿ ಮಧ್ಯಾಹ್ನ 2 ಗಂಟೆಗೆ ಆರಂಭವಾಗಿತ್ತು. ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದವು. ಸರಿಸುಮಾರು 5 ಲಕ್ಷಕ್ಕೂ ಹೆಚ್ಚು ಜನರು ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದರು. ಅವರ ಪಾರ್ಥಿವ ಶರೀರವನ್ನು ತೆರೆದ ಲಾರಿಯಲ್ಲಿ ಇಡಲಾಗಿತ್ತು. ಮೆರವಣಿಗೆ ದಾದರ್ ಸಮುದ್ರ ತೀರಕ್ಕೆ ಮುನ್ನಡೆಯಿತು. ಚಿತಾಗಾರದ ಗೋಡೆಗಳ ಬದಿಯಲ್ಲಿ ಪಾರ್ಥಿವ ಶರೀರವನ್ನು ಇಡಲು 6 ಅಡಿ ಎತ್ತರದ ಒಂದು ವಿಶೇಷ ದಿಬ್ಬವನ್ನು ನಿರ್ಮಿಸಲಾಗಿತ್ತು. ಚಿತೆಯನ್ನು ಸಂಪೂರ್ಣವಾಗಿ ಶ್ರೀಗಂಧದ ತುಂಡುಗಳಿಂದ ನಿರ್ಮಿಸಲಾಗಿತ್ತು. ಸಂಜೆ 7–15 ಕ್ಕೆ ಸೂರ್ಯಾಸ್ತ ಆಗುತ್ತಿರುವಾಗ ಬಾಬಾಸಾಹೇಬರ ಪುತ್ರ ಯಶ್ವಂತ್ ರಾವ್ ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ನಗರದ ಪೊಲೀಸರು ಗೌರವ ತೋಪು ಹಾರಿಸಿ ಅಗಲಿದ ಶೋಷಿತರ ನಾಯಕನಿಗೆ ಗೌರವಾರ್ಪಣೆ ಮಾಡಿದರು. ಪ್ರಕೃತಿಯ ಪ್ರೀತೀಯ ಪುತ್ರ ಪ್ರಕೃತಿಯಲ್ಲಿ ಲೀನವಾದರು. ಅವರು ಕಂಡ ಕನಸು ನನಸಾಗಲಿಲ್ಲ. ಅವರು ಕೈಗೊಂಡ ಕರ್ತವ್ಯ ಪೂರ್ಣಗೊಳ್ಳಲಿಲ್ಲ.

ಎಲ್ಲವೂ ಬದಲಾಗುತ್ತದೆ, ಜಾತಿ ಪದ್ಧತಿಯೂ ಸಹ. ಜಾತಿ ಪದ್ಧತಿಯನ್ನು ವರ್ಗ ವ್ಯವಸ್ಥೆಯ ಒಂದು ಭಾಗವಾಗಿ ಗ್ರಹಿಸಬೇಕಾಗಿದೆ. ಜಾತಿ ಎಂಬ ಪಿಡುಗನ್ನು ನಿರ್ನಾಮ ಮಾಡುವುದು. ಎಲ್ಲರ ಜವಾಬ್ದಾರಿಯಾಗಿದೆ. ಅಂಬೇಡ್ಕರ್‌ರವರಿಗೆ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗುವುದು ಎಷ್ಟು ಮುಖ್ಯವಾಗಿತ್ತೋ ಅಷ್ಟೇ ಮುಖ್ಯ ಜಾತಿ ಪದ್ಧತಿಯನ್ನು ತೊಲಗಿಸುವುದು ಆಗಿತ್ತು. ಇಂದು ನಮಗೆ ವರ್ಗ ವಿಮೋಚನೆಗಾಗಿ ಹೋರಾಡುವುದು ಎಷ್ಟು ಮುಖ್ಯವೋ ಸಾಮಾಜಿಕ ವಿಮೋಚನೆಗಾಗಿ ಹೋರಾಡುವುದು ಅಷ್ಟೆ ಮುಖ್ಯ. ಒಂದನ್ನು ಸಾಧಿಸದೆ ಇನ್ನೊಂದನ್ನು ಸಾಧಿಸಲು ಸಾಧ್ಯವಿಲ್ಲ. ವರ್ಗ ಮತ್ತು ಜಾತಿ ಪರಸ್ಪರ ತಳಕುಹಾಕಿಕೊಂಡಿವೆ. ಕೇವಲ ಮನು ಧರ್ಮವನ್ನು ತ್ಯಜಿಸಿ ಬೇರೊಂದು ಧರ್ಮವನ್ನು ಸ್ವೀಕರಿಸಿದರೆ ಜಾತಿ ಅಸ್ಪೃಶ್ಯತೆ ತೊಲಗದು. ಇದು ಬಾಬಾಸಾಹೇಬರನ್ನು ನೋವಿಗೀಡು ಮಾಡಿದ ಸಂಗತಿ. ವರ್ಗ ಹೋರಾಟ ಮತ್ತು ಜಾತಿ ವಿರೋಧಿ ಹೋರಾಟ ಒಟ್ಟೊಟ್ಟಿಗೆ ನಡೆಯಬೇಕಾಗಿದೆ.

ನಾಡ ನಡುವಿನಿಂದ ಸಿಡಿದ, ನೋವಿನ ಕೂಗೇ....

ನಾಡ ನಡುವಿನಿಂದ ಸಿಡಿದ, ನೋವಿನ ಕೂಗೇ
ಆಕಾಶದ ಅಗಲಕ್ಕೂ, ನಿಂತ ಅಲವೇ

ಕೋಟಿ ಕೋಟಿ ಕಪ್ಪು ಜನರ, ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ, ಮೊಳಗಿದಂಥ ಘೋಷವೇ

ಬಾಳಿನಲ್ಲಿ ಕಂಡುಕೊಂಡೆ, ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ, ಮಹಾಮನೆಯ ಬಿರುಕನು

ಜಾತಿಯನ್ನು ಹೂತು ಬಿಡಲು, ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕ್ಕಿಳಿದ, ಸ್ವಾಭಿಮಾನ ಸಮುದ್ರ

ಮಹಾರಾಷ್ಟ್ರದ ಮಣ್ಣಿನಲಿ, ಮೂಡಿಬಂದ ಗಡುಗು ಸಿಡಿಲೇ
ಮಳೆಯನೇಕೆ ತಾರಲಿಲ್ಲ, ಮಿಂಚು ಮಾಯೆ ಅಷ್ಟೆಯೇ

ಅಭಿಮಾನದ ನೇಗಿಲಿಂದ, ಬಂಜರು ನೆಲ ಉತ್ತವನೇ
ಪಾತಿ ಮಾಡಿ ನಾಟಿ ಹಾಕಿ, ಬೆಳೆಯ ಕಾಣದೋದವನೆ

ಕಪ್ಪುಕ್ಕಿನ ಕೋಳಗಳನು, ಕಡಿದು ಎಸೆದ ವಜ್ರವೇ
ಬಂಗಾರದ ಕೋಳಹೊಕ್ಕ, ಮಹಾಬೌದ್ಧ ಭಿಕ್ಷುವೇ

ಮಲಗಿದವರ ಕೂಡಿಸಿದೆ, ನಿಲಿಸುವವರು ಯಾರೋ
ಛಲದ ಜೊತೆಗೆ ಬಲದ ಪಾಠ, ಕಲಿಸುವವರು ಯಾರೋ

–ಸಿದ್ದಲಿಂಗಯ್ಯ

ಸಂಪಾದಕೀಯ

ಜನತಾ ದರ್ಶನ: ಬದಲಾಗ ಬೇಕಾದ ಆಡಳಿತ ವೈಖರಿ

ಕರ್ನಾಟಕದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 2023 ನವೆಂಬರ್ 27 ರಂದು ನಡೆಸಿದ ಜನತಾ ದರ್ಶನಕ್ಕೆ ರಾಜ್ಯದ ಎಲ್ಲೆಡೆಗಳಿಂದ ಹರಿದು ಬಂದ ನೊಂದವರ ಪ್ರಮಾಣ ಮತ್ತು ಪ್ರಶ್ನೆಗಳು ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ದಿನವಿಡೀ ಜನತೆಯ ಅಹವಾಲುಗಳನ್ನು ಆಲಿಸಿದ ಮುಖ್ಯಮಂತ್ರಿಗಳ ಕ್ರಮ ಸ್ವಾಗತಾರ್ಹ. ಅಲ್ಲಿ ವಸತಿ, ಭೂಮಿ, ನಾಗರಿಕ ಸಮಸ್ಯೆಗಳು, ನಿವೃತ್ತಿ ವೇತನದ ವಿಳಂಬ, ಆರೋಗ್ಯ ಚಿಕಿತ್ಸೆಗೆ ಹಣದ ನೆರವು, ನೌಕರಿ, ಭ್ರಷ್ಟಾಚಾರ, ಪೊಲೀಸ್ ಇಲಾಖೆಯ ವರ್ತನೆ, ಮುಂತಾದ ಸಾಮಾನ್ಯ ವಿಷಯಗಳೇ ಮುಖ್ಯವಾಗಿದ್ದವು. ಬಹುತೇಕ ಸಮಸ್ಯೆಗಳು ಇಲಾಖೆಗಳ ಆಡಳಿತದ ಮಟ್ಟದಲ್ಲೇ ಬಹಳವೆಂದರೆ ಅದರ ಉನ್ನತ ಹಂತದ ಅಧಿಕಾರಿಗಳ ಮಟ್ಟದಲ್ಲೇ ಬಗೆ ಹರಿಸಬಹುದಾದಂತಹವು. ನೀತಿಗಳನ್ನು ರೂಪಿಸುವ ಇಲ್ಲವೇ ಬದಲಾಯಿಸುವಂತಹ ಪ್ರಶ್ನೆಗಳು ಮುಖ್ಯಮಂತ್ರಿಗಳ ಸಮ್ಮುಖಕ್ಕೆ ಬಂದಿರುವುದು ತೀರಾ ಅಪರೂಪ. ಈ ಸಮಸ್ಯೆಗಳನ್ನು ಸಹಾನುಭೂತಿಯಿಂದಲೇ ಆಲಿಸಿದ ಮು.ಮಂ.ಗಳು ಸ್ಥಳೀಯ ಅಥವಾ ಜಿಲ್ಲಾ ಮಟ್ಟದಲ್ಲೇ ಅಧಿಕಾರಿಗಳು, ನೌಕರರು ಬಗೆಹರಿಸಿದ್ದಲ್ಲಿ ಇಲ್ಲಿಯವರೆಗೂ ಯಾಕೆ ಬರಬೇಕಿತ್ತು ಎನ್ನುವುದನ್ನು ತಾಕೀತು ಮಾಡಿರುವುದು ವಾಸ್ತವ ಸಂಗತಿ. ಹಾಗೇ ಅವರು ಆಡಳಿತದಲ್ಲಿನ ಭ್ರಷ್ಟಾಚಾರ ಅದನ್ನು ಕೊಡಲಾಗದೇ ಕೇಳಿಕೆಗಳು ನೆನಗುದಿಗೆ ಬಿದ್ದಿರುವುದೂ ತಿಳಿಯದ್ದೇನಲ್ಲ. ಆದ್ದರಿಂದಲೇ ರಾಜಧಾನಿಯ ಮತ್ತು ಜಿಲ್ಲಾ ಆಡಳಿತದ ಮುಖ್ಯ ಅಧಿಕಾರಿಗಳಿಗೆ ಅಂತಹದ್ದು ಘಟಿಸದಂತೆ ಎಚ್ಚರಿಕೆ ನೀಡಿದ್ದಾರೆ ಎನ್ನುವುದು ನಿಜ. ಆದರೆ ಇಂತಹ ಸಾಂದರ್ಭಿಕ ಮಾತು, ಆದೇಶಗಳಿಂದ ಪರಿಸ್ಥಿತಿ ಸುದಾರಿಸುತ್ತೆಂಬ ವಿಶ್ವಾಸ ಅವರಿಗಾದರೂ ಇದೆಯೇ? ಹಾಗೆ ನೋಡಿದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಅರ್ದ ವರ್ಷವೇ ಕಳೆದು ಹೋದರೂ ಬಿಜೆಪಿ ದುರಾಡಳಿತದಲ್ಲಿ ಹಳಿ ತಪ್ಪಿದ ಆಡಳಿತ ಸರಿ ದಾರಿಗೆ ಬಂದಿದೆ ಮತ್ತು ಸಾಮಾನ್ಯ ಜನತೆಗೆ ನೆಮ್ಮದಿ ತರುತ್ತಿದೆ ಎಂಬ ಅನುಭವವೇ ಕಾಣುತ್ತಿಲ್ಲ. ಅಧಿಕಾರಶಾಹಿಗೆ ಚಾಟಿ ಬೀಸಿ, ಆಡಳಿತವನ್ನು ಜನಸ್ಪಂದನ ಮುಖಿಯಾಗುವಂತೆ ಮಾಡುವುದರತ್ತ ಅಧಿಕಾರದ ಚುಕ್ಕಾಣಿ ಹಿಡಿದವರು ಮಾಡಬೇಕು. ಇದಕ್ಕೆ ಬೇಕಿರುವುದು ಜನ ಕಾಳಜಿ, ಪ್ರಬಲ ರಾಜಕೀಯ ಇಚ್ಛಾಶಕ್ತಿ. ಅದರತ್ತ ಸಿ.ಎಂ, ಡಿ.ಸಿ.ಎಂ. ಮತ್ತು ಸಂಪುಟ ಗಮನ ಹರಿಸಿದಂತೆ ಕಾಣುವುದಿಲ್ಲ. ಎಲ್ಲಾ ಹಂತಗಳಲ್ಲಿ ಆಳವಾಗಿ ಬೇರೂರಿರುವ ಸ್ಥಾಪಿತ ಹಿತಾಸಕ್ತಿಗಳು, ಅಡ್ಡ ಹಾದಿಯಲ್ಲಿ ಸಂಪತ್ತು ಬಾಚುವ ಉದ್ಯಮಿಪತಿಗಳು, ಸಾರ್ವಜನಿಕ ಸಂಪತ್ತನ್ನು ದೋಚಿಯೇ ಕೊಬ್ಬಿ ಉಬ್ಬಿ ಬೆಳೆಯುವ ಲೂಟಿಖೋರರನ್ನು ಎದುರಿಸಬೇಕು ಅಥವಾ ಮಟ್ಟ ಹಾಕಬೇಕು. ಅಂತಹುದನ್ನು ಈ ಸರ್ಕಾರದಿಂದ ನಿರೀಕ್ಷಿಸಬಹುದೇ?

ಈ ಸರ್ಕಾರದ ಮುಖ್ಯಸ್ಥರು, ಉಸ್ತುವಾರಿ ಸಚಿವರು ಜನರ ಕಡೆ ಗಮನ ಹರಿಸುತ್ತಿಲ್ಲ, ಕೈಗೇ ಸಿಗುತ್ತಿಲ್ಲ, ಅಗತ್ಯ ಸಮಯ, ಗಮನ ನೀಡುತ್ತಿಲ್ಲ ಎಂಬ ಕೂಗು ಜೋರಾಗಿ ಕೇಳಿಸುತ್ತಿದೆ. ಜನ ಸಾಮಾನ್ಯರ ತೆರಿಗೆ ಹಣದಿಂದ ಸರ್ವ ಸವಲತ್ತು ಅನುಭವಿಸುವ ಅಂತಹ ಸಚಿವರಿಗೆ ಪ್ರಜಾ ಹಿತಕ್ಕಲ್ಲದೇ ಬೇರೆ ಕಾರ್ಯಭಾರಗಳೇನು ಇವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಜನಸೇವೆಗಾಗಿಯೇ ಮಂತ್ರಿಗಿರಿ ಗಿಟ್ಟಿಸಿಕೊಳ್ಳಲು ದೆಹಲಿಗೆ ಹಾರುವ, ಭೂಮಿ ಆಗಸ ಒಂದಾಗುವಂತೆ ಕೂಗು ಹಾಕಿ ಅಬ್ಬರಿಸುವ, ಲಾಬಿ ಮಾಡುತ್ತಲೇ ಗೋಗರೆವ ಇವರಿಗೆ ಸಚಿವರಾದ ಮೇಲೆ ಮತ್ತೇನು ಕೆಲಸ? ಅವರವರ ದಂಧೆಗಳನ್ನು ಮಾಡಿಕೊಳ್ಳಲು ಮಂತ್ರಿಗಳಾಗ ಬೇಕೇ? ದೂರು ಇರುವ ಇಂತಹವರ ಮೇಲೆ ಮು.ಮಂ.ಗಳು ಸರಿಯಾದ ಕ್ರಮ ವಹಿಸಬೇಕು.

ಜನರ ದೈನಂದಿನಿಕ ಪ್ರಶ್ನೆಗಳನ್ನು ನೆನೆಗುದಿಗೆ ಹಾಕುವಲ್ಲಿ ಒಂದೆಡೆ ಆಡಳಿತದ ನಿರಾಸಕ್ತಿ ಅಥವಾ ಜನಪರವಲ್ಲದ ನಿಲವುಗಳು ಕಾರಣವಾಗಿರುವಂತೆ ಜನತೆಯ ನಿರೀಕ್ಷೆಗೆ ಅನುಗುಣವಾಗಿ ಸರ್ಕಾರ ರೂಪಿಸಬೇಕಾದ ಯೋಜನೆಗಳು ಮತ್ತು ಅದಕ್ಕೆ ಒದಗಿಸಬೇಕಾದ ಸಂಪನ್ಮೂಲಗಳ ಕೊರತೆಯೂ ಒಂದು ಮುಖ್ಯ ಕಾರಣ. ಇಂತಹ ಗಂಭೀರ ಪ್ರಶ್ನೆಗೆ ಸರಕಾರ ತನ್ನ ನೀತಿ ನಿರೂಪಣೆ, ದಿಕ್ಸೂಚಿ ಮತ್ತು ಕಾರ್ಯಕ್ರಮಗಳ ಆದ್ಯತೆಗಳ ಆಯ್ಕೆ ಬಹು ಮುಖ್ಯವಾದದು. ಚುನಾವಣಾ ಪ್ರಜಾಪ್ರಭುತ್ವದಲ್ಲಿ ಜನತೆ ಪಕ್ಷಗಳನ್ನು ಆರಿಸುವುದು ಮತ್ತು ಜನಾದೇಶ ನೀಡುವುದು ತಮ್ಮ ಹಿತಗಳನ್ನು ರಕ್ಷಿಸಬೇಕೆಂದು. ಹಾಗೆಯೇ ಹಿಂದಿನ ಸರ್ಕಾರಗಳನ್ನು ಬದಲಾಯಿಸುವುದು ಆ ಸರ್ಕಾರಗಳು, ಆ ಪಕ್ಷ ಅನುಸರಿಸುತ್ತಿದ್ದ ನೀತಿಗಳನ್ನು ತಿರಸ್ಕರಿಸಿ ಎನ್ನುವುದನ್ನು ಗಮನಿಸಬೇಕು. ಇದನ್ನು ಪರಿಗಣಿಸಿ ಜನತೆಯ ಅಶೋತ್ತರಗಳಿಗೆ ತಕ್ಕಂತೆ ಸರ್ಕಾರದ ನೀತಿ ನಿರೂಪಣೆಗಳು ರೂಪಿತವಾಗಬೇಕು ಮತ್ತು ಸಂಪನ್ಮೂಲಗಳು ವ್ಯಯ ಆದ್ಯತೆಯಾಗಿಯೂ ಪರಿಗಣಿಸಬೇಕು. ಇಂತಹ ಮುಖ್ಯ ಅಂಶಗಳತ್ತ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಗಮನ ಹರಿಸಬೇಕು. ಈಗಲೂ ಕೇವಲ 5 ಗ್ಯಾರಂಟಿಗಳ ಪಠಣದಲ್ಲಿಯೇ ಸಂತೃಪ್ತಿಯಾಗಿರುವಂತೆ ಕಾಣುತ್ತದೆ. ಅದರ ಗುಂಗಿನಿಂದ ಹೊರಬಂದು ಸಮಗ್ರವಾಗಿ ಕಾರ್ಯ ಯೋಜನೆ ರೂಪಿಸಲು, ಆಡಳಿತ ವೈಖರಿ ಬದಲಾಯಿಸಿಕೊಳ್ಳಲು ಸರ್ಕಾರ ಗಮನ ವಹಿಸುವುದು ಅತಿ ಅಗತ್ಯ.

●

ಇಪ್ಟಾ ಕರ್ನಾಟಕ-ಸಮುದಾಯ ಬೆಂಗಳೂರು-ರಾಗೀಕಣ ಬೆಂಗಳೂರು ಆಯೋಜಿಸುತ್ತಿರುವ

ಪ್ರೀತಿ–ಸಹಬಾಳ್ವೆಯ ಯಾತ್ರೆ: ರಾಷ್ಟ್ರೀಯ ಸಾಂಸ್ಕೃತಿಕ ಜಾತಾ

ಡಿಸೆಂಬರ್ 1 ರಿಂದ 7 ರ ವರೆಗೆ, ಕಾಸರಗೋಡಿನ ಮಂಜೇಶ್ವರದಲ್ಲಿ

ಸಿ.ಕೆ.ಗುಂಡಣ್ಣ

ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ, ಪ್ರಗತಿಪರ ಚಿಂತನೆಕಾರರ, ಸಮಾಜವಾದಿಗಳ, ಗಾಂಧಿವಾದಿಗಳ ಒಂದು ಬಹುದೊಡ್ಡ ಮತ್ತು ದೇಶದ ಮೊದಲ ಸಾಂಸ್ಕೃತಿಕ ಸಂಸ್ಥೆ ಎಂದರೆ ಇಪ್ಟಾ. (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್) ವಸಾಹತುಶಾಹಿ ವಿರೋಧಿ ಧೋರಣೆಗಳನ್ನು ಸಾಹಿತ್ಯ–ರಂಗಭೂಮಿ–ಸಿನೆಮಾ ಮಾಧ್ಯಮಗಳ ಮುಖಾಂತರ ದೇಶದ ಜನರ ಮಧ್ಯೆ ಪ್ರಸರಿಸಲು ನಿರಂತರವಾಗಿ ಶ್ರಮಿಸುತ್ತಿರುವ ಒಂದು ರಾಷ್ಟ್ರೀಯ ಸಾಂಸ್ಕೃತಿಕ ಸಂಸ್ಥೆ, ಇಪ್ಟಾ. ದೇಶ ಕಂಡ ಅತಿ ಭೀಕರ ಬರಗಾಲ–ಬಂಗಾಲದ ಬರಗಾಲದ ಸಮಯದಲ್ಲಿ ರಾಷ್ಟ್ರವ್ಯಾಪಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖಾಂತರ ದೇಣಿಗೆ ಸಂಗ್ರಹಿಸಿ ಅದನ್ನು ಬರಪೀಡಿತ ಜನಗಳಿಗೆ ತಲುಪಿಸಿದ ಸಾಂಸ್ಕೃತಿಕ ಸಂಸ್ಥೆ ಇಪ್ಟಾ. ಕೆ.ಎ. ಅಬ್ಬಾಸ್, ಕೈಫಿ ಆಜ್ಮಿ, ಕಮಲಾದೇವಿ ಚಟ್ಟೋಪಾಧ್ಯಾಯ, ವಿಜಯ್ ಆನಂದ್, ದೇವ್ ಆನಂದ್, ರಾಜ್ ಕಪೂರ್, ರಾಹಿ ಮಸೂಮ್ ರಾಜ, ರವಿ ಶಂಕರ್, ಉತ್ಪಲ್ ದತ್, ಎಮ್.ಎಸ್. ಸತ್ಯು ಮುಂತಾದ ಖ್ಯಾತ ಕಲಾವಿದರು ಅಂದಿನ ಕಾಲಘಟ್ಟದಲ್ಲಿ ಇಪ್ಟಾ ಜೊತೆ ಗುರುತಿಸಿಕೊಂಡವರು ಮತ್ತು ಅದರೊಟ್ಟಿಗೆ ಬೆಳೆದವರು.

ಇದೇ ಮಾದರಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಸಮುದಾಯ ಸಂಘಟನೆ, ಪ್ರಗತಿಪರ ಚಿಂತನೆಗಳನ್ನು ಸಾಂಸ್ಕೃತಿಕ ಚಟುವಟಿಕೆಗಳ ಮುಖಾಂತರ ಎಲ್ಲ ಜನ ಸಾಮಾನ್ಯರನ್ನು, ದುಡಿಯುವ ವರ್ಗದ ಜನರನ್ನು ತಲುಪಲು ಕಳೆದ ಐವತ್ತು ವರುಷಗಳಿಂದ ಪ್ರಗತಿಪರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಒಂದು ರಾಜ್ಯಮಟ್ಟದ ಸಾಂಸ್ಕೃತಿಕ ಸಂಘಟನೆ. ರಾಷ್ಟ್ರೀಯ ನಾಟಕ ಶಾಲೆಯ ಪ್ರಸನ್ನ ಅವರ ಕಲೆ ಕೇವಲ ಮನರಂಜನೆಗಾಗಿ ಮಾತ್ರ ಅಲ್ಲ ಎನ್ನುವ ಈ ಪರಿಕಲ್ಪನೆಯ ಸಂಘಟನೆಯನ್ನು ಮೊದಲಿಗೆ ಬೆಂಗಳೂರಿನಲ್ಲಿ ಹುಟ್ಟುಹಾಕಲು, ಅವರ ಜೊತೆ ಕೈ ಜೋಡಿಸಿದವರು ನಾಡಿನ ಖ್ಯಾತ ಸಮಾಜಮುಖಿ, ಪ್ರಗತಿಪರ ಧೋರಣೆಗಳ ಸಾಹಿತಿಗಳಾದ ಸರ್ವಶ್ರೀ ಕೆ. ಮರುಳಸಿದ್ದಪ್ಪ, ಕೆ.ವಿ. ನಾರಾಯಣ, ಸಿ. ವೀರಣ್ಣ, ಅಗ್ರಹಾರ ಕೃಷ್ಣಮೂರ್ತಿ, ಕೀ.ರಂ. ನಾಗರಾಜ, ವಿಜಯಮ್ಮ, ನಿಸ್ಸಾರ್ ಅಹಮದ್, ಕ.ನಂ. ನಾಗರಾಜ, ಕ.ವೆಂ. ರಾಜಗೋಪಾಲ, ಶೂದ್ರ ಶ್ರೀನಿವಾಸ, ಡಿ.ಆರ್. ನಾಗರಾಜ, ಟಿ. ವೆಂಕಟೇಶ ಮೂರ್ತಿ, ಮುಂತಾದ ಅನೇಕ ಮಹನೀಯರು.. ರಾಜ್ಯ ಮಟ್ಟದ ಸಾಂಸ್ಕೃತಿಕ ಜಾತಾಗಳನ್ನು ಆಯೋಜಿಸಿದ, ಬೀದಿ ನಾಟಕಗಳಿಗೆ ಹೊಸ ಅರ್ಥವನ್ನು ನೀಡಿದ ಖ್ಯಾತಿ ಸಮುದಾಯ ಬೆಂಗಳೂರು ಸಂಘಟನೆಯದ್ದು..

ರಾಗೀ ಕಣ ಸಂಸ್ಥೆ, ನಾಡಿನ ರೈತರು ಬೆಳೆದ ದೇಸಿ ಉತ್ಪನ್ನಗಳನ್ನು ಮತ್ತು ಗ್ರಾಮೀಣ ಹಸ್ತಕಲೆ ಕಲಾಕಾರರ ಸೃಜನಾತ್ಮಕ ಸಾಮಾಗ್ರಿಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವ ಒಂದು ವೇದಿಕೆ. ಗಾಂಧಿ ಚಿಂತನೆ ಮತ್ತು ತತ್ವಗಳನ್ನು ರೂಢಿಸಿಕೊಂಡು ಪ್ರಾಮಾಣಿವಾಗಿ ಅನುಷ್ಠಾನಗೊಳಿಸುತ್ತಿರುವ ಒಂದು ಗ್ರಾಹಕ ಸ್ನೇಹಿ ಸಂಸ್ಥೆ. ಪ್ರತಿ ಭಾನುವಾರ ಬೆಳಿಗ್ಗೆ ರಾಗೀಕಣ ಜಾಗದಲ್ಲಿ ಸಂತೆಗಳನ್ನು ಆಯೋಜಿಸಿ, ಆಸಕ್ತ ಗ್ರಾಹಕರಿಗೆ ನೇರವಾಗಿ ದೇಸೀ ಸಾಮಾಗ್ರಿ ಮತ್ತು ಬೆಳೆಗಳನ್ನು ಕೊಳ್ಳುವ ವ್ಯವಸ್ಥೆ ಮಾಡಿರುವ, ದೇಸೀ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಒಂದು ಸಮಾಜೋ–ಸಾಂಸ್ಕೃತಿಕ ಸಂಸ್ಥೆ ರಾಗೀಕಣ.

ದೇಶದ ಎಲ್ಲಾ ರಾಜ್ಯಗಳಲ್ಲಿ ಸಾಂಸ್ಕೃತಿಕ ಜಾತಾ

ಈಗ ಈ ಮೂರೂ ಸಂಸ್ಥೆಗಳು ಒಟ್ಟಾಗಿ ಸೇರಿ ಆಯೋಜಿಸುತ್ತಿರುವ ಒಂದು ಕಾರ್ಯಕ್ರಮವೇ ಪ್ರೀತಿ–ಸಹಬಾಳ್ವೆಯ ಯಾತ್ರೆ ಎನ್ನುವ ಒಂದು ಸಾಂಸ್ಕೃತಿಕ ಜಾತಾ ಕಾರ್ಯಕ್ರಮ. ಈ ಜಾತಾದ ಅಥವಾ ಯಾತ್ರೆಯ ಮೂಲ ಉದ್ದೇಶವೇ ಜನ ಸಾಮಾನ್ಯರನ್ನು ಮಾನವೀಯ ಮೌಲ್ಯಗಳ ಮುಖಾಂತರ ಬೆಸೆಯುವ ಮುಖ್ಯ ಉದ್ದೇಶದ ಒಂದು ಕಾಲು ನಡಿಗೆಯ ಯಾತ್ರೆ. ಎಲ್ಲ ವರ್ಗದ, ಎಲ್ಲ ಜಾತಿಯ ಜನರೊಟ್ಟಿಗೆ ಈ ಯಾತ್ರೆಯ ಜನರು ಬೆರೆತು, ಅವರಂತೆ ಬದುಕಲು, ಅವರ ಬದುಕಿನ ವಿಶೇಷತೆಗಳನ್ನು ಗುರುತಿಸಿ, ಅವರೊಟ್ಟಿಗೆ ಮಾತುಕತೆ, ಸಂವಾದಗಳನ್ನು ನಡೆಸಿ, ಅವರುಗಳ ಮುಖಾಂತರ ಈ ದೇಶವನ್ನು ಅರಿಯಲು ಪ್ರಯತ್ನಿಸುವ ಒಂದು ಆಶಯದೊಂದಿಗೆ ಪ್ರಾರಂಭವಾಗಿರುವ ರಾಷ್ಟ್ರವ್ಯಾಪಿ ಯಾತ್ರೆ. ದೇಶದ ಎಲ್ಲ ರಾಜ್ಯಗಳಲ್ಲಿ ವಿವಿಧ ದಿನಾಂಕಗಳಂದು ಪ್ರತ್ಯೇಕವಾಗಿ ಪ್ರಾರಂಭವಾಗಿ ಜನವರಿ 30, 2024 ರಂದು ಎಲ್ಲ ರಾಜ್ಯಗಳಲ್ಲೂ ಏಕಕಾಲದಲ್ಲಿ ಸಮಾಪ್ತಿಗೊಳ್ಳುವ ಒಂದು ಯಾತ್ರೆ.. ಈ ಯಾತ್ರೆ ಒಂದು ರಾಜ್ಯದಲ್ಲಿ ಕನಿಷ್ಠ ಏಳು ದಿನಗಳ ಕಾಲ ನಡೆದು, ಗರಿಷ್ಠ 120 ಕಿಲೋಮೀಟರ್‌ನಷ್ಟು ದೂರವನ್ನು ಕ್ರಮಿಸುತ್ತದೆ. ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಗೆ ಕಾರಣವಾಗಿರುವ ಹಲವು ವಿಷಯಗಳನ್ನು ಚರ್ಚೆಗೆ ಒಳಪಡಿಸಿ, ಸಂವಾದ ನಡೆಸಿ, ಭಿನ್ನ ಧ್ವನಿಗಳನ್ನು ಅರಿತುಕೊಳ್ಳುವ ಒಂದು ಸಣ್ಣ ಪ್ರಯತ್ನ ಈ ಯಾತ್ರೆಯದು. ಈ ಕಾರ್ಯಕ್ರಮದಲ್ಲಿ ಒಂದು ವಿಭಾಗದ, ಒಂದು ಚಿಂತನೆಯ, ಜನರು ಮಾತ್ರ ಭಾಗವಹಿಸದೆ ಎಲ್ಲ ರಾಜಕೀಯ ಚಿಂತನೆಗಳ ಜನರು ಭಾಗವಹಿಸಿ, ಸಮನ್ವತೆಯನ್ನು ಸಾಧಿಸುವ ಮಹತ್ತರ ಆಶಯವನ್ನು ಹೊಂದಿರುವ ಒಂದು ಯಾತ್ರೆ. ಗ್ರಾಮೀಣ ಜನರ ಹಾಡು, ಕುಣಿತಗಳನ್ನು ನಮ್ಮದು ಎಂದು ಸ್ವೀಕರಿಸಿ ಸಮನ್ವಯಗೊಳಿಸಿ, ಅವರಲ್ಲಿ ಒಂದಾಗುವ ಪ್ರಯತ್ನದ ಜೊತೆಗೆ, ನೈಜ ಭಾರತವನ್ನು ಗುರುತಿಸುವ ಒಂದು ವಿಶಿಷ್ಟ ಪ್ರಯತ್ನ.

ಕರ್ನಾಟಕದಲ್ಲಿ..... ಪುಟ 04 ಕ್ಕೆ



ಪ್ರೀತಿ ಸಹಬಾಳ್ವೆ ಯಾತ್ರೆಯ ಉದ್ಘಾಟನೆ, ರಾಜ್ಯ 5ನೆಯ ಹಣಕಾಸು ಆಯೋಗದ ಅಧ್ಯಕ್ಷರಾದ, ಮಾಜಿ ಸಂಸದ ಸಿ.ನಾರಾಯಣಸ್ವಾಮಿ ಯವರಿಂದ. ವೇದಿಕೆಯಲ್ಲಿ 'ಮುಖ್ಯಮಂತ್ರಿ' ಚಂದ್ರು, ಬಿ.ಎಲ್. ಶಂಕರ್, ಡಾ.ವಿಜಯಾ, ಸಿದ್ಧನಗೌಡ ಪಾಟೀಲ್, ಪ್ರಸನ್ನ, ಅಗ್ರಹಾರ ಕೃಷ್ಣಮೂರ್ತಿ, ವಿಶುಕುಮಾರ್, ಸಿ.ಕೆ.ಗುಂಡಣ್ಣ



ವಿದ್ಯುತ್ ಸುಧಾರಣೆಯಿಂದ ರೈತರಿಗೆ ಹೆಚ್ಚಿನ ಹೊರೆ

–ಡಾ. ವಿಜೂಕೃಷ್ಣನ್

ಸ್ಮಾರ್ಟ್ ಮೀಟರ್ ಹೆಸರಿನಲ್ಲಿ ತರಲಾಗುತ್ತಿರುವ ಹೊಸ ವಿದ್ಯುತ್ ನೀತಿಯು ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಮತ್ತು ವಿದ್ಯುತ್ ಕ್ಷೇತ್ರದ ಖಾಸಗಿ ಬಂಡವಾಳದಾರರ ಹಿತಾಸಕ್ತಿಗಳಿಗೆ ಪೂರಕವಾಗಿದ್ದು ಜನಸಾಮಾನ್ಯರು ಮತ್ತು ರೈತರ ಬದುಕಿಗೆ ಮಾರಕವಾಗಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ವಿದ್ಯುತ್ ಕ್ಷೇತ್ರದ ಸುಧಾರಣೆಗಳೊಂದಿಗೆ ಅತ್ಯಂತ ವೇಗವಾಗಿ ಮುನ್ನಡೆಯುತ್ತಿದೆ. ನವೆಂಬರ್ 2021 ರಲ್ಲಿ, ರೈತರ ಆಂದೋಲನದಿಂದಾಗಿ, ಮೋದಿ ಸರ್ಕಾರವು ಅನಿವಾರ್ಯವಾಗಿ ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳಬೇಕಾಯಿತು. ರೈತರ ಹಿತಾಸಕ್ತಿಗೆ ವ್ಯತಿರಿಕ್ತವಾದ ವಿದ್ಯುತ್ ತಿದ್ದುಪಡಿ ವಿಧೇಯಕವನ್ನು ಜಾರಿಗೊಳಿಸುವುದಿಲ್ಲ ಎಂದು ಆ ಸಂದರ್ಭದಲ್ಲಿ ಮೋದಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಅದೇ ನೀತಿಗಳನ್ನು ಜಾರಿಗೆ ತರಲು ಹೊರಟಿದೆ.

ವಾಜಪೇಯಿ ಅಧಿಕಾರಾವಧಿಯಲ್ಲಿ ನೆಟ್ಟ ಬೀಜಗಳು

ವಾಸ್ತವವಾಗಿ, ಬಿಜೆಪಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಅಧಿಕಾರಾವಧಿಯಲ್ಲಿ ಈ ನೀತಿಗಳ ಬೀಜಗಳನ್ನು ನೆಡಲಾಯಿತು. 1948 ರಿಂದ ಜಾರಿಯಲ್ಲಿರುವ ವಿದ್ಯುಚ್ಛಕ್ತಿ ಕಾಯಿದೆಯು ಕೃಷಿ ಅಭಿವೃದ್ಧಿ, ದೇಶದ ಆಹಾರ ಭದ್ರತೆ ಮತ್ತು ಬಡವರಿಗೆ ಸಬ್ಸಿಡಿ ವಿದ್ಯುತ್‌ಗೆ ಹೆಚ್ಚಿನ ಅನುದಾನವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದಲ್ಲದೆ, ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ವಿದ್ಯುತ್ ಒದಗಿಸಲು ಸಹಾಯ ಮಾಡುತ್ತದೆ. ಈ ನೀತಿಯನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ವೆಚ್ಚವನ್ನು ಇತರ ವಿಧಾನಗಳ ಮೂಲಕ ಮರುಪಡೆಯಲಾಗುತ್ತದೆ. ಆದರೆ, ಬಿಜೆಪಿ ಸರಕಾರಗಳು ಕಾರ್ಪೊರೇಟ್‌ಗಳಿಗೆ ಅಧಿಕಾರ ಹಸ್ತಾಂತರಿಸುವ ಉದ್ದೇಶದಿಂದ ಕೆಲಸ ಮಾಡುತ್ತಿವೆ.

ಕೃಷಿ ಕಾನೂನುಗಳು ಸೇರಿದಂತೆ ಅನೇಕ ಇತರ ಕಾನೂನುಗಳಂತೆ, ಜನರು ತೀವ್ರವಾದ ಕರೋನಾ ಸಾಂಕ್ರಾಮಿಕ ಮತ್ತು ಕಟ್ಟುನಿಟ್ಟಾದ ಲಾಕ್‌ಡೌನ್‌ನಿಂದ ತತ್ತರಿಸುತ್ತಿರುವ ಸಮಯದಲ್ಲಿ ಏಕಸ್ವಾಮ್ಯಗಾರರ ಆಜ್ಞೆಯ ಮೇರೆಗೆ ಕಾರ್ಮಿಕ ಸಂಹಿತೆಗಳನ್ನು ತರಲಾಯಿತು. 17 ಏಪ್ರಿಲ್ 2020 ರಂದು ಮತ್ತು ಮತ್ತೆ 8 ಆಗಸ್ಟ್ 2022 ರಂದು, ವಿದ್ಯುತ್ ವಲಯದಲ್ಲಿ ಕಾರ್ಪೊರೇಟ್‌ಗಳ ಪರವಾಗಿ ಮಸೂದೆಯನ್ನು ಪರಿಚಯಿಸಲಾಯಿತು. ವಿದ್ಯುತ್ ಇತರ ಸರಕುಗಳಿಗಿಂತ ಭಿನ್ನವಾಗಿದೆ. ಜನರು ತಮ್ಮ ಸ್ವಂತ ಅಗತ್ಯಗಳಿಗಾಗಿ ವಿದ್ಯುತ್ ಸಂಗ್ರಹಿಸಲು ಸಾಧ್ಯವಿಲ್ಲ. ಹೀಗಾಗಿ ಗ್ರಾಹಕರು ಸಂಪೂರ್ಣವಾಗಿ ಏಕಸ್ವಾಮ್ಯದ ಮೇಲೆ ಅವಲಂಬಿತರಾಗುತ್ತಾರೆ.

ಮೊದಲು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿ

ಕ್ಯಾಲಿಫೋರ್ನಿಯಾ ಮತ್ತು ಇತರೆಡೆಗಳಲ್ಲಿ ವಿದ್ಯುಚ್ಛಕ್ತಿಯ ಏಕಸ್ವಾಮ್ಯದ ಪ್ರಯೋಗಗಳು, ಸುಧಾರಣೆಗಳು ಸಾರ್ವಜನಿಕ ವಲಯದೊಂದಿಗೆ ಸ್ಪರ್ಧಿಸುವ ಉದ್ದೇಶವನ್ನು ಹೊಂದಿದ್ದವು. ಸಗಟು ವಿದ್ಯುತ್ ಮಾರುಕಟ್ಟೆಯಲ್ಲಿ, ಖಾಸಗಿ ವಿದ್ಯುತ್ ಉತ್ಪಾದಕರ ಏಕಸ್ವಾಮ್ಯದ ಈ ಕಸರತ್ತು ಒಂದೆಡೆ ಯುಟಿಲಿಟಿ ವಿತರಣಾ ಕಂಪನಿಗಳಿಗೆ ವಿದ್ಯುತ್ ಅನ್ನು ಮಾರಾಟ ಮಾಡುತ್ತದೆ. ಮತ್ತೊಂದೆಡೆ, ಚಿಲ್ಲರೆ ಮಾರುಕಟ್ಟೆಯಲ್ಲಿ ವಿದ್ಯುತ್ ಅನ್ನು ಅಂತಿಮ ಬಳಕೆದಾರರಿಗೆ ಖಾಸಗಿ ಸೇವಾ ಪೂರೈಕೆದಾರರಿಗೆ ಮಾರಾಟ ಮಾಡಲಾಗುತ್ತದೆ. ಈ ವಲಯದಲ್ಲಿನ ತ್ವರಿತ ಬದಲಾವಣೆಗಳು ಗ್ರಾಹಕರ ಜೀವನದಲ್ಲಿ ಅವ್ಯವಸ್ಥೆಗೆ ಕಾರಣವಾಗುತ್ತವೆ. ವಿದ್ಯುದ್ದೀಕರಣ ಸುಧಾರಣೆಗಳು ಜನರ ಪ್ರತಿರೋಧವನ್ನು ಎದುರಿಸಿದ ಕಾರಣ ಭಾರತದ ಆಡಳಿತ ಗಣ್ಯರು ಮೊದಲು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತರಲು ಪ್ರಯತ್ನಿಸಿದರು. ದಾದರ್ ಮತ್ತು ನಗರ್ ಹವೇಲಿಯಲ್ಲಿರುವ ಎಲ್ಲಾ ಆಸ್ತಿಗಳನ್ನು ಗುಜರಾತ್ ಮೂಲದ ಟೊರೆಂಟ್ ಕಂಪನಿಗೆ ವರ್ಗಾಯಿಸಲಾಯಿತು.

ಎರಡನೇ ಸ್ಥಾನದಲ್ಲಿ ಅದಾನಿ ಸಂಸ್ಥೆ

ಮಹಾರಾಷ್ಟ್ರದ ಅದಾನಿಗೆ, ಚಂಡೀಗಢದಲ್ಲಿ ಆರ್‌ಪಿ ಗೋಯೆಂಕಾ ಗ್ರೂಪ್‌ಗೆ ಮತ್ತು ಜಮ್ಮು ಮತ್ತು ಕಾಶ್ಮೀರ ಮತ್ತು ಪಾಂಡಿಚೇರಿಯ ಖಾಸಗಿ ಕಂಪನಿಗಳಿಗೆ ಅಧಿಕಾರ ಹಸ್ತಾಂತರಿಸುವ ಪ್ರಯತ್ನಗಳನ್ನು ವಿದ್ಯುತ್ ನೌಕರರು ಮತ್ತು ಗ್ರಾಹಕರು ಒಗ್ಗಟ್ಟಿನ ಹೋರಾಟಗಳ ಮೂಲಕ ಯಶಸ್ವಿಯಾಗಿ ವಿರೋಧಿಸಿದರು. ಅದಾನಿಗಳು ಮತ್ತು ಅಂಬಾನಿಗಳ ಜೊತೆಗೆ ಟಾಟಾಗಳು ಕೂಡ ದೊಡ್ಡ ರೀತಿಯಲ್ಲಿ ವಿದ್ಯುತ್ ಕ್ಷೇತ್ರವನ್ನು ಪ್ರವೇಶಿಸಿದರು. ಅದಾನಿ ಪ್ರೈವೇಟ್ ಲಿಮಿಟೆಡ್ ತನ್ನ ಸ್ಥಳದಲ್ಲಿ 13,650 ಮೆಗಾವ್ಯಾಟ್ ಸಾಮರ್ಥ್ಯದೊಂದಿಗೆ NTPC ಯ ನಂತರ ಎರಡನೇ ಸ್ಥಾನದಲ್ಲಿದೆ, ಭಾರತದಲ್ಲಿ ಅತಿ ದೊಡ್ಡ ಥರ್ಮಲ್ ಪವರ್ ಉತ್ಪಾದಕ ಎಂದು ಹೇಳಿಕೊಂಡಿದೆ. ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅತಿ ದೊಡ್ಡ ಆಟಗಾರ.

ಮೀಟರ್ ನಿಷ್ಕ್ರಿಯಗೊಂಡರೆ, ಮರು–ಸಂಪರ್ಕಕ್ಕೆ 500 ಶುಲ್ಕ!

ಕೃಷಿ ಗ್ರಾಹಕರು ಮತ್ತು ರೈತರಿಗೆ ಲಭ್ಯವಿರುವ ಸಬ್ಸಿಡಿಗಳ ಬಗ್ಗೆ ಜನರಲ್ಲಿ ನಕಾರಾತ್ಮಕ ಅಭಿಪ್ರಾಯವನ್ನು ಸೃಷ್ಟಿಸುವುದು ಭಾರತೀಯ ಕಾರ್ಪೊರೇಟ್‌ಗಳು ಮತ್ತು ಆಡಳಿತ ವಲಯಗಳ ಗುರಿಯಾಗಿದೆ. ಸ್ಮಾರ್ಟ್ ಮೀಟರ್‌ಗಳು ಇದರ ಒಂದು ಭಾಗವಾಗಿದೆ. ಇದು ಪ್ರಿಪೇಯ್ಡ್ ಮೀಟರ್‌ಗಳ ಆರಂಭವನ್ನು ತೋರಿಸುತ್ತದೆ. ಇವುಗಳನ್ನು ಒಪ್ಪದಿದ್ದರೆ ಕೇಂದ್ರವು ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ, ಸರ್ಕಾರದ ಯೋಜನೆಗಳು, ಸಹಾಯಧನ ಹಾಗೂ ಹಣ ಹಂಚಿಕೆಯಲ್ಲಿ ಕಡಿತ ಮಾಡುವುದಾಗಿ ರಾಜ್ಯ ಸರ್ಕಾರಗಳಿಗೆ ಬೆದರಿಕೆ ಹಾಕುತ್ತಿದೆ. ಪ್ರತಿ ಆರು ವರ್ಷಗಳಿಗೊಮ್ಮೆ ಸ್ಮಾರ್ಟ್ ಮೀಟರ್ ಬದಲಾಯಿಸಬೇಕು. ಇದರಿಂದಾಗಿ ರಾಜ್ಯಗಳು ಮತ್ತು ಗ್ರಾಹಕರ ಮೇಲೆ ಸುಮಾರು ಎರಡು ಲಕ್ಷ ಕೋಟಿ ರೂಪಾಯಿಗಳ ಬೃಹತ್ ವೆಚ್ಚ ಬೀಳುತ್ತದೆ. ಇದೇ ವೇಳೆ ವಿದ್ಯುತ್ ಕ್ಷೇತ್ರದ ದೈತ್ಯ ಕಂಪನಿಗಳ ಬೊಕ್ಕಸ ಭರ್ತಿಯಾಗಲಿದೆ. ಪ್ರಿಪೇಯ್ಡ್ ಮೀಟರ್ ಶೂನ್ಯವನ್ನು ತಲುಪಿದರೆ, ಅದನ್ನು ತಕ್ಷಣವೇ ನಿಷ್ಕ್ರಿಯಗೊಳಿಸಬೇಕು. ಮರು–ಸಂಪರ್ಕಕ್ಕೆ 500 ಶುಲ್ಕ ವಿಧಿಸಲಾಗುತ್ತದೆ.



ಬೇಡಿಕೆ ಹೆಚ್ಚಾದಾಗ ದರ ಹೆಚ್ಚಳ

ಮುಖ್ಯವಾಗಿ ಬೇಸಿಗೆ ಮತ್ತು ಬರಗಾಲದ ಸಮಯದಲ್ಲಿ ಬೆಳೆಗಳಿಗೆ ನೀರುಣಿಸುವ ಅಗತ್ಯವಿರುವಾಗ ಇಂತಹ ಪರಿಸ್ಥಿತಿಯು ಸಂಭವಿಸಿದರೆ ಅದು ಹೇಗಿರುತ್ತದೆ ಎಂದು ಊಹಿಸಿ. ಈ ನೀತಿಯನ್ನು ಜಾರಿಗೆ ತಂದ ಕ್ಯಾಲಿಫೋರ್ನಿಯಾದಲ್ಲಿ ಘನೀಕರಿಸುವ ಚಳಿಗಾಲದ ಸಮಯದಲ್ಲಿ, ಹೀಟರ್‌ಗಳು ಅಗತ್ಯವಿದ್ದಾಗ ಕಂಪನಿಗಳು ಸಾರ್ವಜನಿಕರಿಗೆ ವಿದ್ಯುತ್ ಸರಬರಾಜು ಮಾಡಲು ನಿರಾಕರಿಸಿದವು. ದರ ಹೆಚ್ಚಿಸಿ ಹೆಚ್ಚುವರಿ ಹಣ ನೀಡಿದವರಿಗೆ ಮಾತ್ರ ವಿದ್ಯುತ್ ನೀಡಲಾಗಿದೆ. ಕೇವಲ ಲಾಭದ ಉದ್ದೇಶದಿಂದ ನಡೆಸುವ ಕಂಪನಿಗಳು ಜನರ ಸಮಸ್ಯೆಗಳ ಬಗ್ಗೆ ಕನಿಷ್ಠ ಕಾಳಜಿಯನ್ನೂ ವಹಿಸುವುದಿಲ್ಲ. ಇದು ಗಂಭೀರ ಪರಿಸ್ಥಿತಿಗಳಿಗೆ ಕಾರಣವಾಗಬಹುದು. ಗ್ರಾಹಕರು, ಅನಿವಾರ್ಯವಾಗಿ, ಹೆಚ್ಚುವರಿ ಪಾವತಿಸುತ್ತಾರೆ. ಈ ನೀತಿಗಳು ಮುಂದುವರಿದರೆ ನಮ್ಮ ದೇಶದಲ್ಲಿ ಇಂತಹ ಪರಿಸ್ಥಿತಿ ಬರುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಇಲ್ಲ. 2025ರ ಏಪ್ರಿಲ್ ವೇಳೆಗೆ ಎಲ್ಲಾ ಕೃಷಿ ಫೀಡರ್‌ಗಳನ್ನು ಪ್ರತ್ಯೇಕಿಸುವುದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಗುರಿಯಾಗಿದೆ. ಸಮಯಕ್ಕೆ ಸರಿಯಾಗಿ ಈ ಗುರಿ ಮುಟ್ಟುವಂತೆ ಒತ್ತಡ ಹಾಕಲಾಗುತ್ತಿದೆ. ಅವರ ಒತ್ತಡಗಳಿಗೆ ಮಣಿಯದ ರಾಜ್ಯಗಳಿಗೆ ಹಂಚಿಕೆ ಮತ್ತು ಸಬ್ಸಿಡಿಗಳಲ್ಲಿ ಕಡಿತ ಮಾಡುತ್ತದೆ.

ಈ ನೀತಿಗಳಿಂದ ರೈತರ ಗತಿಯೇನು?

ಎಲ್ಲಾ ಕೊಳವೆ ಬಾವಿಗಳು, ನೀರಾವರಿ ಪಂಪ್ ಸೆಟ್ ಗಳು ಸ್ಮಾರ್ಟ್ ಮೀಟರ್‌ಗಳೊಂದಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಮೀಟರ್ ಅನ್ನು ಬದಲಿಸಲು ಪ್ರತಿ ಆರು ವರ್ಷಗಳಿಗೊಮ್ಮೆ 15,000 ರೂ.ಗಳ ಮರುಕಳಿಸುವ ವೆಚ್ಚವನ್ನು ಗ್ರಾಹಕರು ಭರಿಸಬೇಕಾಗುತ್ತದೆ. ಇದು ರೈತರಿಗೆ ಮತ್ತು ಬಡವರಿಗೆ ಉಚಿತ ವಿದ್ಯುತ್ ಅನ್ನು ಶಾಶ್ವತವಾಗಿ ರದ್ದುಗೊಳಿಸುತ್ತದೆ.

ಆಂಧ್ರದಲ್ಲಿ ನೇರ ನಗದು ವರ್ಗಾವಣೆ ಜಾರಿಯಾಗಿದೆ

ಈಗಾಗಲೇ ಆಂಧ್ರಪ್ರದೇಶ ಸರ್ಕಾರವು ನೇರ ನಗದು ವರ್ಗಾವಣೆ ಯೋಜನೆ ಜಾರಿಗೆ ತಂದಿದೆ. ಪ್ರಸ್ತುತ ಇದು ತಾತ್ಕಾಲಿಕ ಪ್ರಲೋಭನೆಗಳು ಮಾತ್ರ. 3 ಎಚ್‌ಪಿ ಪಂಪ್‌ಗೆ ತಿಂಗಳಿಗೆ ರೂ. 7,500 ಪಡೆಯುತ್ತಿದ್ದಾರೆ ಎಂದು ಆಂಧ್ರದ ವಿಜಯನಗರದ ರೈತರು ಹೇಳುತ್ತಾರೆ. ಆದರೆ, ರೈತರು ಆತಂಕ ಪಡುವ ಅಗತ್ಯವಿಲ್ಲ, ರೈತರ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುವುದು ಎಂದು ಅಲ್ಲಿನ ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, ಇದಕ್ಕೆ ಏನು ಗ್ಯಾರಂಟಿ? ಹಾಗಾಗಿ, ಈ ನೀತಿಯು ಕೃಷಿ ಮತ್ತು ಆಹಾರ ಭದ್ರತೆಗೆ ಮರಣಶಾಸನವಾಗಿದೆ. ಇದರ ವಿರುದ್ಧ ಎಲ್ಲ ಸಮುದಾಯಗಳು ಒಗ್ಗೂಡಬೇಕು.

ಕೇರಳದ ಮಾದರಿ

ಕೇರಳದ LDF ಸರ್ಕಾರವು TOTEX (ಒಟ್ಟು ವೆಚ್ಚದ ಮಾದರಿ) ಮಾದರಿಯನ್ನು ಪರಿಚಯಿಸಿದೆ, ಇದು ಸ್ಮಾರ್ಟ್ ಮೀಟರ್‌ಗಳನ್ನು ತಡೆಗಟ್ಟುವ ಮಾರ್ಗವಾಗಿದೆ. ರೈತರು ಮತ್ತು ಗ್ರಾಹಕರ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ನೀತಿಗಳನ್ನು ಅನುಮತಿಸುವುದಿಲ್ಲ ಎಂದು ಕೇರಳ ಸರ್ಕಾರ ನಿರ್ಧರಿಸಿದೆ. ಸಿಐಟಿಯು ಮತ್ತು ಎಲೆಕ್ಟ್ರಿಸಿಟಿ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾವು ಕೇಂದ್ರ ಸರ್ಕಾರವು ನಿಗದಿಪಡಿಸಿದ ಮಾರ್ಗಸೂಚಿಯನ್ನು ರಹಸ್ಯವಾಗಿ ಮುಂದುವರಿಸಲು ಪ್ರಯತ್ನಿಸಿದ ಉನ್ನತ ಅಧಿಕಾರಿಗಳ ಬುಕಿಂಗ್ ಮತ್ತು ಕೇಂದ್ರ ಸರ್ಕಾರದ ವಂಚನೆಯ ಪ್ರಯತ್ನವನ್ನು ಸಮಯೋಚಿತವಾಗಿ ಬಹಿರಂಗಪಡಿಸಿತು. ಇಂತಹ ಪ್ರತಿರೋಧಗಳು ಇನ್ನಷ್ಟು ಬರಬೇಕಿದೆ. ವಿಧ್ವಂಸಕತೆ ಮತ್ತು ಮೋಸದ ಕಾರ್ಪೊರೇಟ್ ಶೋಷಣೆಯ ವಿರುದ್ಧ ಎಲ್ಲರೂ ಒಂದಾಗಬೇಕು.

(ಲೇಖಕರು: ಎಐಕೆಎಸ್ ರಾಷ್ಟ್ರೀಯ ಕಾರ್ಯದರ್ಶಿ)

ಪ್ರೀತಿ–ಸಹಬಾಳ್ವೆಯ ಯಾತ್ರೆ

ಪುಟ 3 ರಿಂದ

ಕರ್ನಾಟಕದಲ್ಲಿ ಈ ಯಾತ್ರೆಯು ಡಿಸೆಂಬರ್ ಒಂದರಂದು ಪ್ರಾರಂಭವಾಗಿ ಡಿಸೆಂಬರ್ ಏಳಕ್ಕೆ ಮುಕ್ತಾಯಗೊಳ್ಳಲಿದೆ. ರಾಜ್ಯದ ಎರಡು ಮುಖ್ಯ ಜಿಲ್ಲೆಗಳಾದ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಯಾತ್ರೆಯು ಏಳು ದಿನಗಳ ಕಾಲ ನಡೆದು, ದಿನಾಂಕ ಏಳರಂದು ಕರ್ನಾಟಕದ ಗಡಿ ಜಿಲ್ಲೆಯಾದ ಕಾಸರಗೂಡಿನಲ್ಲಿ ಸಮಾಪ್ತಿಗೊಳ್ಳಲಿದೆ.

ಈ ಏಳು ದಿನಗಳಲ್ಲಿ ಈ ಯಾತ್ರೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಹೆಸರಾಂತ ಸಾಹಿತಿಗಳ, ಸಮಾಜ ಚಿಂತನೆಕಾರರ, ಸ್ವಾತಂತ್ರ್ಯ ಹೋರಾಟಗಾರರ, ಸರ್ವಧರ್ಮ ಸಮನ್ವಯ ಕೇಂದ್ರಗಳ ಪ್ರಮುಖ ಸ್ಥಳಗಳಿಗೆ ಭೇಟಿ ನೀಡುವುದು, ಆ ಸ್ಥಳಗಳ ಅಧ್ಯಯನ ಮಾಡುವುದು ವಿಶಿಷ್ಟತೆಗಳನ್ನು ಗುರುತಿಸಿ ಮಹತ್ವವನ್ನು ಅರಿಯುವುದು, ಅಲ್ಲಿನ ಜನರ ಆಹಾರ ಮತ್ತು ಸಾಂಸ್ಕೃತಿಕ ನಡವಳಿಕೆಗಳಿಗೆ ನಮ್ಮನ್ನು ನಾವು ಒಗ್ಗಿಸಿಕೊಳ್ಳುವುದು, ಮುಂತಾದ ವಿಶಿಷ್ಟ ಕ್ರಿಯೆಗಳನ್ನು ನಡೆಸುತ್ತದೆ.

ಕರ್ನಾಟಕ ರಾಜ್ಯದ ಕಾಲು ನಡಿಗೆ ಯಾತ್ರೆಯಲ್ಲಿ ಭಾಗವಹಿಸುವ ಪ್ರಮುಖ ಸಂಘಟನೆಗಳು:

ಇಪ್ಟಾ ಕರ್ನಾಟಕ, ಸಮುದಾಯ ಬೆಂಗಳೂರು, ರಾಗಿ ಕಣ–ದೇಸೀ ಸಂಸ್ಥೆ, ಗಾಂಧೀ ಪ್ರತಿಷ್ಠಾನ, ಎಡ–ಪ್ರಗತಿಪರ ರೈತ–ಕಾರ್ಮಿಕ ಸಂಘಟನೆಗಳು, ಎಡ–ಪ್ರಗತಿಪರ ಪಕ್ಷಗಳ ಪ್ರಮುಖರು, ನೇತಾರರು ಮತ್ತು ಜನ ಸಾಮಾನ್ಯ ಆತ್ಮೀಯರು, ಬಂಧುಗಳು.

ಈಗ ಹೊರ ಬಂದಿರುವ ಹೆಣ್ಣು ಭ್ರೂಣಗಳ ಹತ್ಯೆ ಪ್ರಕರಣ ಬೆಚ್ಚಿ ಬೀಳಿಸುತ್ತಿದೆ. ೯೦೦ ಕ್ಕೂ ಮೀರಿದ ಇಂತಹ ಹತ್ಯೆಗಳು ನಡೆದದ್ದಾದರೂ ಹೇಗೆ? ಆಡಳಿತಕ್ಕೆ ಸುಳಿವಿರಲಿಲ್ಲವೇ ಅಥವಾ ಶಾಮೀಲಾಗಿತ್ತೇ? ಬಗೆದಷ್ಟೂ ಬಿಚ್ಚಿಕೊಳ್ಳುವ ಭೀಕರ ಜಾಲ ಇಲ್ಲದೆ.ಹೆಣ್ಣು ಭ್ರೂಣ ಹತ್ಯೆಯ ಕ್ರೂರ ಮುಖಗಳು ಅದೆಷ್ಟು?

ಹೆಣ್ಣು ಭ್ರೂಣ ಹತ್ಯೆಯ ಕರಾಳ ಮುಖಗಳು ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಲಿ...

ಆರ್. ರಾಮಕೃಷ್ಣ

ಮಂಡ್ಯ, ಮೈಸೂರು, ಬೆಂಗಳೂರು, ದಾವಣಗೆರೆ ಮುಂತಾದ ಕಡೆಗಳಲ್ಲಿ ತನ್ನ ಜಾಲವನ್ನು ಹೊಂದಿರುವ ತಂಡವೊಂದು ಕಳೆದ ಮೂರು ವರ್ಷಗಳಲ್ಲಿ ಸುಮಾರು 900 ಕ್ಕೂ ಹೆಚ್ಚು ಹೆಣ್ಣು ಭ್ರೂಣ ಹತ್ಯೆ ನಡೆಸಿರುವ ಅಘಾತಕಾರಿ ಅಪರಾಧ ಪ್ರಕರಣವೊಂದು ರಾಜ್ಯದಲ್ಲಿ ಪತ್ತೆಯಾಗಿದೆ. ಈ ತಂಡವು ಕಳೆದ ಮೂರು ತಿಂಗಳ ಅವಧಿಯಲ್ಲಿ ಸುಮಾರು 242 ಹೆಣ್ಣು ಭ್ರೂಣಗಳನ್ನು ಹತ್ಯೆ ಮಾಡಿರುವುದಾಗಿಯೂ ತಿಳಿದು ಬಂದಿದೆ. ರಾಜ್ಯ ಸರಕಾರವು ಈ ಪ್ರಕರಣದಲ್ಲಿ ಇಲ್ಲಿಯವರೆಗೆ 9 ಮಂದಿಯನ್ನು ಬಂಧಿಸಿ, ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಿದ್ದು ಪ್ರಕರಣದ ಕುರಿತು ಸಿ.ಐ.ಡಿ. ತನಿಖೆಗೆ ಆದೇಶಿರುವುದು ಸಹ ವರದಿಯಾಗಿದೆ. ಮಂಡ್ಯ ಜಿಲ್ಲೆಯ ಹಳ್ಳಿಯೊಂದರಲ್ಲಿ ಗದ್ದೆಗಳ ನಡುವಿನ ಆಲೆಮನೆಯೊಂದರಲ್ಲಿ ಭ್ರೂಣದ ಲಿಂಗ ಪತ್ತೆ ಸಾಧನ ಸಲಕರಣೆಗಳನ್ನು ಇಟ್ಟುಕೊಂಡು ಪರೀಕ್ಷೆಗಳನ್ನು ನಡೆಸಿ ನಂತರ ಗರ್ಭಿಣಿಯರನ್ನು ಮೈಸೂರಿನ ಮಾತಾ ಎಂಬ ಆಸ್ಪತ್ರೆಯೊಂದಕ್ಕೆ ಕಳಿಸಿ ಅಲ್ಲಿ ಭ್ರೂಣ ಹತ್ಯೆಗಳನ್ನು ನಡೆಸುತ್ತಿದ್ದುದನ್ನು ಪತ್ತೆ ಹಚ್ಚಲಾಗಿದೆ.

ಅಪರಾಧಿಗಳ ತಂಡವು ಕೇವಲ ಮೇಲೆ ಹೇಳಲಾದ ಜಿಲ್ಲೆಗಳಲ್ಲಿ ಮಾತ್ರವೇ ಕೃತ್ಯವನ್ನು ಎಸಗಿದೆಯಾ ಅಥವಾ ಇನ್ನಷ್ಟು ದೊಡ್ಡ ಜಾಲವನ್ನು ಹೊಂದಿದೆಯಾ ಎಂಬುದೆಲ್ಲಾ ಮುಂದಿನ ತನಿಖೆಯಲ್ಲಿ ತಿಳಿದು ಬರಬೇಕಾದ ವಿಷಯ. ಆದರೆ ಒಂದು ಮಾತ್ರ ನಿಜ. ಸರಕಾರದ ನೀತಿ-ನಿಯಮಗಳು ಏನೇ ಇದ್ದರು, ಭ್ರೂಣದ ಲಿಂಗವನ್ನು ಪತ್ತೆ ಹಚ್ಚುವ ಕೃತ್ಯವು ಕಾನೂನು ಪ್ರಕಾರ ಅಪರಾಧ ಎಂದಾಗಿದ್ದರೂ ಸಹ ರಾಜ್ಯದಲ್ಲಿ ಮತ್ತು ದೇಶದಲ್ಲಿ ಹೆಣ್ಣು ಮಗುವನ್ನು ಭ್ರೂಣದ ಹಂತದಲ್ಲೇ ಕೊಲ್ಲುವ ಭ್ರೂಣ ಹತ್ಯೆಯು ವ್ಯಾಪಕವಾಗಿ ನಡೆಯುತ್ತಿರುವುದಂತೂ ವಾಸ್ತವಿಕ ಸತ್ಯವಾಗಿದೆ. ಇದು ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂದರೆ ಸಮಾಜದಲ್ಲಿ ಗಂಡು ಮತ್ತು ಹೆಣ್ಣುಗಳ ಅನುಪಾತದಲ್ಲಿ ಬಾರಿ ಅಂತರವನ್ನು ಕಂದಕವನ್ನು ಸೃಷ್ಟಿ ಮಾಡಿ, ಹೊಸ ಹೊಸ ಸಾಮಾಜಿಕ ಬಿಕ್ಕಟ್ಟುಗಳು ರೂಪುಗೊಳ್ಳಲು ಕಾರಣವಾಗಿದೆ.

ಇತ್ತೀಚೆಗೆ ಮದುವೆಯ ವಯಸ್ಸಿನ ಗಂಡುಮಕ್ಕಳಿಗೆ ಮದುವೆಯಾಗಲು ಹೆಣ್ಣುಗಳೇ ಸಿಗುತ್ತಿಲ್ಲ ಎಂಬ ಮಾತುಗಳು ಸಾಕಷ್ಟು ಕೇಳಿ ಬರುತ್ತಿವೆ. ಅದರಲ್ಲೂ ಕೃಷಿಕ ಯುವಕರಿಗೆ, ಪೌರೋಹಿತ್ಯ ವೃತ್ತಿಯವರಿಗೆ ಹೆಣ್ಣುಗಳು ಸಿಗುತ್ತಿಲ್ಲ ಎಂಬ ಮಾತುಗಳು ಕೇಳಿ ಬರುತ್ತವೆ. ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ, ಉದ್ಯೋಗವನ್ನು ಪಡೆಯುತ್ತಿರುವುದರಿಂದ ನಿಶ್ಚಿತವಾದ ಖಚಿತ ಆದಾಯವಿಲ್ಲದ ಕೃಷಿಕರು, ಪುರೋಹಿತರನ್ನು ಮದುವೆಯಾಗಲು ನಿರಾಕರಿಸುತ್ತಿದ್ದಾರೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಇದು ಭಾಗಶಃ ಮಾತ್ರ ಸತ್ಯ ಅನಿಸುತ್ತದೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಲಿಂಗತಾರತಮ್ಯದ ಕಾರಣಗಳಿಂದ ಸಮಾಜದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕುಸಿಯುತ್ತಿರುವುದು ಸಹ ಈ ಸಮಸ್ಯೆಗೆ ಕಾರಣವಾಗಿರುವಂತೆ ಕಾಣುತ್ತದೆ. ಇವೆಲ್ಲವೂ ಸಾಕಷ್ಟು ಪರಿಶೀಲನೆ ಮತ್ತು ಅಧ್ಯಯನ ಮಾಡಿ ಅಂತಿಮ ತೀರ್ಮಾನಕ್ಕೆ ಬರಬೇಕಾದ ವಿಚಾರಗಳಾಗಿವೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯನ್ನು ಸಾಮಾಜಿಕವಾಗಿ ಕಳಂಕದಾಯಕವಾದ ಉದ್ದೇಶಕ್ಕೆ ಬಳಸುತ್ತಿರುವ ಹೆಣ್ಣು ಭ್ರೂಣ ಹತ್ಯೆಯ ಈ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳಲು ನಮ್ಮ ಸಮಾಜವನ್ನು ಆಳುತ್ತಿರುವ ಲಿಂಗ ತಾರತಮ್ಯದ ಸಾಮಾಜಿಕ ಮೌಲ್ಯಗಳನ್ನು ಸರಿಯಾಗಿ ಅರಿತುಕೊಳ್ಳಬೇಕಿದೆ.

ಒಂದು ಉದಾಹರಣೆಯನ್ನು ಗಮನಿಸೋಣ. ಅದು ಟಿ.ವಿ.ವಾಹಿನಿಯೊಂದರಲ್ಲಿ ಪ್ರಸಾರವಾಗುತ್ತಿದ್ದ ಹಿಂದಿ ಧಾರಾವಾಹಿ. ರಾಜರ ಕಾಲದ ಕತೆ ಅದು. ರಾಜ್ಯದ ಮಹಾರಾಣಿ ಯಾವುದೋ ಗುಡ್ಡಗಾಡು ಪ್ರದೇಶದಲ್ಲಿ ಮಂತ್ರಿ, ಪರಿವಾರದೊಂದಿಗೆ ಪ್ರಯಾಣ ಮಾಡುತ್ತಿದ್ದಾಳೆ. ಆ ಮಹಾರಾಣಿಯ ಬಳಿ ತನ್ನ ಇಬ್ಬರು ಮಕ್ಕಳಿದ್ದಾರೆ. ಒಂದು ಗಂಡು ಮತ್ತು ಇನ್ನೊಂದು ಹೆಣ್ಣು ಮಗು. ಕಡಿದಾದ ದಾರಿಯಲ್ಲಿ ರಥವು ಸಾಗುವಾಗ ಆಕಸ್ಮಿಕವಾಗಿ ಅಪಘಾತವಾಗುತ್ತದೆ. ಮಹಾರಾಣಿ ತನ್ನ ಇಬ್ಬರು ಮಕ್ಕಳೊಂದಿಗೆ ಬೆಟ್ಟದ ಮೇಲಿನಿಂದ ಜಾರಿ ಕಮರಿಯೊಂದಕ್ಕೆ ಬೀಳುತ್ತಾಳೆ. ಕಮರಿಯೊಳಕ್ಕೆ ಪೂರ್ಣ ಜಾರಿಬೀಳದೆ, ನಡುವೆ ಯಾವುದೋ ಗಿಡ, ಕಲ್ಲು ಬಂಡೆಯ ಆಸರೆ ಪಡೆದು ಸಾವರಿಸಿಕೊಂಡು ನಿಲ್ಲುತ್ತಾಳೆ. ಬೆಟ್ಟದ ಮೇಲಿನ ಹಂತದಲ್ಲಿದ್ದ ಮಂತ್ರಿಯು ಮಹಾರಾಣಿಯು ಮೇಲೆ ಹತ್ತಿ ಬರಲು ಸಹಾಯಕವಾಗಿ ಹಗ್ಗವನ್ನು ಇಳಿ ಬಿಡುತ್ತಾನೆ. ಹಗ್ಗ ಹಿಡಿದು ರಾಣಿ ಮೇಲೆರಬೇಕು. ಎಡಗೈಲ್ಲಿ ಒಂದು ಮಗು, ಬಲಗೈಯ್ಯಲ್ಲಿ ಒಂದು ಮಗು ಇರುವ ರಾಣಿ ಹಗ್ಗ ಹಿಡಿದುಕೊಳ್ಳುವುದು ಹೇಗೆ? ಆಗ ಮಂತ್ರಿ ರಾಣಿಗೆ ಸಲಹೆ ನೀಡುತ್ತಾನೆ. ಗಂಡು ಮಗು ಬೆಳೆದು ದೊಡ್ಡವನಾಗಿ ರಾಜ್ಯವನ್ನು ಆಳುವವನು. ಆದ್ದರಿಂದ ಗಂಡುಮಗುವನ್ನು ಮಾತ್ರ ಹಿಡಿದುಕೊಂಡು ಹೆಣ್ಣು ಮಗುವನ್ನು ಜಾರುವ ಪ್ರಪಾತದ ಹಾದಿಯಲ್ಲಿಯೇ ಬಿಟ್ಟು ಮೇಲೇರಬೇಕೆಂಬುದು ಮಂತ್ರಿಯ ಸಲಹೆ. ಮಹಾರಾಣಿ ಸಲಹೆಯನ್ನು ಒಪ್ಪಿ ಹಾಗೆಯೇ ಮಾಡುತ್ತಾಳೆ. ವಾಹ್ ಎಂತಹ ಅಮೋಘ ಸಂದೇಶ.!!

ಗಂಡು ಮಗುವಿನಿಂದಲೇ ತಂದೆ-ತಾಯಿಗಳಿಗೆ ಮೋಕ್ಷವೆಂದು, ಹೀಗಾಗಿ ಗಂಡು ಮಗುವೇ ಬೇಕೆಂದು ಪುತ್ರ ಕಾಮೇಷ್ಠಿ ಯಾಗವನ್ನು ನಡೆಸುತ್ತಿದ್ದ ಪರಂಪರೆಯ ದೇಶ ನಮ್ಮದು. ಇಪ್ಪತ್ತೊಂದನೇ ಶತಮಾನದಲ್ಲಿ ಎರಡು ದಶಕಗಳನ್ನು ಕಳೆದು ಮೂರನೇ ದಶಕದಲ್ಲಿದ್ದರೂ ಕೂಡ ಹೆಣ್ಣು ಮಗುವಿನ ಕುರಿತ ಸಂಪ್ರದಾಯಿಕ ಆಲೋಚನಾ ಕ್ರಮಗಳು ಬದಲಾಗದೇ ಜಡಗಟ್ಟಿರುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ.

ಅಸಮತೋಲನ

2001ರ ಅಧಿಕೃತ ಅಂಕಿ-ಸಂಖ್ಯೆಗಳಂತೆ ಭಾರತದಲ್ಲಿ 0 ಯಿಂದ 6 ವರ್ಷ ವಯೋಮಾನದ ಜನಸಂಖ್ಯೆ ವಿವರ ಹೀಗಿದೆ.

ಶಿಶುಗಳು ಮತ್ತು ಮಕ್ಕಳು
ಒಟ್ಟು 15.80 ಕೋಟಿ
ಗಂಡು ಶಿಶು ಮತ್ತು ಮಕ್ಕಳು
8.20 ಕೋಟಿ
ಹೆಣ್ಣು ಶಿಶು ಮತ್ತು ಮಕ್ಕಳು
7.60 ಕೋಟಿ

ಕಡಿಮೆಯಾಗಿರುವ ಹೆಣ್ಣು ಮಕ್ಕಳು ಮತ್ತು ಬಾಲಕಿಯರ ಸಂಖ್ಯೆ 60 ಲಕ್ಷ.!!



ಮತ್ತೊಂದು ಬಗೆಯ ಅಂಕಿ ಸಂಖ್ಯೆಗಳನ್ನು ನೋಡೋಣ.

ಅಧಿಕೃತ ಜನಗಣತಿ ಪ್ರಕಾರ ಭಾರತದಲ್ಲಿ 1981 ರಲ್ಲಿ ಪ್ರತಿ ಸಾವಿರ ಗಂಡು ಮಕ್ಕಳಿಗೆ 962 ಹೆಣ್ಣು ಮಕ್ಕಳು ಇದ್ದರು. 1991 ರಲ್ಲಿ ಈ ಅನುಪಾತವು ಇನ್ನಷ್ಟು ಕುಸಿದು 945 ಕ್ಕೆ ಇಳಿದಿತ್ತು. (ಕರ್ನಾಟಕದಲ್ಲಿ 985) 2001 ರಲ್ಲಿ ಇನ್ನಷ್ಟು ಆತಂಕಕಾರಿಯಾಗಿ ಈ ಪ್ರಮಾಣವು 934 ಕ್ಕೆ(ಕರ್ನಾಟಕದಲ್ಲಿ 973) ಇಳಿದಿತ್ತು. (ಈ ಅಂಕಿ-ಸಂಖ್ಯೆಗಳ ಮಾಹಿತಿ ಮೂಲ: 'ಚಿವುಟದಿರಿ ಚಿಗುರ', ಪುಸ್ತಕ, ಕ್ರಿಯಾ ಪ್ರಕಾಶನ)

ಪಂಜಾಬ್, ಹರ‍್ಯಾಣ, ಹಿಮಾಚಲ ಪ್ರದೇಶಗಳಂತಹ ಆರ್ಥಿಕವಾಗಿ ಒಂದಷ್ಟು ಮುಂದುವರಿದ ರಾಜ್ಯಗಳಲ್ಲಿ ಹೆಣ್ಣು ಮಕ್ಕಳ ಅನುಪಾತವು ತೀವ್ರವಾಗಿ ಕುಸಿದದ್ದಕ್ಕೆ ದೇಶವು ಸಾಕ್ಷಿಯಾಯಿತು.

ದೇಶದಲ್ಲಿ 2017-19 ಅವಧಿಯ ಹೊತ್ತಿಗೆ ದೇಶದ ಹೆಣ್ಣು ಮಕ್ಕಳ ಅನುಪಾತವು ಮತ್ತಷ್ಟು ಕುಸಿದು ಹುಟ್ಟುವ ಹೆಣ್ಣು ಮಕ್ಕಳ ಪ್ರಮಾಣವು 904 ಕ್ಕೆ ತಲುಪಿತ್ತು ಎಂಬ ಅಘಾತಕಾರಿ ಅಂಶಗಳನ್ನು ನೋಡಿದರೆ ನಿಜಕ್ಕೂ ಆತಂಕವಾಗುತ್ತದೆ. ಭ್ರೂಣ ಹತ್ಯೆಯ ಅಪರಾಧಿಗಳು ಯಾರೂ ತಪ್ಪಿಸಿಕೊಳ್ಳದಂತೆ ಕಠಿಣ ಶಿಕ್ಷೆಯನ್ನು ವಿಧಿಸುವುದು ಇಂತಹ ಇತರ ದುಷ್ಟಜಾಲಗಳಿಗೆ ಒಂದು ಎಚ್ಚರಿಕೆಯಾಗಬೇಕು. ಇದು ಕಾನೂನು ಕ್ರಮ. ಆದರೆ ಅದರ ಜೊತೆಗೆ ಹೆಣ್ಣು ಭ್ರೂಣ ಹತ್ಯೆಯ ಮೂಲ ಕಾರಣಗಳನ್ನೂ ಪರಿಶೀಲಿಸಿ ತೊಡಕುಗಳನ್ನು ನಿವಾರಿಸುವ ಕೆಲಸವೂ ಆಗಬೇಕಾಗುತ್ತದೆ.

ಅವ್ಯಾಹತ ಹೆಣ್ಣು ಭ್ರೂಣ ಹತ್ಯೆ ಕಠಿಣ ಕ್ರಮ ವಹಿಸಬೇಕು

೯೦೦ ಕ್ಕೂ ಹೆಚ್ಚು ಹೆಣ್ಣು ಭ್ರೂಣ ಹತ್ಯೆಗಳನ್ನು ನಡೆಸಿದ ಇಂಥಹ ಬರ್ಬರ ಹತ್ಯಾಕಾಂಡಗಳ ಹಗರಣವು ವೈದ್ಯರು, ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಪೋಷಕರ ಶಾಮೀಲಾತಿ ಇಲ್ಲದೇ ನಡೆಯಲು ಸಾಧ್ಯವೇ ಇಲ್ಲ ಎಂಬುದು ಸ್ಪಷ್ಟ. ಮತ್ತು ರಾಜ್ಯದಲ್ಲಿಯೂ ದೇಶದಲ್ಲಿಯೂ ಇಂತಹ ದುಷ್ಟಜಾಲಗಳು ಬಹಳ ದೀರ್ಘಕಾಲದಿಂದಲೂ ಕಾರ್ಯಾಚರಿಸುತ್ತಿರುವುದು ನಿಚ್ಚಳವಾಗಿದೆ. ಆದರೆ ಈ ಹಗರಣಗಳ ಆಳ-ಅಗಲಗಳನ್ನು ಸರಿಯಾಗಿ ಗುರುತಿಸಿ ತ್ವರಿತವಾದ ಮತ್ತು ದಕ್ಷವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ನಮ್ಮ ಆಡಳಿತ ವ್ಯವಸ್ಥೆ ವಿಫಲವಾಗಿರುವುದು ಸಹ ಸ್ಪಷ್ಟವಾಗಿದೆ. ಈಗಲಾದರೂ ಸಹ ಹೆಣ್ಣು ಭ್ರೂಣ ಹತ್ಯೆಗಳನ್ನು ತಡೆಯುವಲ್ಲಿ ವಿಫಲವಾದ ಆಡಳಿತವನ್ನು ಹೊಣೆಗಾರರನ್ನಾಗಿಸಬೇಕು. ಹೆಣ್ಣು ಭ್ರೂಣ ಹತ್ಯೆ ಅವ್ಯಾಹತವಾಗಿ ನಡೆಯುವುದಕ್ಕೆ ಕಾರಣವಾದವರ ಮೇಲೆ ಕಠಿಣ ಕ್ರಮ ವಹಿಸಬೇಕು.



ಮೂಲ ಕಾರಣಗಳು

ನಮ್ಮ ಸಮಾಜದಲ್ಲಿ ಶಿಶುವಿನ ಹಂತದಲ್ಲೇ ಲಿಂಗ ತಾರತಮ್ಯಗಳು ಆರಂಭವಾಗುತ್ತವೆ. ಗಂಡು ಮಕ್ಕಳಿಗೆ ಸಿಗುವ ಆರೈಕೆ, ಪೌಷ್ಠಿಕ ಆಹಾರ ಎಷ್ಟೋ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳಿಗೆ ಸಿಗುವುದಿಲ್ಲ. ಹೀಗಾಗಿ ಅಪೌಷ್ಟಿಕತೆಯಿಂದ ನರಳುವ ಹೆಣ್ಣು ಶಿಶುಗಳು ಎರಡು ವರ್ಷ ತುಂಬುವ ಮೊದಲೇ ಸಾಯುವ ಪ್ರಮಾಣವು ಗಂಡುಮಕ್ಕಳ ಸಾವಿಗಿಂತಲೂ ಜಾಸ್ತಿ ಇದೆ. ಗರ್ಭಿಣಿಯರು ಮತ್ತು ಬಾಣಂತಿಯರನ್ನೂ ಅಪೌಷ್ಟಿಕತೆ ಕಾಡುವುದರಿಂದ ಈ ಸಾವಿನ ಸಂಖ್ಯೆ ಹೆಚ್ಚಲು ಕಾರಣವಾಗುತ್ತದೆ.

ಇನ್ನು ಎಷ್ಟೋ ಕುಟುಂಬಗಳಲ್ಲಿ ಶಿಕ್ಷಣ ಕೊಡಿಸುವ ವಿಷಯದಲ್ಲಿ ತಾರತಮ್ಯ ನಡೆಯುತ್ತದೆ. ಹೆಣ್ಣು ಮಗು ಚೆನ್ನಾಗಿ ಓದಿದರೂ ಅವಕಾಶ ಮತ್ತು ಪ್ರೋತ್ಸಾಹದ ಕೊರತೆ ಇರುತ್ತದೆ. ಗಂಡು ಮಗುವಾದರೆ ಸಾಕಷ್ಟು ಹಣ ಖರ್ಚು ಮಾಡಿ 'ಒಳ್ಳೆಯ ಶಿಕ್ಷಣ' ಕೊಡಿಸಿದರೂ, ಅವನು ಮುಂದೆ ಉದ್ಯೋಗ ಹಿಡಿದು ತಮ್ಮನ್ನು ಸಾಕುತ್ತಾನೆ ಮತ್ತು ದುಡಿದು ತರುತ್ತಾನೆ ಎಂಬ ನಿರೀಕ್ಷೆಯನ್ನು ಹೆಚ್ಚಿನ ಪೋಷಕರು ಹೊಂದಿರುತ್ತಾರೆ. ನಮ್ಮ ಸಾಮಾಜಿಕ ಪದ್ಧತಿಯಲ್ಲಿ ಸಾಮಾನ್ಯವಾಗಿ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗುವ ಪದ್ಧತಿ ಇರುವುದರಿಂದ ಅವಳು ದುಡಿದು ತರುವುದಿಲ್ಲ ಮತ್ತು ತಂದೆ-ತಾಯಿಗಳನ್ನು ನೋಡಿಕೊಳ್ಳುವುದಿಲ್ಲ, ಸಾಕುವುದಿಲ್ಲ ಎಂಬ ಭಾವನೆಗಳು ಸಾಕಷ್ಟು ಕೆಲಸ ಮಾಡುತ್ತವೆ. ಮದುವೆಯಾಗುವ ವರೆಗೆ ಹೆಣ್ಣುಮಕ್ಕಳನ್ನು ಸಮಾಜದಲ್ಲಿನ ದುಷ್ಟ-ಕಾಮುಕ ಶಕ್ತಿಗಳಿಂದ ಕಾಪಾಡಿಕೊಳ್ಳುವುದು ಹೇಗೆ ಮತ್ತು ಮದುವೆಯ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ವರದಕ್ಷಿಣೆ ಕೊಡಬೇಕಾಗುತ್ತದಲ್ಲ ಎಂಬ ಚಿಂತೆಗಳು ಪೋಷಕರನ್ನು ಕಾಡುತ್ತವೆ. ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಸಮಾನವಾದ ಪಾಲು ಕೊಡಬೇಕೆಂಬ ಚಿಂತನೆಗಳು ನಮ್ಮ ಸಮಾಜದಲ್ಲಿ ತೀರಾ ಕಡಿಮೆ. ಹೆಣ್ಣು ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಿದರೆ ಅವರು ಕೂಡ ದುಡಿಯುತ್ತಾರೆ. ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆ ಇರುವ ಹೆಣ್ಣು ಮಕ್ಕಳೂ ಸಹ ತಮ್ಮ ತಂದೆ-ತಾಯಿಗಳನ್ನು ನೋಡಿಕೊಳ್ಳಲು ಸಾಧ್ಯವಿದೆ. ಆದರೆ ನಮ್ಮ ಸಮಾಜದಲ್ಲಿ ಬೇರು ಬಿಟ್ಟಿರುವ ಪುರುಷ ಪ್ರಧಾನ ಮೌಲ್ಯಗಳು ಈ ವಿಷಯಗಳಲ್ಲಿ ಅಡೆತಡೆಯಾಗಿ ನಿಲ್ಲುತ್ತವೆ.

ಈ ಹೆಣ್ಣು ಭ್ರೂಣ ಹತ್ಯೆಗಳ ವಿಷಯದಲ್ಲಿ ಅಪರಾಧಗಳನ್ನು ಎಸಗುತ್ತಿರುವ ಅಪರಾಧಿಗಳ ಜಾಲವನ್ನು ಜಾಲಾಡಿ ಹಿಡಿಯಬೇಕು. ವಿಳಂಬವಿಲ್ಲದೇ, ಕಠಿಣವಾದ ಶಿಕ್ಷೆಗೆ ಗುರಿಪಡಿಸಬೇಕು. ಎಲ್ಲಾ ಜಿಲ್ಲೆ-ತಾಲ್ಲೂಕು ಹೋಬಳಿಗಳಲ್ಲಿ ಹೆಣ್ಣು ಭ್ರೂಣ ಹತ್ಯೆಗಳ ಬಗೆಗೆ ವಿಚಕ್ಷಣೆ ನಡೆಸುವ ವ್ಯವಸ್ಥೆಯನ್ನು ರೂಪಿಸಬೇಕು. ಈ ಪ್ರಕ್ರಿಯೆಯಲ್ಲಿ ಮಹಿಳಾ ಸಂಘಟನೆಗಳು, ಸಾಮಾಜಿಕ ಕಳಕಳಿಯಿರುವ ಸಾಮಾಜಿಕ

ಪುಟ 10 ಕ್ಕೆ

ನವಕೇರಳ ಸಡಸ್
ಕೇರಳ ಮಂತ್ರಿ ಮಂಡಲ ಸೇರಿದ್ದು ಪುಟ್ಟ ಹಳ್ಳಿಯಲ್ಲಿ

ದೇಶದ ಇತಿಹಾಸದಲ್ಲೆ ಮೊತ್ತ ಮೊದಲ ಬಾರಿಗೆ ಜನರ ಬಳಿಗೆ ಬಂದ ಸಚಿವ ಸಂಪುಟಕ್ಕೆ ಕೇರಳ ರಾಜ್ಯ ಸಾಕ್ಷಿಯಾಯಿತು

ಬಾಬು ಪಿಲಾರ್



ರಾಜ್ಯದ ಉತ್ತರಭಾಗದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ಸಪ್ತ ಭಾಷೆಗಳ ಸಂಗಮದ ನಾಡು, 'ತುಳು ಕನ್ನಡ ನೆಲದ ಅಸ್ಮಿತೆಯಾದ ಕವಿ ಗೋವಿಂದ ಪೈ, ತನ್ನ ಕವಿತೆಗಳೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದ ನಾಡೋಜ ಕವಿ ಕಯ್ಯಾರ ಕಿಂಞಣ್ಣ ರೈ ಜನಿಸಿದ ಪುಣ್ಯ ನೆಲ. ಮತಸೌಹಾರ್ದತೆಗೆ ಹೆಸರಾಗಿರುವ ಶ್ರೀ ಅರಸು ಮಂಜಿಷ್ಣಾರ್ ದೈವಗಳ ನೆಲೆವೀಡು' ಆಯಿರ ಜಮಾತ್ ಆಲಿದೈವ ಕಾರಣಿಕದ ಪ್ರಚಾರ ಹೊಂದಿರುವ 'ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಪೂರ್ವಕ್ಕೆ ಹಸಿರು ಕಂಗೊಳಿಸುವ ಘಟ್ಟ ಪ್ರದೇಶಗಳನ್ನು ತಬ್ಬಿನಿಂತಿರುವ' ಅಂತೆಯೇ ಭೂಮಿಗಾಗಿ ಭೂಮಾಲಕರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ ಹುತಾತ್ಮರಾದ ಕ್ರಾಂತಿಕಾರಿ ಸಂಗಾತಿಗಳಾದ ಮಹಾಬಲ ಶೆಟ್ಟಿ, ಜನ್ನಪ್ಪ ಶೆಟ್ಟಿ, ಸುಂದರ ಶೆಟ್ಟಿ ಒಡ ಜನ್ಮತಳೆದ "ಪೈವಳಿಕೆ" ಎಂಬ ಪ್ರಶಾಂತವಾದ ನಾಡಿನಲ್ಲಿ "ನವಕೇರಳ ಸಡಸ್" ಉದ್ಘಾಟನೆಗೊಂಡ ದಿನ 2023 ನವೆಂಬರ್ 18.

ಕೇರಳ ಎಡರಂಗ ಸರಕಾರದ ಮುಖ್ಯಮಂತ್ರಿ ಹಾಗೂ ಇಪ್ಪತ್ತು ಮಂತ್ರಿಗಳಿರುವ ಪೂರ್ಣಪ್ರಮಾಣದ ಸಚಿವ ಸಂಪುಟವು ಪೈವಳಿಕೆ ಹೈಯರ್ ಸೆಕೆಂಡರಿ ಶಾಲಾ ಮೈದಾನದಲ್ಲಿ ಸೇರುವುದರೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು. ಕೇರಳ ರಾಜ್ಯದ ಎಲ್ಲಾ 140 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಿ, ಡಿಸೆಂಬರ್ 24ರಂದು ತಿರುವನಂತಪುರದಲ್ಲಿ ಈ ಯಾನವು ಸಮಾಪನಗೊಳ್ಳಲಿದೆ.

ಬಸ್ಸೊಂದರಲ್ಲಿ ಮಂತ್ರಿಗಳ ಪ್ರಯಾಣ

ಇಷ್ಟೊಂದು ಮಂತ್ರಿಗಳು ಬಳಸುವ ಕಾರುಗಳೊಂದಿಗೆ ಅವರಿಗೆ ಸಂಬಂಧ ಪಟ್ಟ ಅಧಿಕಾರಿಗಳ ಕಾರುಗಳು, ಎಸ್ಕಾರ್ಟ್ ಕಾವಲು ಪಡೆಗಳ ವಾಹನಗಳು ಸೇರಿದಂತೆ ಪಯಣ ಹೊರಟರೆ ಅದರಿಂದ ಜನಸಾಮಾನ್ಯರಿಗೆ ತೊಂದರೆ ಉಂಟಾಗುವುದೆಂಬ ಕಾರಣಕ್ಕೆ, ಎಲ್ಲರೂ ಸೇರಿ ಒಂದೇ ಬಸ್ಸಿನಲ್ಲಿ ಹೋಗುವುದಾಗಿ ತೀರ್ಮಾನಿಸಲಾಗಿತ್ತು. ಅದರಂತೆ ಕಪ್ಪು ಮಿಶ್ರಿತ ಕಂದು ಬಣ್ಣದಲ್ಲಿ ಸ್ವರ್ಣ ಗೆರೆಗಳು ಮೂಡಿರುವ ಮಂತ್ರಿಗಳನ್ನು ಹೊತ್ತು ತಂದ ಬಸ್ಸೊಂದು, ಆ ತಿಳಿಬಿಸಿಲ ಸಂಜೆಗೆ ಪೈವಳಿಕೆಗೆ ಬಂದು ತಲಪಿತು. ಆ ಬಸ್ಸು ಭಾರತ್ ಬೆನ್ಸ್ ಹೆಸರಿನದ್ದಾಗಿತ್ತು. (ಹಿಂದಿನ ದಿವಸ ಕೇರಳದ ಮಾಧ್ಯಮವೊಂದರಲ್ಲಿ ಚರ್ಚಿಸಲ್ಪಟ್ಟಿರುವ ಚೀನಾ ಬಸ್ಸ್ ಅಲ್ಲ ಎಂಬುದಕ್ಕೆ ಖಾತ್ರಿ). ಕೊಂಬು ಕಹಳೆಯೊಂದಿಗೆ ತುಳುನಾಡ ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕ ರೀತಿಯಲ್ಲಿ ಮಂತ್ರಿ ವರ್ಯರನ್ನು ಸ್ವಾಗತಿಸಲಾಯಿತು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರು ಇದರ ಕೇಂದ್ರ ಬಿಂದುವಾಗಿದ್ದರು.

ಸಚಿವ ಕೆ. ರಾಜನ್ ನೇತೃತ್ವದ ನವಕೇರಳ ಸಭಾ ತಂಡವು ವೇದಿಕೆ ಏರುವಾಗ ಕರತಾಡನಗಳ ಸುರಿಮಳೆ. 'ಕೊಂಬು ಕಹಳೆಗಳ ಮೇಳೈಕೆ' ಜೋರಾಗಿದ್ದವು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಕೇರಳದ ಸಾಂಪ್ರದಾಯಿಕ ಉಡುಪಿನಲ್ಲೇ ವೇದಿಕೆ ಏರಿದ ಮಂತ್ರಿಗಳಿಗೆ ಬಿಗುವಾದ ಭದ್ರತೆಗಳು ಕಂಡು ಬರಲಿಲ್ಲ. ಕಿಕ್ಕಿರಿದು ಸೇರಿದ ಸಭೆಯ ನಡುವಿನಿಂದಲೇ ಕೈಬೀಸುತ್ತಾ ಬಂದಿದ್ದ ಮಂತ್ರಿಗಳು ನಿಜ ಅರ್ಥದಲ್ಲಿ ಜನ ಪತಿನಿಧಿಗಳಾಗಿಯೇ ಕಂಡರು. ತುಳುನಾಡಿನ ಸಂಪ್ರದಾಯಸ್ಥ ಮದುವೆಗಳಲ್ಲಿ ಮದುಮಗನು ಧರಿಸುವಂತಹ ಪೇಟವನ್ನು ತೊಡಿಸಿ ಫಲವಸ್ತುಗಳನ್ನು ನೀಡಿ ಮಂತ್ರಿಗಳನ್ನು ಸ್ವಾಗತಿಸಲಾಯಿತು.

ಇದೊಂದು ಸರಕಾರಿ ಕಾರ್ಯಕ್ರಮವಾಗಿದ್ದರಿಂದ ಯಾವುದೇ ಪಕ್ಷದ ಬಾವುಟಗಳಿರಲಿಲ್ಲ, ಚಿಹ್ನೆಗಳಿರಲಿಲ್ಲ. ಆಡಳಿತ ಸಂಸ್ಥೆಗಳ ಅಧಿಕಾರಿಗಳು, ಸ್ಥಳೀಯ ಚುನಾಯಿತ ಸಂಸ್ಥೆಗಳ ಪ್ರತಿನಿಧಿ ಮುಖ್ಯಸ್ಥರುಗಳು ಹಾಗೂ ಸಂಸ್ಥೆಗಳು ನೇಮಿಸಿದ ನೀಲಿ ವಸ್ತ್ರಧಾರಿ ವಾಲೆಂಟಿಯರ್‌ಗಳೇ ಎಲ್ಲವನ್ನು ನಿರ್ವಹಿಸುತ್ತಿದ್ದರು. ಇಲ್ಲಿ ಜವಾಬ್ದಾರಿ ವಹಿಸಬೇಕಿದ್ದ ಸ್ಥಳೀಯ ಶಾಸಕರ ಗೈರು ಹಾಜರಿ ಎದ್ದು ಕಾಣುತಿತ್ತು. ಆದಕಾರಣ ಆ ಜವಾಬ್ದಾರಿಯನ್ನು ಬೇರೆಯವರು ಹೊರುವುದು ಅನಿವಾರ್ಯವಾಗಿತ್ತು.

ಜನರ ಅಹವಾಲುಗಳನ್ನು ಜನರ ಬಳಿಗೆ ಹೋಗಿ ತಿಳಿದುಕೊಳ್ಳಬೇಕೆಂಬ ಸರಕಾರದ ಈ ನಿರ್ಧಾರವನ್ನು ಕಾಂಗ್ರೆಸ್ ನೇತ್ರತ್ವದ ಯುಡಿಎಫ್ ವಿರೋಧಿಸಿತ್ತು. ಎಡರಂಗ ಬಲಾಢ್ಯವಲ್ಲದ ಮಂಜೇಶ್ವರ ಪ್ರದೇಶದಲ್ಲಿ ಬಾರೀ ಸಂಖ್ಯೆಯ ಜನ ಸೇರಿದ್ದಾರೆಂದರೆ, ಯುಡಿಎಫ್ ನ ನಿರ್ಧಾರವನ್ನು ಜನತೆ ಒಪ್ಪಿಕೊಂಡಿಲ್ಲ ಎಂಬುದನ್ನು ಸಾಬೀತು ಪಡಿಸಿದೆ. ಮುಖ್ಯಮಂತ್ರಿಗಳ ಬಾಯಿಂದ ಈ ಮಾತು ಬಂದಾಗ ಜೋರಾದ ಕರತಾಡನ ಕೇಳಿಬಂತು.

ರಾಜ್ಯದ ಪ್ರಗತಿಯ ಬಗ್ಗೆ ಜನರೊಂದಿಗೆ ನೇರ ಸಂವಾದ ಬೆಳೆಸುವುದು

ದೇಶದ ಬಡತನ ಸೂಚ್ಯಂಕ ಪಟ್ಟಿಯಲ್ಲಿ ಕೇರಳವು ಈಗ ಅತಿ ಕಡಿಮೆ ಅಂದರೆ, ಶೇ. 0.7 ರಷ್ಟಿದೆ. 2025 ನವೆಂಬರ ಒಂದರ ಮೊದಲು ಕೇರಳವನ್ನು ಕಡುಬಡತನ ದಾರಿದ್ರ್ಯದಿಂದ ಸಂಪೂರ್ಣವಾಗಿ ಮೇಲೆತ್ತುವುದು ಸರಕಾರದ ಗುರಿಯಾಗಿದೆ ಮತ್ತು ಪರಿಸರ ಮಾಲಿನ್ಯ ನಿರ್ಮೂಲನಗೊಳಿಸುವುದು ಈ ನವಕೇರಳ ಸಭಾ ಯಾತ್ರೆಯ ಉದ್ದೇಶವಾಗಿದೆ.

ಸರಕಾರದ ಈ ಉದ್ದೇಶಿತ ಕಾರ್ಯಗಳನ್ನು ನನಸು ಮಾಡುವುದಕ್ಕಾಗಿ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು .

600 ರೂ. ಇದ್ದ ಪಿಂಚಣಿ ಈಗ 1,600 ರೂ.

2016ರ ವರೆಗೆ ಅಧಿಕಾರದಲ್ಲಿದ್ದ ಯುಡಿಎಫ್ ಸರಕಾರವು ಕ್ಷೇಮನಿಧಿ ಪಿಂಚಣಿಯನ್ನು 18 ತಿಂಗಳಲ್ಲಿ ಬಾಕಿಯಿರಿಸಿತ್ತು. ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಆ ಪೆನ್ಶನ್ ದಾರರ ಹಣ ಸಂದಾಯ ಮಾಡಿದೆ ಮತ್ತು 600 ರೂ. ಇದ್ದ ಪಿಂಚಣಿಯನ್ನು 1,600ಕ್ಕೆ ಏರಿಸಿ, 60 ವರ್ಷಕ್ಕಿಂತ ಮೇಲ್ಪಟ್ಟ 60 ಲಕ್ಷ ಜನರನ್ನು ಫಲಾನುಭವಿಗಳಾಗಿ ಗುರುತಿಸಿದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಇಲಾಖೆಗಳೇ ನಿರ್ಣಯಿಸಿದಂತೆ ಇಂಡಿಯಾದಲ್ಲೆ ಪ್ರಥಮ ಸ್ಥಾನದಲ್ಲಿದೆ.

ರಾಜ್ಯದ ಹೆದ್ದಾರಿಗಳನ್ನು, ಮುಖ್ಯ ರಸ್ತೆಗಳನ್ನು ಸುಸಜ್ಜಿತವಾಗಿ ಅಭಿವೃದ್ದಿಗೊಳಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 66ಕ್ಕೆ ಸಂಬಂಧ ಪಟ್ಟಂತೆ ಭೂಸ್ವಾಧೀನಕ್ಕಾಗಿ 5,400ಕೋಟಿ ರೂ. ಗಳನ್ನು ಕೇರಳ ಸರಕಾರ ಒದಗಿಸಿದೆ.ಇನ್ನೂ ಅನೇಕ ರೀತಿಯ ಅಭಿವೃದ್ದಿಗಳನ್ನು ಕಂಡು ಕೇಂದ್ರವು ಕೇರಳ ರಾಜ್ಯದೊಂದಿಗೆ ದ್ವೇಷ ರಾಜಕಾರಣಕ್ಕೆ ತೊಡಗಿದೆ.

ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿದ್ದ 57,000 ಕೋಟಿ ರೂ.ಗಳನ್ನು ಕೊಡದೆ ಸತಾಯಿಸುತ್ತಿದೆ. ಅದಲ್ಲದೆ ರಾಜ್ಯಕ್ಕೆ ಸಿಗಬೇಕಾದ ಪಾಲು, ಶಾಲಾ ಬಿಸಿಯೂಟದ ರೂ. 54 ಕೋಟಿ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿ ರೂ. 137 ಕೋಟಿ. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯು.ಜಿ.ಸಿ.

ಗ್ರ್ಯಾಂಟ್ ರೂ. 750 ಕೋಟಿ. ಹೀಗೆ ವಿವಿಧ ವಿಭಾಗಗಳಿಗೆ ಕೊಡಬೇಕಾದ ಹಣಕಾಸಿನ ಪಾಲನ್ನು ಕೊಡದೆ ರಾಜ್ಯದ ಆರ್ಥಿಕ ವ್ಯವಸ್ಥೆಯ ಕತ್ತು ಹಿಸುಕುವ ಪ್ರಯತ್ನವನ್ನು ಕೇಂದ್ರವು ನಿರಂತರ ಮಾಡಿದೆ.

ಸಹಾಯ ಪಡೆಯಲೂ ಬಿಡದ ಕೇಂದ್ರ

ಕೊರೋನ ಮತ್ತು ಪ್ರಳಯ ಸಂದರ್ಭದಲ್ಲಿ ರಾಜ್ಯವು 30,000 ಕೋಟಿ ರೂ. ನಷ್ಟ ಹೊಂದಿದೆ. ಕೇಂದ್ರ ಸರಕಾರ ಇದರಲ್ಲೂ ದ್ವೇಷ ರಾಜಕಾರಣ ಮಾಡಿದೆ. ವಿದೇಶಗಳಿಂದ ಕೊಡಮಾಡಿದ್ದ ಸಹಾಯವನ್ನು ಪಡೆಯಲೂ ಬಿಡಲಿಲ್ಲ. ಬೇರೆ ರಾಜ್ಯಗಳ ಮಲಯಾಳಿಗಳಿಂದ ಆರ್ಥಿಕ ಸಹಾಯ ಪಡೆಯಲೂ ಕೇಂದ್ರವು ಅನುಮತಿ ನೀಡದೆ ದುಷ್ಟ ನೀತಿಯನ್ನು ಅನುಸರಿಸಿದೆ. ಈ ಎಲ್ಲಾ ದುರಂತಗಳಿಂದ ನಲುಗಿದ ಪುಟ್ಟ ರಾಜ್ಯ ಕೇರಳವು ಮತ್ತೆ ಎದ್ದು ನಿಲ್ಲುವಂತೆ ಮಾಡಲು ಸಹಕರಿಸಿದ ರಾಜ್ಯದ ಜನತೆಯನ್ನು ಮರೆಯುವಂತಿಲ್ಲ.

3 ಲಕ್ಷ ಕುಟುಂಬಗಳಿಗೆ ಭೂಮಿಯೊಂದಿಗೆ ಪಟ್ಟಾ

ಕಳೆದೊಂದು ವರ್ಷದಲ್ಲಿ ರಾಜ್ಯದಲ್ಲಿ 1,14,276 ಕಿರು ಮಧ್ಯಮ ಉದ್ದಿಮೆಗಳನ್ನು ಸ್ಥಾಪಿಸಿ 2,64,463 ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ. ಭೂಮಿ ಇಲ್ಲದವರ ಪೈಕಿ 3 ಲಕ್ಷ ಕುಟುಂಬಗಳಿಗೆ ಭೂಮಿಯೊಂದಿಗೆ ಪಟ್ಟಾವನ್ನು ನೀಡಲಾಗಿದೆ. ಭಾರತದಲ್ಲೆ ಅತಿ ಶ್ರೇಷ್ಠ ಮಟ್ಟದ ನಾಗರಿಕ ಆಹಾರ ಪೂರೈಕೆ ವ್ಯವಸ್ಥೆಯನ್ನು ನೀಡಿದೆ. ಏಳೂವರೆ ವರ್ಷಗಳ ಎಡರಂಗ ಸರಕಾರದ ಆಡಳಿತದಲ್ಲಿ ಅಸಾಧ್ಯವೆಂಬುದನ್ನು ಸಾಧ್ಯವಾಗಿಸಿದೆ.

'ಹೊಸ ಕಣ್ಣೋಟದೊಂದಿಗೆ ಜನಪರವಾಗಿ ಆಡಳಿತ ನಡೆಸುತ್ತಿರುವ ಕೇರಳ ಎಡರಂಗ ಸರಕಾರವು ಈ ವರೆಗೆ ಏನು ಮಾಡಿದೆ, ಈಗ ಏನು ಮಾಡುತ್ತಿದೆ, ಮುಂದೆ ಏನು ಮಾಡಲಿಕ್ಕಿದೆ ಎಂಬುದನ್ನು ಜನತೆಗೆ ತಿಳಿಸುವುದು ಮತ್ತು ನಾವೇನು ಮಾಡಬೇಕು ಎಂಬುದರ ಬಗೆಗೆ ಜನರಿಂದಲೂ ಅಭಿಪ್ರಾಯ ಸಂಗ್ರಹಿಸಲು'– ಪೈವಳಿಕೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರಿಂದ ಉದ್ಘಾಟನೆಗೊಂಡು ಮುಂದಿನ 36 ದಿವಸಗಳ ದೀರ್ಘ ಪಯಣಕ್ಕೆ ಚಾಲನೆ ನೀಡಿ ಆಡಿದ ಮಾತಿನ ಸಾರಾಂಶವಿದು.

ಮಾಧ್ಯಮ ಕುರಿತು ಪಿಣರಾಯಿ

ಮಂತ್ರಿ ಮಂಡಲ ಸದಸ್ಯರು ಪ್ರಯಾಣಿಸಲಿದ್ದ ಬಸ್ಸಿನ ಕುರಿತು ಮಾಧ್ಯಮಗಳಲ್ಲಿ ಬಿರುಸಿನ ಚರ್ಚೆ ಮತ್ತು ಪ್ರಚಾರವೂ ನಡೆದಿತ್ತು. ಇಷ್ಟೊಂದು ಆಡಂಭರದ ಸೌಕರ್ಯ ಬೇಕಿತ್ತೇ ಎಂಬ ವಿಚಾರದ ಸುತ್ತ ನಡೆದ ಚರ್ಚೆಯಲ್ಲಿ ಕೇರಳ ಸರಕಾರವನ್ನು ಟೀಕಿಸಿದ್ದರು.

ಬಸ್ಸನ್ನು ನೋಡದೆ ಏನನ್ನೂ ಹೇಳಲಾಗದ ಸ್ಥಿತಿಯಲ್ಲಿದ್ದ ಮಂತ್ರಿಗಳು ಕಾಸರಗೋಡಿನಲ್ಲಿ ನಿಂತಿದ್ದ ಅವರೆಲ್ಲ ಪ್ರಯಾಣಿಸಲಿದ್ದ ಬಸ್ಸನ್ನೇರಿ ಕುಳಿತು, ಎಲ್ಲಾ ರೀತಿಯಲ್ಲಿ ಶೋಧನೆ ನಡೆಸಿಯೂ ಮಾಧ್ಯಮಗಳು ಹೇಳಿರುವಂತಹ ಕೋಟಿ ಕೋಟಿ ಖರ್ಚು ಮಾಡಿರುವ ಆಡಂಭರಗಳೇನೂ ಕಾಣ ಸಿಗಲಿಲ್ಲ. ಆದ್ದರಿಂದ ನಾವೇನೋ ಹುಡುಕಿದರು ಸಿಗಲಿಲ್ಲ, ನೀವೇನಾದರೂ ಶೋಧನೆ ಮಾಡಿ, ಆಡಂಭರ ಕಾಣಲು ಸಾಧ್ಯವಾಗಬಹುದೋ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಿ., ನಾವು ಹಿಂತಿರುಗಿ ಹೋಗಲು ಬಸ್ಸೇರಿ ಕುಳಿತ ಮೇಲೆ ಇಲ್ಲಿರುವ ಎಲ್ಲಾ ಮಾಧ್ಯಮದವರು ಬಸ್ಸಿನೊಳಗೆ ಬರಬೇಕೆಂದು ಮುಖ್ಯಮಂತ್ರಿಯವರು ಆಹ್ವಾನಿಸಿದರು.

ಅಂತೆಯೆ ಐದೈದು ಮಂದಿ ಮಾಧ್ಯಮ ಪ್ರತಿನಿಧಿಗಳನ್ನು ಬಸ್ಸಿನೊಳಗೆ ಬಿಡಲಾಯಿತು. ಕೆಲವು ವೀಡಿಯೋಗಳು ಮೇಲೆ ಕೆಳಗೆ ಅತ್ತ ಇತ್ತ ಸೂಕ್ಷ್ಮವಾಗಿ ನೋಡುವಂತೆ ಭಾಸವಾಗುತ್ತಿತ್ತು. ಇನ್ನು ಕೆಲವರು ನಾಮಕಾವಸ್ಥೆಯಲ್ಲಿ ಒಂದೇ ಮಗ್ಗುಲಿಗೆ ಕ್ಯಾಮರಾ ಹಿಡಿದು ಸಾಗುತ್ತಿರುವುದು ಹೊರಗೆ ನಿಂತವರಿಗೆ ಗೋಚರಿಸುತ್ತಿತ್ತು.

ದೇಶದಲ್ಲಿ ಚರ್ಚೆಗೆ ಎತ್ತಬೇಕಾದ ನೂರಾರು ಸಮಸ್ಯೆಗಳಿರುವಾಗ, ನಿಮಗೆ ಬಸ್ಸಿನ ಆಡಂಭರವೇ ಮುಖ್ಯವಾಯಿತೇ! ಎಂಬುದಾಗಿ ನಗುತ್ತಲೇ ಪಿಣರಾಯಿ ವಿಜಯನ್ ಮಾಧ್ಯಮದವರನ್ನು ಕೆಣಕಿದರು.

ಪಶ್ಚಿಮ ಹಿಮಾಲಯದ ಯೋಜನೆಗಳ ಪರಿಶೀಲನೆ ಅಗತ್ಯ ಇನ್ನಷ್ಟು ದುರಂತ ತಡೆಯಬೇಕು

ಪ್ರಕಾಶ್ ಕಾರತ್

ಸಿಲ್ಕಿಯಾರ ಗಣಿಯಾಳದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮತ್ತು ಅವರನ್ನು ರಕ್ಷಿಸಿದ ಕಾರ್ಮಿಕರಲ್ಲಿ ಹಿಂದು–ಮುಸ್ಲಿಂ ಧರ್ಮಗಳೆರಡಕ್ಕೂ ಸೇರಿದವರಿದ್ದು, ಸಹೋದರ ಭಾವದಿಂದ ಕೆಲಸ ಮಾಡಿದ್ದಾರೆ. ದೊಡ್ಡ ಯಂತ್ರಗಳು ವಿಫಲವಾದಾಗ ಕಾರ್ಮಿಕರನ್ನು ರಕ್ಷಿಸುವ ಮೂಲಕ ಮನುಷ್ಯನ ಕೌಶಲ್ಯ ಮತ್ತು ಶ್ರಮ ಎಷ್ಟು ಅಮೂಲ್ಯ ಎಂಬುದು ಈ ಪ್ರಕರಣದಲ್ಲಿ ಸಾಬೀತಾಗಿದೆ.



ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾದಲ್ಲಿವ ರಸ್ತೆ ಸುರಂಗದಲ್ಲಿ ಸಿಲುಕಿಕೊಂಡಿದ್ದ ಬಹುತೇಕ ವಲಸೆ ಕಾರ್ಮಿಕರೇ ಇದ್ದ 41 ಶ್ರಮಿಕರ 17 ದಿನಗಳಷ್ಟು ಸುದೀರ್ಘ ಅವಧಿಯ ಸಂಕಟ ಕೊನೆಗೂ ಅಂತ್ಯಗೊಂಡಿದೆ. ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು, ವಿದೇಶಿ ತಜ್ಞರು, ಸೇನೆಯ ಇಂಜಿನಿಯರ್‌ಗಳು, ಇತರ ಕಾರ್ಮಿಕರು, ದೇಶದ ನಾನಾ ಭಾಗಗಳಿಂದ ವಾಯು ಪಡೆ ಹೊತ್ತು ತಂದ ಯಂತ್ರೋಪಕರಣಗಳು, ಅನೇಕ ತಾತ್ಕಾಲಿಕ ನಿರ್ಧಾರಗಳು ಮತ್ತು ಸುರಂಗವನ್ನು ಮುಚ್ಚಿದ್ದ 60 ಮೀಟರ್‌ಗೂ ಹೆಚ್ಚಿನ ಅವಶೇಷಗಳನ್ನು ತೆಗೆದು ಹಾಕಲು ವಿವಿಧ ತಂತ್ರಗಳು–ಇವೆಲ್ಲವುಗಳ ಸಾಮೂಹಿಕ ಪ್ರಯತ್ನದ ಫಲವಾಗಿ ಎಲ್ಲ ಕಾರ್ಮಿಕರು ಸುರಕ್ಷಿತವಾಗಿ ಹೊರಬರಲು ಸಾಧ್ಯವಾಯಿತು.

ರಕ್ಷಿಸಿದ ತಕ್ಷಣ ಕಾರ್ಮಿಕರನ್ನು ಪ್ರಾಥಮಿಕ ತಪಾಸಣೆಯ ನಂತರ ಸಮೀಪದ ಚಿನ್ಯಾಲಿಸೌರ್ ಜಿಲ್ಲಾ ಆಸ್ಪತ್ರೆ ಸಮೀಪ ಸ್ಥಾಪಿಸಲಾಗಿದ್ದ ಫೀಲ್ಡ್ ಆಸ್ಪತ್ರೆಗೆ ಕರೆದೊಯ್ಯಲು ಸಿಕ್ಕಿ ಹಾಕಿಕೊಂಡ ಪ್ರತಿ ಕಾರ್ಮಿಕನಿಗಾಗಿ ತಲಾ ಒಂದು ಆಂಬುಲೆನ್ಸ್ ಅನ್ನು ಸಿದ್ಧಪಡಿಸಿ ಇರಿಸಲಾಗಿತ್ತು. ಫೀಲ್ಡ್ ಆಸ್ಪತ್ರೆಯಲ್ಲಿ ವಿಶೇಷ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಎಲ್ಲ ಕಾರ್ಮಿಕರು ಯಾವುದೇ ತೊಂದರೆಯಿಲ್ಲದೆ ಸುರಕ್ಷಿತವಾಗಿದ್ದಾರೆ ಮತ್ತು ದೈಹಿಕವಾಗಿ ಸದೃಢವಾಗಿದ್ದಾರೆ ಎಂಬುದು ಕೆಲವು ದಿನಗಳಿಂದ ಕಾರ್ಮಿಕರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಗಳು ಹಾಗೂ ಇತರ ಸಂವಹನ ವಿಧಾನಗಳಿಂದ ಸಾಬೀತಾಗಿದ್ದರೂ ಗಂಭೀರ ಗಾಯ ಅಥವಾ ಅನಾರೋಗ್ಯ ಆದಲ್ಲಿ ಅಗತ್ಯವಾಗಬಹುದೆಂದು ಮುನ್ನೆಚ್ಚರಿಕೆಯಾಗಿ ಈ ಹೆಚ್ಚುವರಿ ವ್ಯವಸ್ಥೆಗಳನ್ನು ಮಾಡಲಾಗಿತ್ತು.

ನಾಟಕೀಯ ಉದ್ದೇಶ

ಇದೇ ಹೊತ್ತಿಗೆ, ಈ ಎಲ್ಲವೂ ಭಾಗಶಃ ನಾಟಕೀಯ, ನೇರ ಟಿವಿ ಪ್ರಸಾರದ ಉದ್ದೇಶವನ್ನು ಹೊಂದಿತ್ತು. ಅಂದರೆ, ಅಧಿಕಾರದಲ್ಲಿರುವವರು ಭಾರಿ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ ಎಂದು ಸಾರ್ವಜನಿಕರಿಗೆ ತೋರಿಸುವುದು ಲೈವ್ ಪ್ರಸಾರದ ಗುರಿಯಾಗಿತ್ತು. ಹಲವು ಕೇಂದ್ರ ಸಚಿವರು, ಮುಖ್ಯಮಂತ್ರಿ ಸಹಿತ ಉತ್ತರಾಖಂಡದ ಅನೇಕ ಸಚಿವರು ಕೂಡ ಕಾರ್ಯಾಚರಣೆ ಸ್ಥಳದಲ್ಲಿ ಬೇರೆ ಬೇರೆ ಸಮಯದಲ್ಲಿ ಹಾಜರಿದ್ದರು ಎನ್ನುವುದೂ ಇಲ್ಲಿ ಗಮನಾರ್ಹ.

ಸಂತೃಪ್ತಿ ಭಾವ ಸಲ್ಲದು

ಭಾರಿ ಕಾರ್ಯಾಚರಣೆಯ ಫಲಿತಾಂಶದ ಬಗ್ಗೆ ಸಂತಸದಿಂದ ಸಂಭ್ರಮಿಸುವ ವಾತಾವರಣ ಉಂಟಾಗಿದೆಯಾದರೂ ಅದು ಎಲ್ಲವೂ ಸರಿಯಾಗಿದೆ ಎಂದು ಎಲ್ಲಾ ಮಟ್ಟದ ಅಧಿಕಾರಸ್ಥರಲ್ಲಿ ಆತ್ಮ ಸಂತೃಪ್ತಿಯ ಮನೋಭಾವಕ್ಕೆ ಕಾರಣವಾಗಬಾರದು ಎಂಬ ಎಚ್ಚರಿಕೆ ಅಗತ್ಯ. ಹಾಗೂ ಮಾಮೂಲಿ ವ್ಯವಹಾರದ ರೀತಿಯಲ್ಲಿ, ಸೂಕ್ಷ್ಮವಾದ ಹಿಮಾಲಯ ಪ್ರದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಮುಂದುವರಿಸುವುದಾಗಿ ಹೇಳಲೂ ಬಾರದು. ಸುರಂಗ ಕುಸಿತ ನಿಜಕ್ಕೂ ದೊಡ್ಡ ದುರಂತ ಆಗಬಹುದಿತ್ತು. ಆದರೆ ಅದೃಷ್ಟವಶಾತ್ ಅದು ಸುರಂಗದ ಎದುರಿನ ಕೊನೆ ಭಾಗದಲ್ಲಿ ಸಂಭವಿಸಿತ್ತು.

ಕಾರ್ಮಿಕರನ್ನು ರಕ್ಷಿಸುವಲ್ಲಿ ವಿವಿಧ ಸಂಸ್ಥೆಗಳ ನಡುವೆ ಕಂಡುಬಂದ ಪ್ರಯತ್ನ, ವೃತ್ತಿಪರ ಸಾಮರ್ಥ್ಯಗಳಿಗೆ ಗೌರವ ಮತ್ತು ವಿವಿಧ ಕ್ಷೇತ್ರಗಳ ತಜ್ಞರ ಅಭಿಪ್ರಾಯಗಳ ಸಮನ್ವಯವನ್ನು ಈಗ ಕುಖ್ಯಾತವಾದ 900 ಕಿಲೋ ಮೀಟರ್ ಉದ್ದದ ಚಾರ್ ಧಾಮ್ ಹೆದ್ದಾರಿ ಯೋಜನೆಗೆ ಅನುಮೋದನೆ ನೀಡುವಾಗ ಹಾಗೂ ಅನುಷ್ಠಾನಗೊಳಿಸುವಾಗಲೂ ತೋರಿಸಬೇಕಾಗಿತ್ತು ಎಂದು ಆಶಿಸುವುದರಲ್ಲಿ ತಪ್ಪೇನೂ ಇಲ್ಲ. ಈ ಸುರಂಗವೂ ಆ ಯೋಜನೆಯ ಭಾಗವಾಗಿದೆ.

ಸುರಂಗದ ಜಾಗದಲ್ಲಿನ ಭೂಪ್ರದೇಶದ ಕಾರಣದಿಂದಾಗಿ ವಿವಿಧ ಸಮಸ್ಯೆಗಳು ಎದುರಾಗಿದ್ದನ್ನು ಕಾರ್ಯಾಚರಣೆ ವೇಳೆ ಸ್ಥಳದಲ್ಲಿದ್ದ ವಿವಿಧ ಸಂಸ್ಥೆಗಳ ತಾಂತ್ರಿಕ ತಜ್ಞರು ಮತ್ತು ಎನ್‌ಡಿಆರ್‌ಎಫ್ ಅಧಿಕಾರಿಗಳು ಎತ್ತಿ ತೋರಿಸಿದ್ದರು. ಬೃಹತ್ ಆಗರ್ ಡ್ರಿಲ್ಲಿಂಗ್ ಯಂತ್ರ ಕಾರ್ಯಾಚರಿಸುತ್ತಿರುವಾಗಲೇ ತಾಜಾ ಅವಶೇಷಗಳು ಬೀಳುತ್ತಿರುವುದನ್ನು ಅವರು ಗಮನಿಸಿದ್ದರು. ಸುತ್ತಮುತ್ತಲಿನ ಬೆಟ್ಟಗಳ ಸಡಿಲತೆಯಿಂದಾಗಿ ಹೀಗಾಗುತ್ತಿತ್ತು. ಭಾರಿ ಯಂತ್ರಗಳ ಕಾರ್ಯಾಚರಣೆಗಳು, ಸುರಂಗದ ಮೇಲಿನಿಂದ ಲಂಬ ಕೊರೆಯುವಿಕೆ ಮುಂತಾದವು ತೀರಾ ಅಪಾಯಕಾರಿಯಾದುದು. ಯಾಕೆಂದರೆ ಕಂಪನದಿಂದ ತಾಜಾ ಕುಸಿತ ಮತ್ತು ಭೂಕುಸಿತ ಉಂಟಾಗಬಹುದು ಮುಂತಾದ ಅಂಶಗಳು ಅವರ ಕಳವಳಕ್ಕೆ ಕಾರಣವಾಗಿತ್ತು. ಆದರೆ, ಇತರ ಅಂಶಗಳೂ ಪ್ರಮುಖ ಎನ್ನುವುದನ್ನು ವಿವಿಧ ತಜ್ಞರು, ಭೂಗರ್ಭ ಶಾಸ್ತ್ರಜ್ಞರು ಮತ್ತು ಸ್ಥಳೀಯ ಜನರು ಹಾಗೂ ಜನರ ಸಂಘಟನೆಗಳ ಪ್ರತಿನಿಧಿಗಳು ಯೋಜನೆಯ ಆರಂಭದಿಂದಲೂ ಹೇಳುತ್ತಿದ್ದರು. ರಸ್ತೆ ಅಗಲೀಕರಣಕ್ಕೆ ಅನುಸರಿಸುವ ಅಸೂಕ್ತ ವಿಧಾನಗಳು, ಇಳಿಜಾರು ಕಟ್ಟಿಂಗ್, ಸ್ಫೋಟ, ಸುರಂಗ ಮತ್ತು ಯುವ ಹಾಗೂ ಭಂಗುರವಾದ ಹಿಮಾಲಯದ ಬೆಟ್ಟಗಳ ಕೆಳ ಭಾಗದಲ್ಲಿರುವ ನದಿಗಳಿಗೆ ಅವಶೇಷಗಳನ್ನು ಎಸೆಯುವುದು ಅಪಾಯಕಾರಿ ಎಂದು ಅವರು ಎಚ್ಚರಿಸುತ್ತಲೇ ಬಂದಿದ್ದರು.

ಈ ಅಂಶಗಳೇ ಪಶ್ಚಿಮ ಹಿಮಾಲಯ ಪ್ರದೇಶಗಳಲ್ಲಿ ಪದೇ ಪದೇ ಸಂಭವಿಸುತ್ತಿರುವ ದುರಂತಗಳಿಗೆ ಅಥವಾ ಅವುಗಳು ಉಲ್ಬಣಿಸಲು ಕಾರಣವಾಗಿವೆ ಎನ್ನುವುದು ವಾಸ್ತವವಾಗಿದೆ. ಪದೇ ಪದೇ ಭೂಕುಸಿತ ಉಂಟಾಗಿ 'ಸರ್ವ–ಋತು' ಹೆದ್ದಾರಿಗೆ ಹಾನಿಯಾಗುವುದು ಅಥವಾ ಬ್ಲಾಕ್ ಆಗುವುದು, ವಿನಾಶಕಾರಿ ಪ್ರವಾಹ ಮತ್ತು ತಪೋವನ–ವಿಷ್ಣುಗಢ್ ಜಲವಿದ್ಯುತ್ ಯೋಜನೆಯ ಸಂಪೂರ್ಣ ನಾಶ, ಚಾರ್ ಧಾಮ್ ಸರ್ಕ್ಯೂಟ್‌ನ ನಿರ್ಣಾಯಕ ಗೇಟ್‌ವೇ ಸ್ಥಳವಾದ ಜೋಷಿಮಠ ಪಟ್ಟಣದ ಕುಸಿತ; ಇವೇ ಮೊದಲಾದವು ದುರ್ಬಲ ಯೋಜನೆ, ಭೌಗೋಳಿಕ ಪರಿಸ್ಥಿತಿ ಮತ್ತು ಹಿಮಾಲಯ ವಲಯದ ಭೌಗೋಳಿಕ–ತಾಂತ್ರಿಕ ಸಮಸ್ಯೆಗಳಿಗೆ ಸಂಪೂರ್ಣ ಅಗೌರವ, ಪರಿಸರ ನಿಯಮಗಳಿಗೆ ದುರಹಂಕಾರದ ಅಗೌರವ ಮತ್ತು ಬೆಟ್ಟಗಳು, ರಸ್ತೆಗಳು, ನಗರಗಳು ಮತ್ತು ಯಾತ್ರಾ ಸ್ಥಳಗಳ ಹೊತ್ತೊಯ್ಯುವ ಸಾಮರ್ಥ್ಯಗಳ ಮೂಲಭೂತ ತತ್ವವನ್ನೇ ನಿರ್ಲಕ್ಷಿಸಿರುವುದತ್ತ ಬೆಟ್ಟು ಮಾಡುತ್ತದೆ.

ಉದ್ದೇಶಪೂರ್ವಕ ವಿಭಜನೆ

900 ಕಿಮೀ ಉದ್ದದ ಹೆದ್ದಾರಿ ಯೋಜನೆಯನ್ನು ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿಯೇ 53 ಚಿಕ್ಕ ಚಿಕ್ಕ ಸ್ಟ್ರೆಚ್‌ಗಳಾಗಿ ವಿಭಜಿಸಿತ್ತೆನ್ನುವುದನ್ನು ಯಾರೂ ಮರೆಯಬಾರದು. ಪರಿಸರ ಪರಿಣಾಮ ಅಂದಾಜು (ಇಐಎ) ಮಾಡುವುದರಿಂದ ತಪ್ಪಿಸಲು ಹೀಗೆ ಮಾಡಲಾಗಿತ್ತು. ಆ ಮೂಲಕ ಅಲ್ಲಿನ ಸಂಯೋಜನೆ ಬಗ್ಗೆ ಹಾಗೂ ಆ ಮೂಲಕ ಸುಪ್ರೀಂ ಕೋರ್ಟ್ ನೇಮಿತ ತಜ್ಞರ ಸಮಿತಿಯ ಅಭಿಪ್ರಾಯವನ್ನು ವಂಚಿಸಲಾಯಿತು. ಅಂತಿಮವಾಗಿ, 'ರಾಷ್ಟ್ರೀಯ ಭದ್ರತೆ'ಯ ಟ್ರಂಪ್ ಕಾರ್ಡ್ ಬಳಸಿ ಹೈವೇ ವಿಸ್ತರಿಸಲು ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್‌ಅನ್ನು ಬಲವಂತಪಡಿಸಲಾಯಿತು.

ಇತ್ತೀಚಿನ ಈ ದುರಂತಕ್ಕೆ–ಸನಿಹವಾದ ಪ್ರಕರಣದ ನಂತರವಾದರೂ ಪಶ್ಚಿಮ ಹಿಮಾಲಯ ಪ್ರದೇಶದ ಎಲ್ಲ ಮೂಲಸೌಕರ್ಯ ಯೋಜನೆಗಳ ಸಮಗ್ರ ಹಾಗೂ ಸ್ವತಂತ್ರ ಪರಿಶೀಲನೆ ನಡೆಸುವುದು ಅನಿವಾರ್ಯವಾಗಿದೆ. ಈ ವಲಯದ ಎಲ್ಲಾ ಯಾತ್ರಾ ಸ್ಥಳಗಳು, ಗಿರಿಧಾಮಗಳು ಮತ್ತು ಇತರ ಪಟ್ಟಣಗಳ ಹೊರುವ ಸಾಮರ್ಥ್ಯ (ಕ್ಯಾರಿಯಿಂಗ್ ಕೆಪಾಸಿಟಿ) ಬಗ್ಗೆ ಪರಿಶೀಲನೆ ನಡೆಸುವುದೂ ಅಗತ್ಯ. ಎಲ್ಲಾ ನಿರ್ಮಾಣ ಯೋಜನೆಗಳಿಗೆ ಸೂಕ್ತ ತಾಂತ್ರಿಕ ಸಂಹಿತೆಗಳನ್ನು ರೂಪಿಸುವುದು ಅಗತ್ಯ. ಅಲ್ಲದೆ, ಈ ನಿಯಮಗಳ ಅನುಷ್ಠಾನ ಮತ್ತು ಉಸ್ತುವಾರಿಗೆ ಪರಿಣಾಮಕಾರಿ ವ್ಯವಸ್ಥೆ ಮಾಡುವುದು ಕೂಡ ಅಷ್ಟೇ ಮಹತ್ವದ್ದಾಗಿದೆ. ಇಂಥ ಕ್ರಮಗಳಿಲ್ಲದೆ ಈ ವಲಯದಲ್ಲಿ ಕೈಗೊಳ್ಳಲಾಗುವ ಯಾವುದೇ ಉದ್ದೇಶಿತ 'ಅಭಿವೃದ್ಧಿ'ಯು ದುರಂತಕ್ಕೆ ಆಹಾರವಾಗುವುದು ನಿಶ್ಚಿತ.

ಅನು: ವಿಶ್ವ

ಸಿಪಿಎಂ ಮುಖಂಡ ಮಹಮ್ಮದ್ ಖಾನ್ ನಿಧನ



ಸಿಪಿಐ(ಎಂ)ನ ಬಳ್ಳಾರಿ ಜಿಲ್ಲಾ ಮುಖಂಡರಾದ, ಕುರುಗೋಡು ಪಟ್ಟಣದ ಸಂಗಾತಿ ಎಸ್.ಪಿ. ಮಹಮ್ಮದ್ ಖಾನ್ ಅವರು ನವೆಂಬರ್ 18ರಂದು ಅನಾರೋಗ್ಯದಿಂದ ನಿಧನರಾದರು. ಇವರು ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು.

ಇವರು, 90ರ ದಶಕದಲ್ಲಿ ಕುರುಗೋಡು ತಾಲೂಕಿನಾದ್ಯಂತ ಸಂಚರಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ ಐ) ಕಟ್ಟಿ ಬೆಳೆಸಲು ಶ್ರಮಿಸಿದ್ದರು. ಕೃಷಿ ಕೂಲಿಕಾರರ ಸಂಘಟನೆ ಮತ್ತು ಕಟ್ಟಡ ಕಾರ್ಮಿಕರ ಸಂಘಟನೆ ಸೇರಿದಂತೆ ಇತರೆ ಜನಪರ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದರು. ಸಿಪಿಐ(ಎಂ) ನ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯರಾಗಿ, ಕುರುಗೋಡು ತಾಲೂಕು ಮುಖಂಡರಾಗಿ ಸಂಗಾತಿ ಮಹಮ್ಮದ್ ಖಾನ್ ಅವರು ಪಕ್ಷದ ಬೆಳವಣಿಗೆಗೆ ಅವಿರತವಾಗಿ ದುಡಿದಿದ್ದಾರೆ.

ಮೃತರು ತಂದೆ, ತಾಯಿ, ಪತ್ನಿ ಮತ್ತು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಅಗಲಿದ ನಾಯಕನಿಗೆ ಸಿಪಿಐ(ಎಂ) ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ.



ಶ್ರದ್ಧಾಂಜಲಿ ಸಲ್ಲಿಸಿದ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯ ಸದಸ್ಯ ಎಸ್.ವೈ.ಗುರುಶಾಂತ್, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಜೆ. ಸತ್ಯ ಬಾಬು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಿವಶಂಕರ್, ತಿಪ್ಪಯ್ಯ, ಮುಖಂಡರಾದ ಗಾಳಿ ಬಸವರಾಜ್, ಯುವ ಮುಖಂಡರಾದ ಕಾಲೂಬಾ ಮುಂ.



ಮೋದಿ ಸೋಲಬೇಕು ದೇಶ ಉಳಿಯಬೇಕು! ಮಹಾಧರಣಿಯಲ್ಲಿ ದುಡಿವ ಜನರ ಸಂಕಲ್ಪ

ಲಿಂಗರಾಜು

ಕಾರ್ಪೊರೇಟ್ ಧಣಿಗಳ ಅಡಿಯಾಳಾಗಿ ರೈತ-ಕಾರ್ಮಿಕ ಬದುಕನ್ನು ವಿನಾಶದಂಚಿಗೆ ತಳ್ಳಿರುವ ಮೋದಿ ಸರ್ಕಾರವನ್ನು ಅಧಿಕಾರಿಂದ ಕಿತ್ತೊಗೆಯಲು ದುಡಿವ ಜನರ ಮಹಾಧರಣಿ ಸಂಕಲ್ಪಗೈದಿದೆ.

21 ಪ್ರಮುಖ ಬೇಡಿಕೆಗಳಿಗಾಗಿ ಆಗ್ರಹಿಸಿ ನವೆಂಬರ್ 26ರಿಂದ 28ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಡೆದ ದುಡಿಯುವ ಜನರ 72 ಗಂಟೆಗಳ ಮಹಾಧರಣಿಯು ಜನಸಾಗರದ ಬೆಂಬಲದೊಂದಿಗೆ ಅಭೂತಪೂರ್ವ ಯಶಸ್ಸು ಕಂಡಿತು. ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ದೇಶಾದ್ಯಂತ ಮೂರು ದಿನಗಳ ಮಹಾಧರಣಿಗೆ ಕರೆ ನೀಡಿತ್ತು.

ರೈತರ ಐತಿಹಾಸಿಕ ದೆಹಲಿ ಹೋರಾಟಕ್ಕೆ ಮಣಿದಿದ್ದ ಕೇಂದ್ರ ಸರ್ಕಾರವು ರೈತಾಪಿ ವರ್ಗದಿಂದ ಕೃಷಿಯನ್ನು ಕಿತ್ತು ಕಾರ್ಪೊರೇಟ್ ಬಂಡವಾಳದಾರರಿಗೆ ಕೈಗಿಡುವ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ವಾಗ್ದಾನ ನೀಡಿತ್ತು. ಆದರೆ ಹಿಂಬಾಗಿಲ ಮೂಲಕ ಇದೇ ಕಾಯ್ದೆಗಳನ್ನು ಅನುಷ್ಠಾನಕ್ಕೆ ತಂದು ಅನ್ನದಾತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ. 29 ಕಾರ್ಮಿಕ ಕಾಯ್ದೆಗಳನ್ನು ಸಂಹಿತೆ ಹೆಸರಲ್ಲಿ ವಿಲೀನಗೊಳಿಸಿ, ಕಾಯ್ದೆಯ ಹಲ್ಲನ್ನು ಕಿತ್ತು ಕಾರ್ಮಿಕ ಹಕ್ಕುಗಳನ್ನು ಬಂಡವಾಳದಾರರ ಕಾಲಡಿ ಇಟ್ಟಿದೆ. ದೇಶದ ಬಹುಸಂಖ್ಯಾತ ದುಡಿಯುವ ಜನರ ಬದುಕು ಮೂರಾಬಟ್ಟೆ ಮಾಡಿರುವ ಕೇಂದ್ರ ಸರ್ಕಾರದ ದೇಶದ್ರೋಹಿ ನೀತಿಗಳ ವಿರುದ್ಧ ಮಹಾಧರಣಿಯಲ್ಲಿ ಸೇರಿದ್ದ ಭಾರಿ ಜನಸ್ತೋಮವು ಆಕ್ರೋಶವನ್ನು ಹೊರಹಾಕಿತು.

ದೇಶದ ಎಲ್ಲ ರಾಜ್ಯಗಳ ರಾಜಧಾನಿ ಕೇಂದ್ರಗಳಲ್ಲಿ ಹಮ್ಮಿಕೊಂಡಿದ್ದ ರಾಜಭವನ್ ಚಲೋದಲ್ಲಿ ಭಾರಿ ಸಂಖ್ಯೆಯ ಜನ ಭಾಗವಹಿಸುವ ಮೂಲಕ 72 ಗಂಟೆಗಳ ಮಹಾಪಡಾವ್ ಯಶಸ್ಸು ಕಂಡಿದೆ. ರಾಜ್ಯದಲ್ಲಿ ಸಂಯುಕ್ತ ಹೋರಾಟ - ಕರ್ನಾಟಕ ವೇದಿಕೆ ಭಾಗವಾಗಿರುವ ರೈತ-ಕಾರ್ಮಿಕರು ಮಾತ್ರವಲ್ಲದೇ, ದಲಿತ ಸಂಘಟನೆಗಳು, ಮಹಿಳಾ, ವಿದ್ಯಾರ್ಥಿ, ಯುವಜನ ಹಾಗು ತಳಸಮುದಾಯಗಳ 40ಕ್ಕೂ ಹೆಚ್ಚು ಸಂಘಟನೆಗಳು ಭಾಗಿಯಾಗಿ ನಡೆಸಿದ ಹೋರಾಟಕ್ಕೆ ಸಂಯುಕ್ತ ಕಿಸಾನ್ ಮೋರ್ಚಾವು ಕರ್ನಾಟಕದ ಮಾದರಿಯನ್ನು ದೇಶಕ್ಕೆ ವಿಸ್ತರಿಸುವ ಪ್ರಶಂಸೆಯ ಮಾತುಗಳನ್ನಾಡಿದೆ.

ಸಂವಿಧಾನ ಪೀಠಿಕೆ ಅನಾವರಣ:

ಧರಣಿಯಲ್ಲಿ ಸಂವಿಧಾನ ಪೀಠಿಕೆ ಅನಾವರಣಗೊಳಿಸಿದ ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ "ಈ ದೇಶದಲ್ಲಿ ಪ್ರಜೆಗಳೇ ಪ್ರಭುಗಳು, 'ವಿ ದ ಪೀಪಲ್ ಆಫ್ ಇಂಡಿಯಾ' ಎಂದು ಘೋಷಿಸುವ ಶಕ್ತಿಯನ್ನು ಸಂವಿಧಾನ ನೀಡಿದೆ. ಜನರ ಈ ಶಕ್ತಿಯನ್ನು ಮರೆತವರು ಎಷ್ಟೇ ಬಲಾಢ್ಯರಾದರೂ ಪ್ರಜಾಪ್ರಭುತ್ವ ಅವರನ್ನು ಸೋಲಿಸಿದೆ. ತುರ್ತುಪರಿಸ್ಥಿತಿಯನ್ನು ಹೇರಿ ಏಕಾಧಿಪತ್ಯ ಸಾಧಿಸಲು ಹೊರಟ ಇಂದಿರಾಗಾಂಧಿಯನ್ನೇ ಜನ ಸೋಲಿಸಿದ ಇತಿಹಾಸ ಇರುವ ದೇಶದಲ್ಲಿ, ಇಂದಿರಾ ನಡೆಯನ್ನೇ ಅನುಸರಿಸುತ್ತಿರುವ ಮೋದಿಗೂ 24ರ ಚುನಾವಣೆಯಲ್ಲಿ ಜನ ಪಾಠ ಕಲಿಸಲಿದ್ದಾರೆ' ಎಂದರು. ಹಿರಿಯ ಲೇಖಕಿ ಡಾ.ವಿಜಯಮ್ಮ ಸಂವಿಧಾನ ಪೀಠಿಕೆಯ ಪ್ರಮಾಣ ವಚನ ಬೋಧಿಸಿದರು. ರೈತ ಮುಖಂಡ ಎಚ್. ಆರ್.ನವೀನ್ ಕುಮಾರ್ ಬರೆದಿರುವ 'ಕದನ ಕಣ' (ಮೂರನೇ ಮುದ್ರಣ) ಪುಸ್ತಕವನ್ನು ದೆಹಲಿಯ ಜವಹರಲಾಲ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ.ಪುರುಷೋತ್ತಮ ಬಿಳಿಮಲೆ ಬಿಡುಗಡೆ ಮಾಡಿದರು.

ರಾಜ್ಯ ಸರ್ಕಾರದ ಮಟ್ಟದಲ್ಲಿ ಆಗಬೇಕಿದ್ದ ಬೇಡಿಕೆಗಳ ವಿಚಾರದಲ್ಲಿ, ಪ್ರತಿಭಟನಾಕಾರರಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬೇಡಿಕೆಗಳ ಕುರಿತು ಚರ್ಚಿಸಲು ಡಿಸೆಂಬರ್ 19 ರಂದು ಸಭೆ ನಿಗದಿಗೊಳಿಸಿ, ತಮ್ಮ ರಾಜಕೀಯ ಕಾರ್ಯದರ್ಶಿ ಮೂಲಕ ಪ್ರತಿಭಟನಾ ಸ್ಥಳಕ್ಕೆ ಪತ್ರ ರವಾನಿಸಿದರು.

ಜನವಿರೋಧಿ ನೀತಿಗಳನ್ನು ಕೈಬಿಡಲು ನಿರ್ಣಯ:

ರೈತ ವಿರೋಧಿಯಾದ ಭೂಮಿತಿ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆ ರದ್ದತಿ ಹಾಗೂ ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ಆಗ್ರಹಿಸಿ ನಿರ್ಣಯ ಕೈಗೊಳ್ಳಲಾಯಿತು. ಕಾರ್ಮಿಕ ಕಾಯ್ದೆಗಳನ್ನು ನಾಲ್ಕು ಸಂಹಿತೆಗಳಾಗಿ ಮಾರ್ಪಾಡು ಮಾಡಿರುವುದನ್ನು ಹಿಂತೆಗೆದುಕೊಳ್ಳಬೇಕು ಮತ್ತು ಪುನರ್ ಸ್ಥಾಪಿಸಬೇಕು ಎಂಬ ಇತ್ಯಾದಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

"ಅನುಭವಿಸಿದ್ದು ಸಾಕು - ಇವರನ್ನು ಕೆಳಗಿಳಿಸಲೇ ಬೇಕು: ಕೇಂದ್ರೀಯ ನಿರ್ಣಯ:

ಕೇಂದ್ರದಲ್ಲಿ ಅಧಿಕಾರ ಕಬಳಿಸಿ ಕೂತಿರುವ ಷಡ್ಯಂತ್ರಕಾರಿ ಬಿಜೆಪಿ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯದೆ ಈ ದೇಶದ ರೈತರಿಗಾಗಲೀ, ಶ್ರಮಿಕರಿಗಾಗಲೀ, ಜನಸಾಮಾನ್ಯರಿಗಾಗಲೀ, ದಮನಿತ ಜನಸಮುದಾಯಗಳಿಗಾಗಲೀ ಮುಕ್ತಿ ಇಲ್ಲ ಎಂಬ ಸತ್ಯ ನಮಗೆಲ್ಲಾ ನಿಚ್ಚಳವಾಗಿ ಗೊತ್ತಾಗಿದೆ ಎಂದಿರುವ ಮಹಾಧರಣಿಯು, "ಅನುಭವಿಸಿದ್ದು ಸಾಕು - ಇವರನ್ನು ಕೆಳಗಿಳಿಸಲೇ ಬೇಕು ಎಂಬ ತೀರ್ಮಾನಕ್ಕೆ ಬಂದಿದ್ದೇವೆ" ಎಂದು ತಿಳಿಸಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮಣ್ಣುಮುಕ್ಕಿಸಲು ಈಗಿನಿಂದಲೇ ಕೆಲಸ ಪ್ರಾರಂಭಿಸುತ್ತೇವೆ "ಸಮಾನ ಮನಸ್ಕ ಸಮುದಾಯಗಳು, ಸಂಘಟನೆಗಳ ಜೊತೆಗೆ ಸಮಾಲೋಚನೆ ನಡೆಸಿ ಬೃಹತ್ ಪ್ರಚಾರಂದೋಲನವನ್ನು ಈ ರಾಜ್ಯದ ಮನೆಮನೆಗೆ ಒಯ್ಯುತ್ತೇವೆ. ಇವರನ್ನು ಸೋಲಿಸುವ, ಈ ದೇಶವನ್ನು ರಕ್ಷಿಸುವ, ನಮ್ಮ ಬದುಕನ್ನು ಉಳಿಸಿಕೊಳ್ಳುವ, ನಮ್ಮ ಮಕ್ಕಳ ಭವಿಷ್ಯವನ್ನು ಕಾಪಾಡುವ ಹೊಣೆಯೊಂದಿಗೆ ಹಗಲಿರುಳು ಕೆಲಸ ಮಾಡುತ್ತೇವೆ. ದಿಲ್ಲಿಗಿಂತ ಹಳ್ಳಿ ಬಲಶಾಲಿ ಎಂಬುದನ್ನು, ಬಂಡವಾಳಿಗರಿಗಿಂತ ದುಡಿವವರೇ ಬಲಶಾಲಿಗಳೆಂಬುದನ್ನು, ಸುಳ್ಳಿಗಿಂತ ಸತ್ಯವೇ ಶಾಶ್ವತವೆಂಬುದನ್ನು ಮತ್ತೊಮ್ಮೆ ರುಜುವಾತು ಪಡಿಸುತ್ತೇವೆ" ಎಂದು ಪ್ರತಿಜ್ಞೆ ಮಾಡಿದೆ.

ರಾಜ್ಯ ಸರ್ಕಾರದ ಕುರಿತು ನಿರ್ಣಯಗಳು:

"ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ, ದ್ವೇಷ ರಾಜಕಾರಣದಿಂದ ರೋಸಿಹೋಗಿದ್ದ ರಾಜ್ಯದ ರೈತರು, ಕಾರ್ಮಿಕರು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು, ಜನಸಾಮಾನ್ಯರು ಎಲ್ಲರೂ ಕೂಡಿ ಅಧಿಕಾರದಿಂದ ಇಳಿಸಿದ್ದೇವೆ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ನಮ್ಮ ಪಾಲಿನ ಪರಿಶ್ರಮವೂ ಅಡಗಿದೆ. ಆದರೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ತನ್ನನ್ನು ಅಧಿಕಾರಕ್ಕೆ ತಂದ ಜನ ವರ್ಗಗಳ ಕೂಗನ್ನೇ ನಿರ್ಲಕ್ಷಿಸುತ್ತಿರುವುದು ವಿಷಾದನೀಯ ಮತ್ತು ದುರಂತ" ಎಂದು ಮಹಾ ಧರಣಿಯ ಮಹಾ ನಿರ್ಣಯ ಹೇಳಿದೆ.

"ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಕೊಟ್ಟ ಮಾತಿನಂತೆ ಅನ್ನ ಭಾಗ್ಯ, ವಿದ್ಯುತ್ ಭಾಗ್ಯ ಮತ್ತು ಸ್ತ್ರೀ ಭಾಗ್ಯಗಳನ್ನು ಜಾರಿಗೆ ತಂದಿದ್ದನ್ನು ನಾವು ಸ್ವಾಗತಿಸಿದ್ದೇವೆ. ಈಗಲೂ ಅದಕ್ಕಾಗಿ ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇವೆ. ಆದರೆ ನಿಜವಾಗಿ ಆದಾಯದಲ್ಲಿ ಹೆಚ್ಚಳ, ವೆಚ್ಚಗಳಲ್ಲಿ ಕಡಿತ, ಜೀವನದ ಸುರಕ್ಷತೆ, ಆಳ್ವಿಕೆಯಲ್ಲಿ ಬದಲಾವಣೆ ಮತ್ತು ಪ್ರತಿಭಟಿಸುವ ಸ್ವಾತಂತ್ರ್ಯ ಇತ್ಯಾದಿ. ಆದರೆ ಈ ನಿಟ್ಟಿನಲ್ಲಿ ಸುಧಾರಣೆ ತರಲು ರಾಜ್ಯ ಸರ್ಕಾರ ಗಮನ ನೀಡುತ್ತಿಲ್ಲ ಬದಲಿಗೆ ಜನರಿಂದ ದೂರವಾಗುತ್ತಾ ದಂತಗೋಪುರ ಸೇರಿಕೊಳ್ಳುತ್ತಿದ್ದು, ತನ್ನ ಗುಂಗಿನಲ್ಲೇ ತೇಲುತ್ತಾ ಜನರ ಪ್ರತಿಭಟಿಸುವ ಹಕ್ಕನ್ನು ದಮನ ಮಾಡುತ್ತಿದೆ. ರಾಜ್ಯ ಸರ್ಕಾರದ ಈ ನಡೆಯನ್ನು ಈ ಮಹಾ ಧರಣಿಯು ತೀವ್ರವಾಗಿ ಖಂಡಿಸುತ್ತದೆ" ಎಂದು ನಿರ್ಣಯದಲ್ಲಿ ಹೇಳಲಾಗಿದೆ.

"ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾದರೂ (ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ) ಬಿಜೆಪಿ ಸರ್ಕಾರ ತಂದ 4 ಪ್ರಮುಖ ಜನ ವಿರೋಧಿ ಕಾಯ್ದೆಗಳನ್ನು ಇನ್ನೂ ವಾಪಸ್ ಪಡೆದಿಲ್ಲ. ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಕಾಯ್ದೆ, ಕಾರ್ಮಿಕರ ಕೆಲಸವನ್ನು 8 ರಿಂದ 12 ಗಂಟೆಗೆ ಏರಿಸುವ ಕಾಯ್ದೆಗಳು ಈಗಲೂ ಚಾಲ್ತಿಯಲ್ಲಿವೆ. ಅದನ್ನು ರದ್ದುಗೊಳಿಸಲು ತೋರಬೇಕಾದ ಯಾವ ಉತ್ಸುಕತೆಯನ್ನೂ ರಾಜ್ಯ ಸರ್ಕಾರ ತೋರುತ್ತಿಲ್ಲ."

ಇದಲ್ಲದೆ ಬಗರ್ ಹುಕುಂ ರೈತರು, ಭೂ ಸ್ವಾಧೀನಕ್ಕೆ ಗುರಿಯಾದವರು, ವಸತಿ ಹೀನರು, ವಿವಿಧ ಬೆಳೆ ಬೆಳೆದು ಬೆಲೆ ಕಾಣದವರು, ವಿವಿಧ ಇಲಾಖೆಗಳಡಿ ದುಡಿಯುತ್ತಿರುವ ಅಸಂಘಟಿತ ಹಾಗೂ ಗುತ್ತಿಗೆ ಕಾರ್ಮಿಕರು, ದಲಿತ-ಹಿಂದುಳಿದ-ಅಲ್ಪಸಂಖ್ಯಾತ ಸಮುದಾಯಗಳು, ಮಹಿಳೆಯರು - ಲೈಂಗಿಕ ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ನಡೆದಿಲ್ಲ. ಬದಲಾಗಿ ಜನರ ಹಕ್ಕೊತ್ತಾಯಗಳ ಕುರಿತು ಉದಾಸೀನ ತೋರುತ್ತಿರುವುದನ್ನು ನಿರ್ಣಯದಲ್ಲಿ ಕಟುವಾದ ಶಬ್ಧಗಳಿಂದ ತೀವ್ರವಾಗಿ ಖಂಡಿಸಿದೆ.

ಜನರಿಂದ ತುಂಬಿತುಳುಕಿದ ಸ್ವಾತಂತ್ರ್ಯ ಉದ್ಯಾನವನ:

'ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ, ಊರ ತುಂಬ ಹರಿದಂತೆ' ಮೂರು ದಿನಗಳ ಧರಣಿಯಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚು ಜನ ಜಮಾವಣೆಗೊಂಡಿದ್ದರು. ಬೆಂಗಳೂರಿನ ಹೃದಯ ಭಾಗದಲ್ಲಿ ವಾಹನಗಳ ಬದಲು ಜನರೇ ಕಾಣುತ್ತಿದ್ದರು. ಹಸಿರು, ಕೆಂಪು ನೀಲಿ, ಬಿಳಿ ಸೇರಿದಂತೆ ತಮ್ಮ ಸಂಘಟನೆಯ ಬಾವುಟಗಳನ್ನು ಹಿಡಿದು ತಂಡೋಪತಂಡವಾಗಿ ಸೈನಿಕ ತುಕಡಿಗಳಂತೆ ಧರಣಿ ಸ್ಥಳಕ್ಕೆ ಬಂದು ಸೇರುತ್ತಿದ್ದರು. ರೈತರು, ಕೃಷಿಕೂಲಿಕಾರರು, ವಿವಿಧ ವಿಭಾಗದ ಕಾರ್ಮಿಕರು ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದರು. ಪೆಂಡಾಲ್ ನಲ್ಲಿ ಸ್ಥಳಾವಕಾಶ ಕೊರತೆಯಾಗಿದ್ದರಿಂದ ಶೇಷಾದ್ರಿ ರಸ್ತೆಯ ಒಂದು ಭಾಗ ಮತ್ತು ಕಾಳಿದಾಸ ರಸ್ತೆಯನ್ನು ಆಕ್ರಮಿಸಿದರು. ಕೊನೆಗೆ ಅಲ್ಲಿಯೇ ಕುಳಿತುಕೊಳ್ಳಲು ಕುರ್ಚಿ ಮತ್ತು ಎಲ್ ಇಡಿ ಪರದೆಗಳನ್ನು ಹಾಕಿ ಕಾರ್ಯಕ್ರಮ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿತ್ತು.

ಮಹಾಧರಣಿಯಲ್ಲಿ 'ಅನ್ನ ದಾಸೋಹ'

'ಅನ್ನದಾತನ ಋಣ ತೀರಿಸುವ ಸಮಯ



ಬಂದಿದೆ, ಧರಣಿಗೆ ಸಹಾಯ ನೀಡಿ' ಎಂದು ಬೆಂಗಳೂರಿನ ಜನತೆಗೆ ಮಾಡಿದ ಮನವಿಗೆ ಸ್ಪಂದಿಸಿದ ಜನ, ದಿನಸಿ, ತರಕಾರಿಗಳನ್ನು ಉದಾರವಾಗಿ ನೀಡಿದ್ದಾರೆ. ಸಣ್ಣ ನೂಕುನುಗ್ಗಲಿಗೂ ಅವಕಾಶವಿಲ್ಲದಂತೆ ಊಟದ ವ್ಯವಸ್ಥೆಯನ್ನು ಮಾಡಿದ್ದು, ಎಲ್ಲರಿಂದಲೂ ಪ್ರಶಂಸೆ ವ್ಯಕ್ತವಾಗಿದೆ. ಈ ಕೆಲಸದಲ್ಲಿ ತೊಡಗಿದ ಎಲ್ಲ ಸ್ವಯಂಸೇವಕರನ್ನು ಸಂಯುಕ್ತ ಹೋರಾಟ – ಕರ್ನಾಟಕ ಸಮಿತಿ ಕೃತಜ್ಞತೆ ಸಲ್ಲಿಸಿದೆ.

ಟೆಂಟ್ ನಲ್ಲೇ ರಾತ್ರಿ ವಾಸ್ತವ್ಯ!

ಮೂರು ದಿನಗಳ ಧರಣಿಯಲ್ಲಿ ಎರಡು ರಾತ್ರಿ ಸಾವಿರಾರು ಜನರಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಬೇಕಿತ್ತು. ವಾಸ್ತವ್ಯಕ್ಕೆ ಯಾವುದೇ ವಿಶೇಷ ವ್ಯವಸ್ಥೆ ಮಾಡಿರಲಿಲ್ಲ. ಆದರೆ ಧರಣಿ ನಿರತರು ರಾತ್ರಿ ಟೆಂಟ್ ನಲ್ಲೇ ಸಾಮೂಹಿಕವಾಗಿ ವಾಸ್ತವ್ಯ ಮಾಡಿ ಬದ್ಧತೆ ಪ್ರದರ್ಶಿದರು. ಬೆಳಗಿನ ನಿತ್ಯಕರ್ಮಗಳಿಗೆ ತೊಂದರೆಯಾದರೂ ಬೇಸರಿಸದೇ ಧರಣಿಯಲ್ಲಿ ಪಾಲ್ಗೊಂಡರು.

ನಾಯಕರ ಮಾತಿನ ಮಧ್ಯೆ ಹೋರಾಟದ ಹಾಡುಗಳ ಕಲರವ:

40ಕ್ಕೂ ಹೆಚ್ಚು ಸಂಘಟನೆಗಳ ಸಹಭಾಗಿತ್ವದಲ್ಲಿ ನಡೆದ ಮಹಾಧರಣಿಯಲ್ಲಿ ನಾಯಕರ ಮಾತುಗಳಿಗೆ ಸಮಯದ ಮಿತಿ ಇದ್ದಾಗಲೂ ದಿನಪೂರ್ತಿ ಭಾಷಣಗಳ ವೋಘವೇ ನಡೆದಿತ್ತು. ಆದಾಗ್ಯೂ ಜನ ಬಿಟ್ಟ ಜಾಗ ಕದಲದೇ ನಾಯಕರ ಮಾತುಗಳನ್ನು ಆಲಿಸಿದರು. ಈ ಮಧ್ಯೆ ಹಾಡುತ್ತಿದ್ದ ಹೋರಾಟದ ಹಾಡುಗಳು ಮನಸ್ಸಿಗೆ ಮುದ ನೀಡುವ ಜತೆಗೆ ಹೋರಾಟದ ಕಿಚ್ಚನ್ನು ಇಮ್ಮಡಿಗೊಳಿಸಿದವು.

ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಕಂದಾಯ ಸಚಿವರಿಂದ ಮನವಿ ಸ್ವೀಕಾರ:

ಇದಕ್ಕೂ ಮೊದಲು ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಧರಣಿ ನಿರತರಿಂದ ಬೇಡಿಕೆಗಳ ಮನವಿಪತ್ರ ಸ್ವೀಕರಿಸಿ, 'ರೈತರು, ಕಾರ್ಮಿಕರು ಇತರೆ ದುಡಿಯುವ ಜನವಿಭಾಗಗಳ ಬಗ್ಗೆ ಕಾಳಜಿಯನ್ನು ಹೊಂದಿದೆ, ದೇಶದ ಪ್ರಜೆಗಳಿಗೆ ಸಂವಿಧಾನದತ್ತ ನೀಡಿರುವ ಹೋರಾಟದ ಹಕ್ಕನ್ನು ಗೌರವಿಸುತ್ತದೆ ಹಾಗೂ ದುಡಿಯುವ ಜನರ ಸಮಸ್ಯೆಗಳ ಕುರಿತು ಚರ್ಚಿಸಲು ಸರ್ಕಾರ ಮುಕ್ತವಾಗಿದೆ' ಎಂದರು.

ಸಾಂಸ್ಕೃತಿಕ ಲೋಕದ ಸ್ಪಂದನೆ:

ಮಹಾಧರಣಿಗೂ ಪೂರ್ವದಲ್ಲಿ ನಡೆದ ಆನ್ ಲೈನ್ ಬಹಿರಂಗ ಸಭೆಯಲ್ಲಿ ನಾಡಿನ ಸಾಕ್ಷಿ ಪ್ರಜ್ಞೆ ದೇವನೂರು ಮಹಾದೇವ ಭಾಗವಹಿಸಿ ಮಾತನಾಡಿದರು. ಪ್ರೊ.ಪುರುಷೋತ್ತಮ ಬಿಳಿಮಲೆ, ಪ್ರೊ.ರಹಮತ್ ತರೀಕರೆ, ಮುಖ್ಯಮಂತ್ರಿ ಚಂದ್ರು, ಡಾ.ವಿಜಯಮ್ಮ, ಬಿ.ಟಿ.ಲಲಿತಾನಾಯಕ್, ಇಂದೂಧರ ಹೊನ್ನಾಪುರ, ಕೆ.ಷರೀಫಾ, ಕೆ.ನೀಲಾ, ಮೀನಾಕ್ಷಿ ಬಾಳಿ ಮಹಾಧರಣಿಯಲ್ಲಿ ನೇರವಾಗಿ ಭಾಗವಹಿಸಿ ಮಾತನಾಡಿದರು.

ರಾಷ್ಟ್ರಧ್ವಜ ಆರೋಹಣದೊಂದಿಗೆ ಆರಂಭ, ಕಾಯ್ದೆ ದಹನದೊಂದಿಗೆ ಮುಕ್ತಾಯ:

ಪೌರ ಕಾರ್ಮಿಕರಾದ ನಾಗಲಕ್ಷ್ಮಿ, ಆದಿವಾಸಿ ಸಮುದಾಯದ ಮನು, ಕೃಷಿಕ ದೊಡ್ಡನಂಜಯ್ಯ, ಕೈಗಾರಿಕಾ ಕಾರ್ಮಿಕ ಹನುಮಂತರಾವ್ ಹವಾಲ್ದಾರ್, ಮಹಿಳೆಯರನ್ನು ಪ್ರತಿನಿಧಿಸಿ ಸುರೇಖ ರಜಪೂತ ಇವರುಗಳು ಸಾಮೂಹಿಕವಾಗಿ ರಾಷ್ಟ್ರಧ್ವಜ ಆರೋಹಣ ಮಾಡಿದರು. ಈ ಮೂಲಕ ಮಹಾಧರಣಿಗೆ ಚಾಲನೆ ನೀಡಲಾಯಿತು. ನವೆಂಬರ್ 28 ರ ಸಂಜೆ ವೇಳೆಗೆ ಮಹಾಧರಣಿಯನ್ನು ಮುಕ್ತಾಯಗೊಳಿಸುವ ನಿರ್ಣಯಕ್ಕೆ ಬರಲಾಯಿತು. ನಡುರಸ್ತೆಯಲ್ಲೇ ಜನ ವಿರೋಧಿ ಕಾಯ್ದೆಗಳ ಪ್ರತಿಗಳನ್ನು ಉರಿವ ಬೆಂಕಿಯಲ್ಲಿ ಸುಟ್ಟು ಘೋಷಣೆ ಕೂಗುವ ಮೂಲಕ ಪ್ರತಿಭಟನಾಕಾರರು ತಮ್ಮ ಆಕ್ರೋಶ ಹೊರಹಾಕಿದರು.

ಪುರುಷೋತ್ತಮ ಬಿಳಿಮಲೆ, ನಿವೃತ್ತ ಪ್ರಾಧ್ಯಾಪಕರು, ಜೆಎನ್ಯು, ದೆಹಲಿ

'ಕದನ ಕಣ' ಕೃತಿ ಬಿಡುಗೊಳಿಸಿ ಮಾತನಾಡಿದ ಬಿಳಿಮಲೆ ಅವರು 'ಮೋದಿ ಸರ್ಕಾರ ಸುಗ್ರೀವನಂತೆ ನಿದ್ರೆ ಮಾಡಿ, ಕೋವಿಡ್ ಅವಧಿಯಲ್ಲಿ ತರಾತುರಿಯಲ್ಲಿ ಕಾಯ್ದೆಗಳನ್ನು ಸುಗ್ರೀವಾಜ್ಞೆಯ ಮೂಲಕ ಅಪ್ರಜಾಸತ್ತಾತ್ಮಕವಾಗಿ ಜಾರಿ ಮಾಡಿತು. ಇದರ ವಿರುದ್ಧ ಎದ್ದು ಬಂದ ದೆಹಲಿಯ ರೈತರ ಹೋರಾಟವು ಕೃಷಿ ಬಿಕ್ಕಟ್ಟು, ಕೃಷಿಕನ ಸಮಸ್ಯೆಗಳ ಕುರಿತು ತಲಸ್ಪರ್ಷಿಯಾಗಿ ದೇಶದ ಗಮನ ಸೆಳೆಯಿತು. 780 ಜನ ರೈತರು ಈ ಹೋರಾಟದಲ್ಲಿ ಹುತಾತ್ಮರಾದರೂ ಈ ಹೋರಾಟದ ಛಲ ಬಿಡಲಿಲ್ಲ ಎಂಬುದು ಅತ್ಯಂತ ಮುಖ್ಯ. ಆದ್ದರಿಂದ ಸಾಹಿತಿ, ಬುದ್ಧಿಜೀವಿಗಳು, ಕಲಾವಿದರು, ಸಮಾಜದ ಆರಾಮಾದಾಯಕ ಸುರಕ್ಷಿತ ವಲಯದಿಂದ ಆಚೆ ಬಂದು ಚಳುವಳಿಗಳ ಜತೆ ನಿಲ್ಲುವುದು ನಮ್ಮ ಕರ್ತವ್ಯವಾಗಬೇಕು. ಎಚ್. ಆರ್.ನವೀನ್ ಕುಮಾರ್ ಅವರು ಹೋರಾಟದಲ್ಲಿ ಸುತ್ತಾಡಿ, ಶ್ರಮ ವಹಿಸಿ ಬರೆದ 'ಕದನ ಕಣ' ಪುಸ್ತಕವು ಮಹತ್ವದ ಕೃತಿಯಾಗಿದೆ.

ವಿಜೂ ಕೃಷ್ಣನ್, ಎಐಕೆಎಸ್ ರಾಷ್ಟ್ರೀ ಪ್ರಧಾನ ಕಾರ್ಯದರ್ಶಿ

2014ರಲ್ಲಿ ಚುನಾವಣೆಯಲ್ಲಿ ಆಕರ್ಷಕ ಭರವಸೆಗಳನ್ನು ನೀಡಿ ಬಿಜೆಪಿ ಅಧಿಕಾರಕ್ಕೆ ಬಂತು. ಆದರೆ ಈ 9 ವರ್ಷಗಳಲ್ಲಿ ರೈತ ಮತ್ತು ಕಾರ್ಮಿಕರ ಬದುಕು ಪಾತಾಳಕ್ಕೆ ಕುಸಿದಿದೆ. 4 ಲಕ್ಷಕ್ಕೂ ಹೆಚ್ಚು ರೈತರು, ಕಾರ್ಮಿಕರು ಮತ್ತು ಯುವಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೋದಿ ಸರ್ಕಾರದ ನೀತಿಗಳು ಜನರನ್ನು ಆತ್ಮಹತ್ಯೆಗೆ ದೂಡುತ್ತಿವೆ.

"ಪ್ರಸ್ತುತ ಐದು ರಾಜ್ಯಗಳಲ್ಲಿ ಚುನಾವಣೆಯಲ್ಲಿಯೂ ಮೋದಿ ಮತ್ತದೇ ಸುಳ್ಳು ಭರವಸೆ ನೀಡುತ್ತಿದ್ದಾರೆ. ರಾಜಸ್ಥಾನದಲ್ಲಿ 450ಕ್ಕೆ ಸಿಲಿಂಡರ್ ನೀಡುತ್ತೇವೆ ಎಂದು ಬಿಜೆಪಿ ಭರವಸೆ ನೀಡುತ್ತಿದೆ. ಆದರೆ, ಮೋದಿ ಅವರು ಅಧಿಕಾರಕ್ಕೆ ಬರುವ ಮುನ್ನ 380 ರೂ. ಇದ್ದ ಸಿಲಿಂಡರ್



ಬೆಲೆ, ಈಗ 1250 ರೂ. ದಾಟಿದೆ. ಈಗ ಅವರು ಸುಳ್ಳು ಭರವಸೆಗಳನ್ನ ನೀಡುತ್ತಿದ್ದಾರೆ"

ಆದ್ದರಿಂದ ಇಂತಹ ಜನದ್ರೋಹಿ ಸರ್ಕಾರವನ್ನು ಕಿತ್ತುಹಾಕಲು ನಾವೆಲ್ಲ ಪಣತೊಡಬೇಕು. ಶತ್ರುಗಳ ಎದೆಯಲ್ಲಿ ಭಯ ಬಿತ್ತುವ ಹೋರಾಟ ನಾವು ಕಟ್ಟಬೇಕು, ಅದಕ್ಕಾಗಿ ಜನತೆಯ ಹೃದಯದಲ್ಲಿ ಆತ್ಮವಿಶ್ವಾಸದ ಹೋರಾಟದ ಕಿಚ್ಚು ಹಚ್ಚಬೇಕು.

ವಿ ನಾಗರಾಜ್. ದಸಂಸ ಚಾಲನಾ ಸಮಿತಿಯ ಮುಖಂಡರು

"ಸ್ವತಂತ್ರ ಭಾರತದಲ್ಲೇ ಇಂದಿಗೂ ತಲೆ ಮೇಲೆ ಮಲ ಹೊರುವ ಪದ್ಧತಿ ಜಾರಿಯಲ್ಲಿದೆ. ದಲಿತ–ದಮನಿತರು ಇಂದಿಗೂ ಅಸಹನೀಯ ದಮನಕ್ಕೆ ಗುರಿಯಾಗಿದ್ದಾರೆ. ಇಂದು ಆಳುವವರಿಗೆ ರೈತರು, ಕಾರ್ಮಿಕರು & ದಲಿತರ ಹಿತ ಯಾಕೆ ಮುಖ್ಯವಲ್ಲ ಎಂದು ನಾವು ಗಂಭೀರವಾಗಿ ಆಲೋಚಿಸಬೇಕಿದೆ. ಕೆ.ಎಸ್.ಪುಟ್ಟಣ್ಣಯ್ಯ ಶಾಸಕರಾಗಿದ್ದಾಗ ಎಲ್ಲ ಬಡಜನತೆಯ ಸಮಸ್ಯೆಗಳ ಬಗ್ಗೆ ಅವರು ದನಿಯೆತ್ತುತ್ತಿದ್ದರು. ಆದ್ದರಿಂದ ನಾವು ನಮ್ಮ ಪ್ರತಿನಿಧಿಗಳಾಗಿ ಯಾರಿರಬೇಕು ಎಂದು ಆಲೋಚಿಸಬೇಕು, ಚುನಾವಣೆಯ ವ್ಯವಸ್ಥೆಯನ್ನು ಬದಲಿಸಬೇಕು, ಅಂತಹ ಶಕ್ತಿ ಈ ಹೋರಾಟಕ್ಕೆ ಬರಲಿ.

ಪ್ರೊ. ಪ್ರಕಾಶ್ ಕಮ್ಮರಡಿ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷರು

ಭಾರತವು ನಿಜವಾದ ಪ್ರಜಾಪ್ರಭುತ್ವ ದೇಶವಾಗಿದ್ದರೆ ಇಲ್ಲಿ ರೈತರು ನಿರಂತರ ಧರಣಿ ಮಾಡಬೇಕಾದ ಪರಿಸ್ಥಿತಿ ಇರುತ್ತಿರಲಿಲ್ಲ. ಇಲ್ಲಿ ಸಾಯುವ ರೈತರ ಅಂಕಿಅಂಶ ಮಾತ್ರ ಸಿಗುತ್ತದೆ, ಬದುಕಿರುವ ರೈತರ ಬದುಕನ್ನು ಉತ್ತಮಪಡಿಸಲು ಏನೂ ಸಿಗುವುದಿಲ್ಲ. ಕೊರೊನಾ ಕಾಲದಲ್ಲೂ ರೈತರು ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾಗಿ ಬಂದಿದ್ದು ದುರದೃಷ್ಟಕರ. ಹೀಗಾಗಿ ದುಡಿಯುವ ಜನರ ಪರವಾದ ನೈಜ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಗುರಿ ನಮ್ಮದಾಗಬೇಕು.

ಡಾ.ಸಿದ್ದನಗೌಡ ಪಾಟೀಲ

ರೈತ–ಕಾರ್ಮಿಕರು ಬೆಕ್ಕುಗಳಲ್ಲ, ಬದಲಾಗಿ ಹುಲಿಗಳು. ಇದನ್ನು ನೆನಪು ಮಾಡಲು ನಾವು ಮಹಾಧರಣಿಯಲ್ಲಿ ಸೇರಿದ್ದೇವೆ. ಆದರೆ ನಮ್ಮ ಬಲ ಹಿಂದೂ, ಮುಸ್ಲಿಂ, ದಲಿತ, ಬ್ರಾಹ್ಮಣ ಎಂದು ಒಡೆದು ಚೂರಾಗಿ ಬೆಕ್ಕಿನಂತೆ ಆಗಿದ್ದೇವೆ. ದುಡಿವ ಜನ ಒಗ್ಗಟ್ಟಾದರೆ ಹುಲಿಯ ಬಲ ನಮ್ಮದಾಗುತ್ತದೆ. ಇಲ್ಲಿ ಕೇಂದ್ರಕ್ಕೆ ಮನವಿ ಸಲ್ಲಿಸಲು ಬಂದಿಲ್ಲ, ಅಧಿಕಾರದಿಂದ ಕೆಳಗಿಳಿಯಿರಿ ಎಂದು ಸಾರಲು ಬಂದಿದ್ದೇವೆ. ದೆಹಲಿಯ ಬೀದಿಯಲ್ಲಿ ನಿಂತ ರೈತರು ಪಾರ್ಲಿಮೆಂಟ್ ಅನ್ನು ನಿಯಂತ್ರಿಸಿದರು. ಅದನ್ನೇ ಮುಂದುವರಿಸಿ ಮೋದಿ ಸರ್ಕಾರವನ್ನು ಇಳಿಸಬೇಕಿದೆ.

ಬಡಗಲಪುರ ನಾಗೇಂದ್ರ

ಸ್ವತಂತ್ರ ನಂತರ ರೈತರ ಸಮುದಾಯ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ. ಇದರ ವಿರುದ್ಧ ನಿರಂತರ ಹೋರಾಟ ನಡೆದಿದೆ. ಆದರೆ ದೆಹಲಿ ಹೋರಾಟ ರೈತರ ಆಕ್ರೋಶ ಕಟ್ಟೆ ಒಡೆದ ಹೋರಾಟವಾಗಿದೆ. 780 ರೈತರು ತಮ್ಮ ಪ್ರಾಣವನ್ನು ಇದಕ್ಕೆ ಅರ್ಪಿಸಿದ್ದಾರೆ. ರೈತರ ಈ ತೀವ್ರ ಹೋರಾಟವು ಕಾಯ್ದೆ ವಾಪಾಸ್ ಪಡೆಯಲೇ ಬೇಕಾದ ಸ್ಥಿತಿ ತಂದಿಟ್ಟಿತ್ತು.

ಸ್ವಾತಂತ್ರ್ಯಕ್ಕಾಗಿ ಜನ ತಮ್ಮ ಆಯುಷ್ಯವನ್ನೆ ಮುಡಿಪಿಟ್ಟು, ಎರಡು ಶತಮಾನಗಳ ಹೋರಾಟ ನಡೆಸಿದ್ದಾರೆ. ಆದರೆ ನಾವೀಗ ಸ್ವಾತಂತ್ರ್ಯ ಮತ್ತು ಸಂವಿಧಾನವನ್ನು ಉಳಿಸಿಕೊಳ್ಳಲು ಹೋರಾಟ ಮುಂದುವರಿಸಬೇಕಿದೆ. 2024ರ ಚುನಾವಣೆಯಲ್ಲಿ ಭಾರತದ ದೇಶದ ಜನರಿಗೆ ದೊಡ್ಡ ಮಹತ್ವವಾದ ಚುನಾವಣೆ. ಈ ಚುನಾವಣೆಯಲಲಿ ಕೋಮುವಾದಿ, ಬಂಡವಾಳಶಾಹಿಯನ್ನು ಪ್ರತಿನಿಧಿಸುವ ಮೋದಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಲ್ಲಿ, ಎಂದೂ ಚುನಾವಣೆ ನಡೆಯುವುದಿಲ್ಲ. ಬಿಜೆಪಿ ಮತ್ತು ಸಂಘಪರಿವಾರವನ್ನು ಪ್ರತಿನಿಧಿಸುವ ಜನರು ಅಧಿಕಾರಕ್ಕೆ ಬಂದರೆ ಭಾರತ ಸೋಲುತ್ತದೆ. ಆದ್ದರಿಂದ 2024ರ ಚುನಾವಣೆಯಲ್ಲಿ ಜನಚಳವಳಿಗಳು ನಿರ್ಣಾಯಕ ಪಾತ್ರ ವಹಿಸಬೇಕು.

ಕೆ.ಎನ್.ಉಮೇಶ್, ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ

"ಹೋರಾಟದ ಮುಂದೆ ಇರುವಂತದ್ದು ಪ್ರಮುಖವಾಗಿ 21 ಅಂಶಗಳ ಬೇಡಿಕೆಯಾಗಿದೆ. ಕನಿಷ್ಠ ವೇತನ ನೀಡದ ಉದ್ದಿಮೆ ಭಾರತದಿಂದ ಹೊರಗೆ ಹೋಗುವಂತೆ ದೇಶದ ಸುಪ್ರೀಂಕೋರ್ಟ್ ಹೇಳಿದೆ. ಸರ್ಕಾರ ಅಮೃತ ಕಾಲದ ಬಗ್ಗೆ ಹೇಳುತ್ತಿದೆ, ಆದರೆ ಕೇಂದ್ರ ಸರ್ಕಾರ ಕಾರ್ಪೊರೇಟ್ ಬಂಡವಾಳದಾರರಿಗೆ ಅಮೃತ ಕೊಟ್ಟು, ದುಡಿಯುವ ಜನರಿಗೆ ವಿಷವುಣಿಸುತ್ತಿದೆ. 2019ರಲ್ಲಿ ವೇತನ ಸಂಹಿತೆ ಮತ್ತು 2020ರಲ್ಲಿ ಕೈಗಾರಿಕೆ ಸಂಹಿತೆ ತಂದು ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಂಡರು. ಇದೇ ವೇಳೆ ರೈತ ವಿರೋಧಿ ಕೃಷಿ ಕಾನೂನು ಮತ್ತು ಕಾರ್ಮಿಕ ವಿರೋಧಿ ಕಾರ್ಮಿಕ ಕಾನೂನನ್ನು ತಂದರು. ಹಾಗಾಗಿಯೆ ಅದರ ವಿರುದ್ಧ ರೈತ ಕಾರ್ಮಿಕರು ಒಟ್ಟಾಗಿ ಹೋರಾಟ ಮಾಡಲು ತೀರ್ಮಾನಕ್ಕೆ ಬಂದಿದ್ದೇವೆ.

ನ್ಯಾಯಮೂರ್ತಿಗಳು ನ್ಯಾಯ ನೀಡಲು ಹೋದರೆ ಅವರನ್ನು ವರ್ಗಾವಣೆ ಮಾಡಲಾಗುತ್ತಿದೆ, ನ್ಯಾಯ ಕೇಳುವವರನ್ನು ಭಯೋತ್ಪಾದಕ ಎನ್ನಲಾಗುತ್ತಿದೆ. ಜನರು ಜಾತಿ ಮತ ಭೇದ ಮರೆತು ನಿಂತಾಗ ರಾಮ – ಕೃಷ್ಣರನ್ನು ತರುತ್ತಾರೆ. ಕಾರ್ಪೊರೇಟ್ ಧಣಿಗಳಿಗಾಗಿ ಸರ್ಕಾರ ಜನರನ್ನು ವಿಭಜನೆ ಮಾಡಿದೆ. ಆದರೆ ರೈತ ಹೋರಾಟ ಜನರನ್ನು ಒಟ್ಟುಗೂಡಿಸಿತು. ಈ ಹೊತ್ತಿನಲ್ಲಿ ನಾವು ನಮ್ಮ ಐಕ್ಯತೆ ಉಳಿಸುವ ಬಗ್ಗೆ ಪ್ರತಿಜ್ಞೆ ಮಾಡಬೇಕಿದೆ.

ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯಾಧ್ಯಕ್ಷರು

ದೇಶದ ಮಕ್ಕಳು ಅಪೌಷ್ಠಿಕತೆಯಿಂದ ಮಕ್ಕಳು ಸಾಯುತ್ತಿದ್ದಾರೆ. ಹೆರಿಗೆ ವೇಳೆ ಹೆಣ್ಣು ಮಕ್ಕಳು ಸಾಯುತ್ತಿದ್ದಾರೆ. ಹಸಿವಿನ ಸೂಚ್ಯಾಂಕದಲ್ಲಿ 111ನೇ ಸ್ಥಾನಕ್ಕೆ ಇಳಿದಿದೆ. ಈ ಅಂಕಿಅಂಶಗಳು ಕೇಂದ್ರ ಸರ್ಕಾರ ನಿಜಕ್ಕೂ ತಲೆ ತಗ್ಗಿಸುವ ವಿಚಾರವಾಗಬೇಕಿತ್ತು. ಹೀಗಿದ್ದೂ ಮೋದಿ ವಿಶ್ವಗುರು, ಐದು ಟ್ರಿಲಿಯನ್ ಆರ್ಥಿಕತೆ ಮಾಡುತ್ತೇವೆ ಎಂದು ಲಜ್ಜೆಗೆಟ್ಟು ಬೊಬ್ಬೆ ಹಾಕಲಾಗುತ್ತಿದೆ.

33% ಮಹಿಳಾ ಮೀಸಲಾತಿ ಜಾರಿ ಮಾಡುತ್ತೇವೆ ಎನ್ನಲಾಗುತ್ತಿದೆ. ಆದರೆ ಇದು ಮುಂದಿನ ಚುನಾವಣೆಗೂ ಸಿಗುವುದಿಲ್ಲ. ಮಾತ್ರವಲ್ಲ, 2014ರಲ್ಲೇ ಕಾಯ್ದೆ ತಂದು 2024ರಲ್ಲಿ ಜಾರಿಗೆ ತರಬಹುದಿತ್ತು. ಹೀಗಾಗಿ ಇದೊಂದು ಚುನಾವಣೆ ಗಿಮಿಕ್'

ಆಹಾರ, ಆರೋಗ್ಯ, ಶಿಕ್ಷಣ ಇಲ್ಲದ ದೇಶವನ್ನು ಸದೃಡವಾಗಿ ಕಟ್ಟಲು ಸಾಧ್ಯವಿಲ್ಲ. ಆದರೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಹತ್ತು ವರ್ಷಗಳಲ್ಲಿ ಈ ಕ್ಷೇತ್ರಗಳಿಗೆ ಅನುದಾನ ಜಾಸ್ತಿಯಾಗಿಲ್ಲ. ಬದಲಾಗಿ ಕಡಿತ ಮಾಡಲಾಗಿದೆ. ಶ್ರೀಮಂತರಿಗೆ 2% ತೆರಿಗೆ ಹಾಕಬೇಕೆನ್ನುವ ಆರ್ಥಿಕ ತಜ್ಞರ ಸಲಹೆಗೆ ಮೋದಿ ಸರ್ಕಾರ ಪರಿಗಣಿಸುತ್ತಿಲ್ಲ. ತಜ್ಞರ ಸಲಹೆಯಂತೆ ಎರಡರಷ್ಟು ತೆರಿಗೆ ಹಾಕಿದ್ದಲ್ಲಿ ಆಹಾರ, ಶಿಕ್ಷಣ ಮತ್ತು ಆರೋಗ್ಯವನ್ನು ಉಚಿತವಾಗಿ ಕೊಡಬಹುದಾಗಿದೆ.

ಮೀನಾಕ್ಷಿ ಸುಂದರಂ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ

ಹಾಲು ಬೇಕಾದರೆ ಹಸುವಿಗೆ ಮೇವು ಹಾಕಬೇಕು, ಬದಲಾಗಿ ಕತ್ತೆಗೆ ಮೇವು ಹಾಕಿದರೆ ಹಸು ಹಾಲು ನೀಡುವುದಿಲ್ಲ. 20 ವರ್ಷಗಳಿಂದ ಈ ದೇಶದಲ್ಲಿ ಸಂಪತ್ತನ್ನು ಸೃಷ್ಟಿ ಮಾಡುವ ಕಾರ್ಮಿಕರಿಗೆ ಸಂಬಳ ಹೆಚ್ಚುತ್ತಿಲ್ಲ. ವೇತನ ಹೆಚ್ಚು ಮಾಡುವುದೆಂದರೆ ಇವರಿಗೆ ನೋವಾಗುತ್ತದೆ. ಆದರೆ ಟೆಸ್ಲಾ ಎಂಬ ವಿದೇಶಿ ಕಾರಿಗೆ ಆಮದು ಸುಂಕ ಕಡಿತ ಮಾಡಲು ಮೋದಿ ಸರ್ಕಾರ ಒಪ್ಪಿಕೊಂಡಿದೆ. ಸಣ್ಣ ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಆದರೆ ಅವರ ಮಕ್ಕಳಿಗೆ ಉದ್ಯೋಗ ನೀಡಲು ತಯಾರಿಲ್ಲ. ಭಾರತ್ ಮಾತಾಕಿ ಜೈ ಎನ್ನುತ್ತಾರೆ, ಆದರೆ ಭಾರತ ಮಾತೆಯ ಪುತ್ರನಿಗೆ ಖಾಯಂ ಉದ್ಯೋಗ ನೀಡುತ್ತಿಲ್ಲ.

ಕೇಂದ್ರ ಸರ್ಕಾರ ಸ್ಯಾಮ್‌ಸ್ಯಾಂಗ್ ಕಂಪನಿಗೆ ಈವರೆಗೆ 2,48,000 ಕೋಟಿ ರೂಪಾಯಿ 'ಉತ್ಪಾದಕ ಪ್ರೋತ್ಸಾಹ ಧನ' ನೀಡಿದೆ. ಆದರೆ ರೈತರಿಗೆ ಬೆಂಬಲ ಬೆಲೆ ನೀಡಲು ಇವರ ಬಳಿ ದುಡ್ಡಿಲ್ಲ. ಅಂದರೆ ಇವರು ಹಸುವಿಗೆ ಮೇವು ಹಾಕುವ ಬದಲು ಕತ್ತೆಗೆ ಮೇವು ಹಾಕುತ್ತಿದ್ದಾರೆ. ಹೀಗೆ ಕಾರ್ಪೊರೇಟ್ ಕುಳಗಳೆಂಬ ಕತ್ತೆಗಳಿಗೆ ಮೇವು ಹಾಕಿ ದೇಶದ ದುಡಿಯುವ ಜನರನ್ನು ಹಸಿವಿಗೆ ನೂಕುವ ಇಂತಹವರ ಸೊಂಟ ಮುರಿವ ಶಕ್ತಿ ರೈತ ಕಾರ್ಮಿಕ ಚಳವಳಿಗೆ ಇದೆ.

ಎಸ್.ಆರ್.ಹಿರೇಮಠ್

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ 'ಪೂರ್ಣ ಸ್ವರಾಜ್ಯ' ಎಂಬ ಪ್ರತಿಜ್ಞೆಯನ್ನು ಘೋಷಿಸಿದ್ದರು. ಅದರ ಉದ್ದೇಶ, ದೇಶದ ಪ್ರತಿಯೊಬ್ಬ ಪ್ರಜೆಯೂ ಗೌರವಯುತ ಬದುಕನ್ನ ಕಟ್ಟಿಕೊಳ್ಳಬೇಕೆಂಬುದಾಗಿತ್ತು. ಯಾವ ಸರ್ಕಾರ ಜನರನ್ನು ಶೋಷಣೆ ಮಾಡುತ್ತದೆಯೋ, ಅಂತಹ ಸರ್ಕಾರವನ್ನು ಕಿತ್ತೊಗೆಯಬೇಕು ಎಂದೂ ಆ ಹೋರಾಟಗಾರರು ಹೇಳಿದ್ದರು. ಈಗ ನಾವೂ 'ಚಲೇ ಜಾವ್' ಚಳುವಳಿಯನ್ನು **ಪುಟ 14 ಕ್ಕೆ**

ದಲಿತ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಡಿಸೆಂಬರ್ 4 ರಂದು ದೆಹಲಿಯಲ್ಲಿ ಮಹಾ ಸಮಾವೇಶಕ್ಕಾಗಿ ವ್ಯಾಪಕ ಸಿದ್ದತೆ

ದೇಶದ ವಿವಿಧ ರಾಜ್ಯಗಳಲ್ಲಿ, ವಿಭಿನ್ನ ವಿಚಾರಗಳು, ಧರ್ಮಗಳು, ಜಾತಿಗಳು, ಪ್ರದೇಶಗಳು, ಭಾಷಾ ಮತ್ತು ರಾಜಕೀಯದ ಜನರು ಮತ್ತು ಸಂಘಟನೆಗಳು 2023ರ ಡಿಸೆಂಬರ್ 4 ರಂದು ದೆಹಲಿಗೆ ಬರಲು ತಯಾರಿ ನಡೆಸುತ್ತಿವೆ. ಈ ಎಲ್ಲಾ ಜನರು ಮತ್ತು ಸಂಘಟನೆಗಳು ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿವೆಯಾದರೂ, ಅವರೆಲ್ಲರೂ ಹಲವು ಒಮ್ಮತದ ವಿಷಯಗಳ ಮೇಲೆ ಒಟ್ಟುಗೂಡುತ್ತಿದ್ದಾರೆ, ಇದು ನಮ್ಮ ದೇಶದಲ್ಲಿ ಹುಟ್ಟಿನ ಆಧಾರದ ಮೇಲೆ ತಾರತಮ್ಯ ಮತ್ತು ದಬ್ಬಾಳಿಕೆಯ ವಿರುದ್ಧದ ಚಳುವಳಿಯಾಗಿದೆ. ಜಾತಿ ವ್ಯವಸ್ಥೆ ಆಧಾರಿತ ದಬ್ಬಾಳಿಕೆ ಮತ್ತು ಹಿಂಸೆಯ ವಿರುದ್ಧ ಅವರೆಲ್ಲರೂ ಒಟ್ಟುಗೂಡುತ್ತಿದ್ದಾರೆ. ಈ ಶೋಷಣೆಯ ವ್ಯವಸ್ಥೆಯು ಮಾನವನ ಅಸ್ಮಿತೆಯನ್ನು ಜಾತಿಗೆ ಮಾತ್ರ ಸೀಮಿತಗೊಳಿಸುತ್ತದೆ.

ಭಾರತದಲ್ಲಿ ಶೋಷಣೆಯ ವ್ಯವಸ್ಥೆಯ ಪ್ರಮುಖ ಅಸ್ತ್ರವೆಂದರೆ ಅದು ಜಾತಿ ವ್ಯವಸ್ಥೆ. ಇದು, ಶೋಷಿತ ಜನರನ್ನು ಅವರ ಉನ್ನತಿಗಾಗಿನ ಅವಕಾಶಗಳು ಮತ್ತು ಸಾಧನಗಳಿಂದ ವಂಚಿತರನ್ನಾಗಿಸುತ್ತದೆ. ಶತ ಶತಮಾನಗಳಷ್ಟು ಹಳೆಯದಾದ ಜಾತಿ ವ್ಯವಸ್ಥೆಯು ಶೋಷಿತ ಜಾತಿಗಳನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿಯುವಂತೆ ಮಾಡಿದೆ. ಧರ್ಮ ಮತ್ತು ಅಲೌಕಿಕ ಶಕ್ತಿಯೊಂದಿಗೆ ಅದರ ವಿರುದ್ಧದ ಪ್ರತಿಭಟನೆಯ ಧ್ವನಿಯನ್ನು ಶಕ್ತಿಹೀನಗೊಳಿಸಿದೆ. ಇದನ್ನು ವಿರೋಧಿಸಿ ದೇಶಾದ್ಯಂತದ ಪ್ರಗತಿಪರರು ಮತ್ತು ಪ್ರಗತಿಪರ ಸಂಘಟನೆಗಳು ಒಂದೇ ವೇದಿಕೆಯಲ್ಲಿ ಸೇರಿ ಪ್ರತಿಭಟನೆ ನಡೆಸುತ್ತಿವೆ. ಡಿಸೆಂಬರ್ 4ರ ಸಮಾವೇಶದಲ್ಲಿ, ದೇಶದಾದ್ಯಂತ ಸಂಗ್ರಹಿಸಿದ ಒಂದು ಕೋಟಿ ಸಹಿಗಳುಳ್ಳ ಮನವಿ ಪತ್ರವನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಲಿದ್ದಾರೆ.

ಬ್ರಾಹ್ಮಣವಾದ ಮತ್ತು ಮನುವಾದದ ವಿರುದ್ಧ

ಇದು ಯಾವುದೇ ಜಾತಿಯ ವಿರುದ್ಧದ ಹೋರಾಟವಲ್ಲ, ಬದಲಿಗೆ ಜಾತಿವಾದದ ವಿರುದ್ಧ ಸಮಾನತೆಗಾಗಿ ನಡೆಯುವ ಹೋರಾಟ. ಯಾವುದೇ ಜಾತಿ, ಧರ್ಮದಲ್ಲಿ ಹುಟ್ಟಿದ್ದರೂ ಸಮಾನತೆಯ ಸಮಾಜವನ್ನು ನಿರ್ಮಿಸಲು ಬಯಸುವವ ಎಲ್ಲರೂ ಇದರಲ್ಲಿ ಭಾಗಿಯಾಗುತ್ತಾರೆ. ಇದು ಯಾರ ಮೇಲುಗೈಗಾಗಿ ನಡೆಯುವ ಹೋರಾಟವಲ್ಲ. ಇದು ಬಾಬಾ ಸಾಹೇಬರ ಕನಸಿನಂತೆ ಜಾತಿ ವಿನಾಶದ ಆಂದೋಲನ. ಆದ್ದರಿಂದ ಸಮಾನತೆಗಾಗಿ ಹೋರಾಟ ನಡೆದಾಗ ದಲಿತ ಜಾತಿಗಳಲ್ಲಿನ ತಾರತಮ್ಯದ ವಿರುದ್ಧವೂ ಹೋರಾಟ ನಡೆಸಬೇಕಾಗುತ್ತದೆ. ದಲಿತರಲ್ಲಿ ಅಸ್ತಿತ್ವದಲ್ಲಿರುವ ಮೇಲು–ಕೀಳು ಎಂಬ ಪರಿಕಲ್ಪನೆಗಳನ್ನೂ ಪ್ರಶ್ನಿಸಬೇಕಾಗುತ್ತದೆ. ಮಹಿಳಾ ಸಮಾನತೆಯ ಪ್ರಶ್ನೆಯು ಇದಕ್ಕೆ ಆಳವಾಗಿ ಸಂಬಂಧಿಸಿದೆ. ದಲಿತ ಚಳವಳಿಯು ಮಹಿಳಾ ಸಮಾನತೆಗಾಗಿ ಹೋರಾಟ ನಡೆಸಬೇಕಿದೆ. ಜಾತಿ ವ್ಯವಸ್ಥೆ ಇರುವವರೆಗೂ ಅದರಲ್ಲಿ ಶ್ರೇಣೀಕರಣವಿರುತ್ತದೆ, ಹಾಗಾಗಿ ಜಾತಿ ವ್ಯವಸ್ಥೆಯ ಮೇಲೆಯೇ ದಾಳಿ ನಡೆಸಬೇಕಾಗುತ್ತದೆ ಎಂಬುದು ಸ್ಪಷ್ಟ. ಮತ್ತು ಜಾತಿ ವ್ಯವಸ್ಥೆಗೆ ಬಲವಾದ ನೆಲೆಯನ್ನು ಒದಗಿಸುವ ಮೂಲಗಳ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ. ಆದ್ದರಿಂದ ಈ ಹೋರಾಟವು ಬ್ರಾಹ್ಮಣವಾದದ ವಿರುದ್ಧ ಅಥವಾ, ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ ಮನುವಾದದ ವಿರುದ್ಧದ ಹೋರಾಟವಾಗಿದೆ.

ಮನುಸ್ಮೃತಿಯು ಶತಮಾನಗಳಿಂದ ಶೂದ್ರರ ಮೇಲಿನ ಅಮಾನವೀಯ ಶೋಷಣೆಯನ್ನು ನ್ಯಾಯಸಮ್ಮತಗೊಳಿಸಲು ಬಳಸಲ್ಪಟ್ಟ ವಿವಾದಾತ್ಮಕ ದಾಖಲೆಯಾಗಿದೆ. ಮನುಸ್ಮೃತಿಯು ಶೂದ್ರರಿಗಾಗಿ ಅನೇಕ ಅಮಾನವೀಯ ಕಾನೂನುಗಳನ್ನು ರೂಪಿಸಿದೆ. ಉದಾಹರಣೆಗೆ ಶೂದ್ರರು ಸ್ವಂತ ಆಸ್ತಿಯನ್ನು ಹೊಂದುವಂತಿರಲಿಲ್ಲ, ಏಕೆಂದರೆ ಅವರೇ ಸ್ವತಃ ಮೂರು ಉನ್ನತ ವರ್ಣಗಳ ಸೇವಕರಾಗಿದ್ದರು. ಆದ್ದರಿಂದ, ಮನುಸ್ಮೃತಿಯಲ್ಲಿ ಶೂದ್ರರನ್ನು ಮನುಷ್ಯರೆಂದು ಪರಿಗಣಿಸಲಾಗುವುದಿಲ್ಲ ಮತ್ತು ಅವರು ಶೋಷಣೆಗೆ ಮಾತ್ರ ಅರ್ಹರು. ಮನುವಾದದ ಮೇಲೆ ಹೋರಾಟ ನಡೆಸದೆ, ಜಾತೀಯತೆಯ ವಿರುದ್ಧ ಮಾಡುವ ಯಾವುದೇ ಚಳುವಳಿ ಅಪೂರ್ಣವಾಗುತ್ತದೆ. ಅಂಥವರು ತನ್ನ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ.

ಅಸಮಾನತೆಗಳನ್ನು ಬಲಪಡಿಸುವತ್ತ ಬಿಜೆಪಿ ಸರ್ಕಾರ

ಕಳೆದ ಒಂಬತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರದ ನೀತಿಗಳು ಮತ್ತು ನಡವಳಿಕೆಯು ಮುಖ್ಯವಾಗಿ ಎಲ್ಲಾ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳನ್ನು ಕಿತ್ತುಹಾಕುವ ಮತ್ತು ಜಾತಿ ಮತ್ತು ಇತರ ಎಲ್ಲಾ ಸಾಮಾಜಿಕ ಅಸಮಾನತೆಗಳನ್ನು ಬಲಪಡಿಸುವತ್ತ ಗಮನಹರಿಸಿದೆ. ಬಿಜೆಪಿ ಸರ್ಕಾರದಲ್ಲಿ ದಲಿತರ ಮೇಲಿನ ಹಲ್ಲೆಗಳು ಹೆಚ್ಚಿವೆ. ದಲಿತರಿಗೆ ಸಂವಿಧಾನದ ಅವಕಾಶಗಳು ದುರ್ಬಲಗೊಂಡಿವೆ ಮತ್ತು ಅವರ ಜೀವನಕ್ಕೆ ಅಗತ್ಯವಾದ ಸಮಾಜ ಕಲ್ಯಾಣ ಯೋಜನೆಗಳ ಅಡಿಯಲ್ಲಿ ನೀಡಲಾದ ಮೂಲ ಸೌಕರ್ಯಗಳು ದುರ್ಬಲಗೊಂಡಿವೆ. ಒಂದೆಡೆ ಸಮಾಜದಲ್ಲಿ ಜಾತಿ ಮೇಲುಗೈ ಎಂಬ ಭಾವನೆ ಪ್ರಬಲವಾಗಿದ್ದು, ಇದರ ನೇರ ಪರಿಣಾಮ ದಲಿತರ ದಮನ ಮತ್ತು ಇವರ ಮೇಲಿನ ಆರ್ಥಿಕ ಹೊರೆ ಹೆಚ್ಚಿದೆ. ಬಿಜೆಪಿ ಸರ್ಕಾರದ ನವ–ಉದಾರವಾದಿ ಆರ್ಥಿಕ ನೀತಿಯನ್ನು ಜಾರಿಗೆ ತರುತ್ತಿರುವ ಮನುವಾದಿ ಸಿದ್ಧಾಂತವೇ ಇದಕ್ಕೆ ಪ್ರಮುಖ ಕಾರಣ. ಈ ಕಾರಣದಿಂದಾಗಿ, ಜಾತೀಯತೆಯ ವಿರುದ್ಧದ ಇಂತಹ ಆಂದೋಲನವು ಇಂದಿನ ಅಗತ್ಯವಾಗಿದೆ.

ಆರೆಸ್ಸೆಸ್ ಜಾತಿ ವ್ಯವಸ್ಥೆಯನ್ನು ಬೆಂಬಲಿಸುತ್ತದೆ

ಬಿಜೆಪಿ ಸರ್ಕಾರದ ನಾಯಕತ್ವ ತನ್ನನ್ನು ತಾನು ಆರ್‌ಎಸ್‌ಎಸ್ ಪ್ರಚಾರಕ್ ಎಂದು ಕರೆದುಕೊಳ್ಳುತ್ತಿದೆ. ಆರೆಸ್ಸೆಸ್‌ನ ರಾಜಕೀಯ ಸಂಘಟನೆ ಬಿಜೆಪಿ. ಆದುದರಿಂದ ಬಿಜೆಪಿ ಸರ್ಕಾರ ಆರೆಸ್ಸೆಸ್ ನೀತಿಯನ್ನು ಜಾರಿಗೆ ತಂದರೂ ಆಶ್ಚರ್ಯವಿಲ್ಲ. ತಮ್ಮ ಕನಸಿನ ರಾಷ್ಟ್ರವಾದ ‘ಹಿಂದೂ ರಾಷ್ಟ್ರ’ವನ್ನು ನಿರ್ಮಿಸಲು ಪ್ರಭುತ್ವದ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಆರ್‌ಎಸ್‌ಎಸ್‌ನ ನಿಜವಾದ ಅಜೆಂಡಾ. ಆರ್‌ಎಸ್‌ಎಸ್ ಪ್ರಾರಂಭದಿಂದಲೂ ಬ್ರಾಹ್ಮಣ ಸಂಘಟನೆಯಾಗಿತ್ತು. ಸ್ವಾತಂತ್ರ್ಯದ ನಂತರ ಅದು ಹಿಂದೂ ಕೋಡ್ ಬಿಲ್‌ನ ತಿದ್ದುಪಡಿಯನ್ನು ವಿರೋಧಿಸಿತು. ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಬಿಜೆಪಿಯ ವಿರೋಧವೂ ಅದೇ ಆಧಾರದ ಮೇಲೆ ಇತ್ತು. ಆರೆಸ್ಸೆಸ್ ಜಾತಿ ವ್ಯವಸ್ಥೆಯನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತದೆ. ಗೋಳ್ವಾಲ್ಕರ್ ಅವರು ತಮ್ಮ ಪುಸ್ತಕವಾದ 'ಬಂಚ್ ಆಫ್ ಥಾಟ್ಸ್', ಭಾಗ 2, ಅಧ್ಯಾಯ 10 ರಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ವೈಭವೀಕರಿಸಿ ಬರೆದಿದ್ದಾರೆ.

ಸಂವಿಧಾನದ ಮೇಲೆ ಯೋಜಿತ ದಾಳಿ

ಸಂವಿಧಾನ ಸಭೆಯು ಭಾರತದ ಸಂವಿಧಾನವನ್ನು ಅಂತಿಮಗೊಳಿಸಿದಾಗ, **RSS** ಮುಖವಾಣಿ 'ಆರ್ಗನೈಸರ್' ತನ್ನ ಸಂಪಾದಕೀಯದಲ್ಲಿ 30 ನವೆಂಬರ್ 1949 ರ ಸಂಚಿಕೆಯಲ್ಲಿ ವಿಷಾದ ವ್ಯಕ್ತಪಡಿಸಿದ್ದು ಹೀಗೆ, "ಆದರೆ, ಅದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ವಿಶಿಷ್ಟ ಸಾಂವಿಧಾನಿಕ ಅಭಿವೃದ್ಧಿ. ಮನುವಿನ ನಿಯಮಗಳು ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯಾದ ಸೊಲೊನ್‌ಗೆ ಬಹಳ ಹಿಂದೆಯೇ ಬರೆಯಲ್ಪಟ್ಟವು. ಇಲ್ಲಿಯವರೆಗೆ, ಮನುಸ್ಮೃತಿಯಲ್ಲಿ ವಿವರಿಸಿದಂತೆ ಅವರ ಕಾನೂನುಗಳು ಪ್ರಪಂಚದಾದ್ಯಂತ ಮೆಚ್ಚುಗೆ ಪಡೆದಿವೆ ಮತ್ತು ಸ್ವಯಂಚಾಲಿತ ಅನುಸರಣೆ ಮತ್ತು ಸ್ವೀಕಾರವನ್ನು ಆನಂದಿಸುತ್ತವೆ. ಆದರೆ ನಮ್ಮ ಸಾಂವಿಧಾನಿಕ ವಿದ್ವಾಂಸರಿಗೆ ಇದು ಏನೂ ಅರ್ಥವಲ್ಲ."

ಮನುವಾದಿಗಳ ಕೈಗೆ ಸಂಪೂರ್ಣ ಅಧಿಕಾರ ಸಿಕ್ಕಾಗ, ಜಾತೀಯತೆ ಬಲಗೊಳ್ಳುತ್ತದೆ. ದಲಿತರು, ಆದಿವಾಸಿಗಳ ಮೇಲಿನ ಹಲ್ಲೆಗಳು ಹೆಚ್ಚಾಗುತ್ತವೆ. ಈ ಕಲ್ಪನೆಯನ್ನು ಕಾರ್ಯಗತಗೊಳಿಸಲು ಅವರ ಮೊದಲ ಗುರಿ ದೇಶದ ಸಂವಿಧಾನವನ್ನು ದುರ್ಬಲಗೊಳಿಸುವುದು. ನಮ್ಮ ದೇಶದ ಸಂವಿಧಾನದ ಆಧಾರವು ಎಲ್ಲಾ ನಾಗರಿಕರಿಗೆ ಸಮಾನತೆ ಮತ್ತು ಸಮಾನ ಹಕ್ಕುಗಳು. ಇದು ಆರ್‌ಎಸ್‌ಎಸ್ ಕಾರ್ಯಸೂಚಿಗೆ ಅಡೆತಡೆಗಳನ್ನು ಸೃಷ್ಟಿಸುವುದು ಮಾತ್ರವಲ್ಲದೆ ಅದನ್ನು ಬಲವಾಗಿ ತಡೆಯುತ್ತದೆ. ಆದ್ದರಿಂದಲೇ ಸಂವಿಧಾನದ ಮೇಲೆ ಯೋಜಿತ ದಾಳಿಗಳು ನಡೆಯುತ್ತಿರುವುದು ಕಾಣುತ್ತಿದೆ.

ದಲಿತ ಚಳವಳಿಗಳ ನಡುವೆ ಐಕ್ಯತೆ

ಬಿಜೆಪಿ ಮತ್ತು ಆರೆಸ್ಸೆಸ್ ದಾಳಿಗಳು ಅತ್ಯಂತ ತೀವ್ರವಾದ ಮತ್ತು ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿವೆ. ಆದ್ದರಿಂದ, ಅವರ ವಿರುದ್ಧ ಪ್ರತಿರೋಧವೂ ವ್ಯಾಪಕವಾಗಿರಬೇಕು. ಆದರೆ, ನಮ್ಮ ದೇಶದಲ್ಲಿ ಅನೇಕ ಸಂಘಟನೆಗಳು ತಮ್ಮ ಮಟ್ಟದಲ್ಲಿ ಜಾತಿವಾದ ಮತ್ತು ದಲಿತ ವಿರೋಧಿ ನೀತಿಗಳ ವಿರುದ್ಧ ಕೆಲಸ ಮಾಡುತ್ತಿವೆ. ಆದರೆ ಈ ಎಲ್ಲ ಚಳವಳಿಗಳ ನಡುವೆ ಐಕ್ಯತೆ ಕಾಯ್ದುಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಿವೆ. ಕಳೆದ ವರ್ಷ ದೆಹಲಿಯಲ್ಲಿ ದಲಿತರ ಸಮಸ್ಯೆಗಳ ಕುರಿತು ಒಂದು ಸಮಾವೇಶವನ್ನು ನಡೆಸಲಾಯಿತು. ಇದರಲ್ಲಿ ಚಳುವಳಿಯ ಪ್ರಾಥಮಿಕ ತಿಳುವಳಿಕೆಯನ್ನು ರಚಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್ ತಿಂಗಳಿನಲ್ಲಿ ಹೈದರಾಬಾದ್ ನಲ್ಲಿ ನೂರಕ್ಕೂ ಹೆಚ್ಚು ಸಂಘಟನೆಗಳು ಭಾಗವಹಿಸಿದ್ದ ದಲಿತ ಶೃಂಗಸಭೆಯನ್ನು ಆಯೋಜಿಸಲಾಗಿತ್ತು.

ಬಿಜೆಪಿಯೊಂದಿಗೆ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದ ಅಗತ್ಯವಿದೆ ಎಂದು ಹೈದರಾಬಾದ್ ಸಮ್ಮೇಳನದಲ್ಲಿಯೇ ನಿರ್ಧರಿಸಲಾಯಿತು. ಸಾರ್ವಜನಿಕರಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ದಲಿತ ವಿರೋಧಿ ನೀತಿಗಳನ್ನು ಬಹಿರಂಗಪಡಿಸಲು ಸಹಿ ಅಭಿಯಾನವನ್ನು ನಡೆಸಲಾಯಿತು. ರಾಜ್ಯಗಳಲ್ಲಿ ಸಮಾವೇಶ ನಡೆಸುವ ಮೂಲಕ ಅಲ್ಲಿನ ಸಂಘಟನೆಗಳನ್ನೂ ಆಂದೋಲನಕ್ಕೆ ಸೇರಿಸಿಕೊಳ್ಳಲಾಗುತ್ತಿದ್ದು, ಡಿಸೆಂಬರ್ 4ರಂದು ದೇಶಾದ್ಯಂತ ಕಾರ್ಯಕರ್ತರು ದೆಹಲಿ ತಲುಪುತ್ತಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೆಡೆ ದಲಿತರ ಸಾಮಾಜಿಕ, ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೆ ಮತ್ತೊಂದೆಡೆ ದಲಿತರಲ್ಲಿ ಬಿಜೆಪಿಯ ಚುನಾವಣಾ ವ್ಯಾಪ್ತಿ ಹೆಚ್ಚಿರುವುದು ಆತಂಕಕಾರಿ ಸಂಗತಿ. ಇದಕ್ಕೆ ಪ್ರಮುಖ ಕಾರಣ ಬಿಜೆಪಿಯ ಅಸ್ಮಿತೆಯ ರಾಜಕಾರಣ ಮತ್ತು ದಲಿತರಲ್ಲೂ ಹಿಂದುತ್ವದ ಪ್ರಾಬಲ್ಯ. ಹಾಗಾಗಿ ಬಿಜೆಪಿಯ ನಿಜವಾದ ಮುಖವನ್ನು ಎಲ್ಲರ ಮುಂದೆ ಬಿಚ್ಚಿಡುವುದು ಇನ್ನೂ ಮುಖ್ಯವಾಗುತ್ತದೆ. ಈ ರ‍್ಯಾಲಿ ಮೂಲಕ ದಲಿತರ ಸಮಸ್ಯೆಗಳನ್ನು ಪ್ರಸ್ತಾಪಿಸಲಾಗುವುದು. ಬೇಡಿಕೆ ಪತ್ರವನ್ನು ದೇಶದ ರಾಷ್ಟ್ರಪತಿಗಳಿಗೆ ಹಸ್ತಾಂತರಿಸಲಾಗುವುದು. ಅಲ್ಲದೆ, 2024ರಲ್ಲಿ ನಡೆಯಲಿರುವ ಸಂಸತ್ ಚುನಾವಣೆಗೆ ದಲಿತರ ಸಮಸ್ಯೆಗಳ ಬಗ್ಗೆಯೂ ಚರ್ಚೆ ಆರಂಭಿಸಲಾಗುವುದು. ಸಮಾನತೆಯ ಈ ಹೋರಾಟಕ್ಕೆ ಬಿಜೆಪಿಯ ರಾಜಕೀಯ ಸೋಲು ಅಗತ್ಯ. ಈ ಮನುವಾದಿ ಶಕ್ತಿಗಳನ್ನು ಸಂಸತ್ತಿನಿಂದ ಹೊರಹಾಕುವ ಮೂಲಕ ಸಂವಿಧಾನವನ್ನು ಸ್ಥಾಪಿಸುವುದು ಗುರಿಯಾಗಿದೆ.

ಕರ್ನಾಟಕದಲ್ಲಿ ಸಿದ್ದತೆ ಬರದಿಂದ ಸಾಗಿದೆ

ಡಿಸೆಂಬರ್ 4ರಂದು ದೆಹಲಿಯಲ್ಲಿ ನಡೆಯುವ ಸಮಾವೇಶ ಯಶಸ್ವಿಗೊಳಿಸಲು ಕರ್ನಾಟಕದಲ್ಲಿ ವಿವಿಧ ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಬರದ ಸಿದ್ದತೆ ನಡೆಸುತ್ತಿವೆ. ದಲಿತ ಹಕ್ಕುಗಳ ಸಮಿತಿ ಸೇರಿದಂತೆ ರಾಜ್ಯದ ಹಲವು ದಲಿತ ಸಂಘಟನೆಗಳು ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕೂರಾರರ ಸಂಘ ಜನರ ನಡುವೆ ಪ್ರಚಾರ ಮಾಡತೊಡಗಿವೆ. ರಾಜ್ಯದ ಹಲವು ಹಳ್ಳಿ, ಪಟ್ಟಣ, ನಗರಗಳಲ್ಲಿ ಕರಪತ್ರ ಹಂಚುವ ಮೂಲಕ, ದೆಹಲಿ ಚಲೋ ಉದ್ದೇಶಗಳ ಕುರಿತು ಜನತೆಗೆ ತಿಳಿಸತೊಡಗಿದ್ದಾರೆ. ದೆಹಲಿಗೆ ಹೋಗಲು ಸಂಘಟನೆಗಳ ನೂರಾರು ಕಾರ್ಯಕರ್ತರು ಮತ್ತು ಬೆಂಬಲಿಗರು ಈಗಾಗಲೇ ರೈಲಿನಲ್ಲಿ ಪ್ರಯಾಣಿಸಲು ಮುಂಗಡ ಟಿಕೆಟ್ ಪಡೆದಿದ್ದಾರೆ.

ನವೆಂಬರ್ 16 ರಂದು ಬೆಂಗಳೂರಿನಲ್ಲಿ ‘ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ದಿಕ್ಕು ದೆಸೆ’ ಕುರಿತು ನಡೆದ ರಾಜ್ಯ ಮಟ್ಟದ ಶೃಂಗ ಸಭೆ ನಡೆದಿತ್ತು. ಈ ಶೃಂಗ ಸಭೆಯಲ್ಲಿ ರಾಜ್ಯದ ಹಲವು ದಲಿತ ಸಂಘಟನೆಗಳು, ಕೃಷಿ ಕೂಲಿಕಾರರ ಸಂಘಟನೆ, ಕಾರ್ಮಿಕ ಮತ್ತು ಮಹಿಳಾ ಸಂಘಟನೆಗಳು, ದೇವದಾಸಿ ಮಹಿಳೆಯರ ಸಂಘಟನೆ ಸೇರಿದಂತೆ ಹಲವು ಎಡ ಮತ್ತು ಪ್ರಗತಿಪರ ಸಂಘಟನೆಗಳ ನಾಯಕರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಭೆಯಲ್ಲಿ ಕೋಟಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು.

–ಸಿಚಿ ●

ಹೆಣ್ಣು ಭ್ರೂಣ ಹತ್ಯೆಯ ಕರಾಳ ಮುಖಗಳು...... ಪುಟ 5 ರಿಂದ

ಕಾರ್ಯಕರ್ತರನ್ನು ತೊಡಗಿಸಬೇಕು. ಸಮಸ್ಯೆಯ ಮೂಲ ಕಾರಣಗಳನ್ನು ಹುಡುಕಿ ಜನ ಜಾಗೃತಿ ಮೂಡಿಸಬೇಕು.

ಸಂತಾನವನ್ನು ಮುಂದುವರೆಸುವ ವಿಷಯದಲ್ಲಿ ಪ್ರಕೃತಿಯು ಮಹಿಳೆಗೆ ಕೆಲವು ಹೆಚ್ಚುವರಿ ಜವಾಬ್ದಾರಿಗಳನ್ನು ನೀಡಿದೆ. ಮುನುಕುಲದ ಸಂತಾನ ಮುಂದುವರಿಯಬೇಕಾದರೆ, ಮಹಿಳೆ ಗರ್ಭ ಧರಿಸಬೇಕು, ಮಗುವನ್ನು ಹೊರಬೇಕು, ಹೆರಬೇಕು. ಮಗು ಹುಟ್ಟಿದ ಮೇಲೆ ಹಾಲೂಡಿಸಿ ಮಗುವನ್ನು ಸಾಕಬೇಕು. ಹೆಣ್ಣಿಗೆ ದುಡಿಮೆಯಿಂದ ಕೊಂಚ ಕಾಲ ವಿಶ್ರಾಂತಿ, ವಿನಾಯತಿಯೂ ಬೇಕು. ಆದರೆ ಇಷ್ಟೆ ಕಾರಣಕ್ಕೆ ಹೆಣ್ಣು ಅಬಲೆ, ಅಸಹಾಯಕಳು, ಪರಾವಲಂಭಿ ಎಂದೆಲ್ಲಾ ಬಿಂಬಿಸದೇ (ಮಗು ಹೆರುವುದನ್ನು ಗಂಡು ಮಾಡಲಾಗುವುದಿಲ್ಲ ಗಂಡು ನೆನಪಿಟ್ಟುಕೊಳ್ಳಬೇಕು.) ಮಗುವಿನ ಪಾಲನೆ ಪೋಷಣೆ ಜವಾಬ್ದಾರಿಯನ್ನೂ ಗಂಡು ಸಾಧ್ಯವಾದಷ್ಟೂ ಹಂಚಿಕೊಳ್ಳಬೇಕು. ಆರೋಗ್ಯಕರ ಸಮಾಜಕ್ಕಾಗಿ, ಮನುಕುಲದ ಉಳಿವಿಗಾಗಿ ಹೆಣ್ಣಿನ ಕುಲವನ್ನೇ ನಾಶ ಮಾಡುವ ಹೆಣ್ಣು ಭ್ರೂಣ ಹತ್ಯೆಯಂತಹ ದುಷ್ಕೃತ್ಯಗಳಿಗೆ ತಡೆ ಹಾಕಬೇಕಾದ ಅಗತ್ಯವನ್ನು ಮನಗಾಣಬೇಕು. ಎಲ್ಲರಿಗೂ ಮನಗಾಣಿಸಬೇಕು. ●

'ಮೋದಿಗೇಟ್' ಎಂದೇ ಹೆಸರಾದ ಲಲಿತ್ ಮೋದಿಯ 1,975 ಕೋಟಿ ರೂ. ವಂಚನೆ ಪ್ರಕರಣ ಏನಾಯ್ತು?

ತಾಯಿ ಕೇಂದ್ರ ಸಚಿವರಾಗಿ ಆರೋಪಿಯ ನೆರವಿಗೆ ನಿಂತರೆ, ಪತಿ ಮತ್ತು ಮಗಳು ಆರೋಪಿ ಪರ ವಕೀಲರು!!

ಸಿ. ಸಿದ್ದಯ್ಯ



9 ವರ್ಷಗಳ ಮೋದಿ ಆಡಳಿತದಲ್ಲಿ

ಸಾಧಿಸಿದ್ದೇನು?

ಅವರು, ನಮ್ಮ ಸಂವಿಧಾನವನ್ನು ರಕ್ಷಣೆ ಮಾಡುವುದಾಗಿ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವೆಯಾಗಿದ್ದರು. ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ ಆರೋಪ ಹೊತ್ತು, ಜಾರಿ ನಿರ್ದೇಶನಾಲಯದ ತನಿಖೆಯಿಂದ ತಪ್ಪಿಸಿಕೊಳ್ಳಲು, ಲಂಡನ್ ಗೆ ಪರಾರಿಯಾಗಿ, ಅಲ್ಲಿಯೇ ನೆಲೆಸಿರುವ ಆರೋಪಿಯೊಬ್ಬರ ವಿದೇಶ ಪ್ರಯಾಣ ದಾಖಲೆಗಳನ್ನು ಸುಗಮಗೊಳಿಸಲು ಆ ಸಚಿವರು ನೆರವು ನೀಡುತ್ತಾರೆ! ಅದನ್ನು ಮಾನವೀಯ ನೆಲೆಯಿಂದ ಮಾಡಿದ್ದಾಗಿ ಅವರು, ಅವರ ಪಕ್ಷ ಮತ್ತವರ 'ಸಂಘ'ದವರು ಸಮರ್ಥಿಸಿಕೊಳ್ಳುತ್ತಾರೆ. ಮತ್ತೊಂದೆಡೆ, ಆ ಸಚಿವೆಯ ಪತಿ ಮತ್ತು ಮಗಳು ವಕೀಲರಾಗಿ ಆರೋಪಿಯ ಪರ ನ್ಯಾಯಾಲಯದಲ್ಲಿ ವಾದಿಸುತ್ತಾರೆ!!

'56 ಇಂಚಿನ ಎದೆಯ ಮೋದಿಯವರನ್ನು ಕಂಡರೆ ಭ್ರಷ್ಟರು ಗಢಗಢ ನಡುಗುತ್ತಾರೆ. ಮೋದಿ ಪ್ರಧಾನಿಯಾದರೆ ಭ್ರಷ್ಟರನ್ನು ಹಿಡಿದು ಜೈಲಿಗೆ ಹಾಕುತ್ತಾರೆ' ಎಂದು ಜನರನ್ನು ನಂಬಿಸಿ ಅದಿಕಾರಕ್ಕೆ ಬಂದಿರುವ ಮೋದಿ ಆಡಳಿತದಲ್ಲಿ ಮಾತ್ರ ಇಂಥದೆಲ್ಲವೂ ನಡೆಯಲು ಸಾಧ್ಯ.

ಮೋದಿ–9 ವರ್ಷಗಳು–ಭಾಗ–27

ಮಾಜಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕಮಿಷನರ್ ಲಲಿತ್ ಮೋದಿ ಮಾಡಿದ ಹಗರಣ ನೆನಪಿದೆಯೇ? ಇದನ್ನು ನೆನಪಿಸಿಕೊಳ್ಳುವುದರ ಜೊತೆಗೆ 10 ವರ್ಷಗಳ ಹಿಂದೆ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮೋದಿ ಮತ್ತು ಬಿಜೆಪಿ ಜನತೆಗೆ ನೀಡಿದ "ನಾವು ಅಧಿಕಾರಕ್ಕೆ ಬಂದರೆ ಭ್ರಷ್ಟರನ್ನು ಹಿಡಿದು ಜೈಲಿಗೆ ಹಾಕುತ್ತೇವೆ" ಎಂಬ ಭರವಸೆಯನ್ನೂ ನೆನಪಿಸಿಕೊಳ್ಳಿ. ಮೋದಿ ಅಧಿಕಾರಕ್ಕೆ ಬಂದ ನಂತರ ಆರೋಪಿ ಲಲಿತ್ ಮೋದಿಯವನ್ನು ಭಾರತಕ್ಕೆ ಹಿಡಿದು ತಂದರೇ? ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಯಿತೆ? ಅವರು ಸರ್ಕಾರಕ್ಕೆ ವಂಚಿಸಿದ್ದ ಹಣವನ್ನು ಹಿಂತಿರುಗಿ ಪಡೆಯಲು ಅವರ ಆಸ್ತಿ ಜಪ್ತಿ ಮಾಡಲಾಯಿತೇ? ಈ ಎಲ್ಲಾ ಪ್ರಶ್ನೆಗಳಿಗೆ 'ಇಲ್ಲ' ಎಂಬುದೊಂದೇ ಉತ್ತರ. ಸರ್ಕಾರ ತಾನು ಮಾಡಬೇಕಾದ ಕಾರ್ಯ ಮಾಡಲಿಲ್ಲ ಮಾತ್ರವಲ್ಲ, ಇಂತಹ ಆರೋಪಿಯ ನೆರವಿಗೆ ಸಚಿವೆ ಮತ್ತು ಅವರ ಕುಟುಂಬವೇ ನಿಂತಿತ್ತು ಮತ್ತು ಇದನ್ನು ಬಿಜೆಪಿ ಮತ್ತು ಸರ್ಕಾರ ಬೆಂಬಲಿಸಿತು. ಇದು ಬಿಜೆಪಿಯವರ ಮಾತಿಗೂ, ಕೃತಿಗೂ ಎಷ್ಟೊಂದು ಅಸಂಬದ್ದ ಸಂಬಂಧ ಇದೆ ಎಂಬುದನ್ನು ತೋರಿಸುತ್ತದೆ.

1,975 ಕೋಟಿ ರೂ. ವಂಚನೆ

2010 ರಿಂದ, ಲಲಿತ್ ಮೋದಿ ಅವರು ಪ್ರಾಥಮಿಕವಾಗಿ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ (FEMA–ಫೆಮಾ) ಉಲ್ಲಂಘನೆಗಳಿಗೆ ಸಂಬಂಧಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯದಿಂದ (ಇಡಿ) ತನಿಖೆಗೆ ಒಳಪಟ್ಟಿದ್ದರು. ಇವು ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿವೆ–ವರ್ಲ್ಡ್ ಸ್ಪೋರ್ಟ್ಸ್ ಗ್ರೂಪ್ (**WSG**) ಒಪ್ಪಂದ, 2009 ರಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಸೀಸನ್ II ಗಾಗಿ ದಕ್ಷಿಣ ಆಫ್ರಿಕಾಕ್ಕೆ ಹಣ ವರ್ಗಾವಣೆ, 2008 ರಲ್ಲಿ ಐಪಿಎಲ್ ಆಟಗಾರರಿಗೆ ಖಾತರಿ ಮತ್ತು ವಿದೇಶದಲ್ಲಿ ಸಲಹಾ ಪಾವತಿಗಳು. ಇಡಿ ಉಲ್ಲೇಖಿಸಿದ ಫೆಮಾ ಉಲ್ಲಂಘನೆಗಳು ಬಹು ಕೋಟಿ ರೂಪಾಯಿಗಳಿಗೆ ಸಾಗುತ್ತವೆ. ಇಡಿ ಪ್ರಕರಣಗಳ ಪ್ರಕಾರ, ಒಳಗೊಂಡಿರುವ ಒಟ್ಟು ಮೊತ್ತವು ಸುಮಾರು 1,975 ಕೋಟಿ ರೂ. 2013 ಮತ್ತು 2015 ರ ನಡುವೆ 15 ಶೋಕಾಸ್ ನೋಟಿಸ್‌ಗಳನ್ನು ಇಡಿ ಕಳುಹಿಸಿತ್ತಾದರೂ, ಲಲಿತ್ ಮೋದಿ ಯಾವುದಕ್ಕೂ ಪ್ರತಿಕ್ರಿಯಿಸಲಿಲ್ಲ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಖ್ಯಸ್ಥ ಎನ್. ಶ್ರೀನಿವಾಸನ್ ಅವರು ಚೆನ್ನೈನಲ್ಲಿ ಸಲ್ಲಿಸಿದ ಪ್ರಥಮ ಮಾಹಿತಿ ವರದಿ(ಎಫ್.ಐ.ಆರ್.)ಯ ಆಧಾರದ ಮೇಲೆ ಲಲಿತ್ ಮೋದಿ ವಿರುದ್ಧ ಒಂದು ಹಣ ವರ್ಗಾವಣೆ ಪ್ರಕರಣ ಇದೆ.

ಈ ಪ್ರಕರಣಗಳಲ್ಲಿ ದೊಡ್ಡದು ದಕ್ಷಿಣ ಆಫ್ರಿಕಾಕ್ಕೆ ಹಣ ವರ್ಗಾವಣೆಗೆ ಸಂಬಂಧಿಸಿದೆ. ಇದರ ಮೇಲಿನ ಫೆಮಾ ಸೂಚನೆಯು ರೂ.1,350 ಕೋಟಿಯಷ್ಟು ಉಲ್ಲಂಘನೆಗಳನ್ನು ಉಲ್ಲೇಖಿಸಿದೆ. ಇದು ಮೂಲಭೂತವಾಗಿ ದಕ್ಷಿಣ ಆಫ್ರಿಕಾಕ್ಕೆ ಹಣವನ್ನು ವರ್ಗಾಯಿಸುವಾಗ ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದನೆಯ ಅನುಪಸ್ಥಿತಿಗೆ ಸಂಬಂಧಿಸಿದೆ ಮತ್ತು ಐಪಿಎಲ್ ಎರಡನೇ ಆವೃತ್ತಿಯ ಆದಾಯದಿಂದ ವಿದೇಶಿ ವಿನಿಮಯ ಗಳಿಕೆಯನ್ನು ಭಾರತಕ್ಕೆ ಹಿಂತಿರುಗಿಸುವುದಿಲ್ಲ. ಆರ್‌ಬಿಐ ಅನುಮೋದನೆ ಪಡೆಯಲು ಬಿಸಿಸಿಐ ಕಾರ್ಯಕಾರಿ ಸಮಿತಿಯು ಲಲಿತ್ ಮೋದಿಗೆ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿತು, ಆದರೆ ಅವರು ನಿರ್ದೇಶನವನ್ನು ಅನುಸರಿಸಲಿಲ್ಲ ಎಂದು ಇಡಿ ಪ್ರಕರಣವು ಒತ್ತಿಹೇಳುತ್ತದೆ. ಬದಲಾಗಿ, ಅವರು ದಕ್ಷಿಣ ಆಫ್ರಿಕಾದ ಕ್ರಿಕೆಟ್ ಸಂಸ್ಥೆಗೆ ಮತ್ತು ಇತರ ವೆಚ್ಚಗಳಿಗೆ ಹಣವನ್ನು ವರ್ಗಾಯಿಸಿದರು. ಅಲ್ಲದೆ, ಟಿಕೆಟ್ ಮಾರಾಟ ಮತ್ತು ಕ್ರೀಡಾಂಗಣದ ಹಕ್ಕುಗಳನ್ನು ಕಡ್ಡಾಯವಾಗಿ ಒಂದು ವರ್ಷದ ಅವಧಿಯಲ್ಲಿ ಭಾರತಕ್ಕೆ ಹಿಂತಿರುಗಿಸರಿರಲಿಲ್ಲ.

ಲಂಡನ್ ಗೆ ಪರಾರಿ

ತನ್ನ ಮೇಲಿನ ಆರೋಪದ ತನಿಖೆಯಿಂದ ತಪ್ಪಿಸಿಕೊಳ್ಳಲು ಲಲಿತ್ ಮೋದಿ 2010 ರಿಂದ ಲಂಡನ್ ಗೆ ಪರಾರಿಯಾಗಿ ಅಲ್ಲಿಯೇ ವಾಸವಿದ್ದು ಐಶಾರಾಮಿ ಜೀವನ ನಡೆಸುತ್ತಿದ್ದಾರೆ. ಹಿಂದಿನ ಯುಪಿಎ ಸರ್ಕಾರವು ಲಲಿತ್ ಮೋದಿಯವರ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸಿತು ಮತ್ತು ಅವರನ್ನು ಹಸ್ತಾಂತರಿಸುವಂತೆ ಬ್ರಿಟನ್ ದೇಶಕ್ಕೆ ಒತ್ತಾಯಿಸಿತ್ತು. ಲಲಿತ್ ಮೋದಿ ಭಾರತಕ್ಕೆ ಬೇಕಾದ ಅಪರಾಧಿ. ವಿದೇಶಿ ವಿನಿಮಯ ನಿಯಂತ್ರಣಕ್ಕಾಗಿ ಜಾರಿ ನಿರ್ದೇಶನಾಲಯ (ಇಡಿ) ಲಲಿತ್ ಮೋದಿ ಅವರನ್ನು ವಿಚಾರಣೆ ನಡೆಸುತ್ತಿತ್ತು.

ಭಾರತಕ್ಕೆ ಹಸ್ತಾಂತರಿಸಲು ಮೋದಿ ಸರ್ಕಾರ ಪ್ರಯತ್ನಿಸಿದೆಯೇ?

ಲಲಿತ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಮೋದಿ ಸರ್ಕಾರ ಪ್ರಯತ್ನಿಸಿದೆಯೇ? ಲಲಿತ್ ಮೋದಿ ಅವರು ಯಾವುದೇ ನ್ಯಾಯಾಲಯದಿಂದ ಶಿಕ್ಷೆಗೊಳಗಾಗದ ಕಾರಣ ಅವರನ್ನು "ಪರಾರಿ" ಎಂದು ಕರೆಯಲಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಅವರು 2010 ರಲ್ಲಿ ಭಾರತವನ್ನು ತೊರೆದಾಗಿನಿಂದ ಭಾರತೀಯ ಕಾನೂನು ಜಾರಿ ಸಂಸ್ಥೆಗಳಿಗೆ ಬೇಕಾಗಿದ್ದಾರೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಅಕ್ಟೋಬರ್ 2010 ರಲ್ಲಿ ತಮಿಳುನಾಡಿನ ಚೆನ್ನೈನಲ್ಲಿ ಅವರ ಮತ್ತು ಇತರ ಆರು ಜನರ ವಿರುದ್ಧ ಪೊಲೀಸ್ ದೂರು ದಾಖಲಿಸಿದೆ. ಡಿಸೆಂಬರ್ 2012 ರಲ್ಲಿ, ಈ ದೂರಿನ ಆಧಾರದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ತನಿಖೆಯನ್ನು ಪ್ರಾರಂಭಿಸಿತು.

ಆದಾಗ್ಯೂ, ಲಲಿತ್ ಮೋದಿಯವರನ್ನು ಭಾರತಕ್ಕೆ ಹಿಂದಿರುಗಿಸುವಲ್ಲಿಸ್ವಲ್ಪಪ್ರಗತಿಯನ್ನುಸಾಧಿಸಲಾಗಿದೆ. ವಾಸ್ತವವಾಗಿ, ಅವರ ವಿರುದ್ಧದ ತನಿಖೆಯು 2017 ರ ಕೊನೆಯಲ್ಲಿ ನಿಂತುಹೋಯಿತು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಅಧಿಕಾರಾವಧಿಯಲ್ಲಿ ಸ್ಥಬ್ದವಾಗಿದೆ.

ಅಕ್ಟೋಬರ್ 2017 ರಲ್ಲಿ ತಮಿಳುನಾಡು ಸರ್ಕಾರವು ಲಲಿತ್ ಮೋದಿ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವರ್ಗಾಯಿಸಲು ಔಪಚಾರಿಕವಾಗಿ ಕೋರಿದೆ. ಆದರೂ, ಸಿಬಿಐಗೆ ಜವಾಬ್ದಾರರಾಗಿರುವ ನೋಡಲ್ ಇಲಾಖೆ, ಪ್ರಧಾನ ಮಂತ್ರಿಗಳ ವ್ಯಾಪ್ತಿಯಲ್ಲಿ ನೇರವಾಗಿ ಕಾರ್ಯನಿರ್ವಹಿಸುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಮನವಿ ಸಲ್ಲಿಸಿದ ಆರು ವರ್ಷಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ.

ಸುಷ್ಮಾ ಸ್ವರಾಜ್ ಅವರ ಶಿಫಾರಸು

2014ರ ಜೂನ್‌ನಲ್ಲಿ ಪತ್ನಿಯ ಕ್ಯಾನ್ಸರ್ ಚಿಕಿತ್ಸೆಗಾಗಿ ಪೋರ್ಚುಗಲ್‌ಗೆ ತೆರಳಲು ಲಲಿತ್ ಮೋದಿಗೆ ಪ್ರಯಾಣದ ದಾಖಲೆಗಳನ್ನು ನೀಡಲು ಸುಷ್ಮಾ ಸ್ವರಾಜ್ ಅವರು ಭಾರತೀಯ ಮೂಲದ ಬ್ರಿಟಿಷ್ ಸಂಸದ ಕೀತ್ ವಾಜ್ ಮತ್ತು ಇಲ್ಲಿನ ಹೈಕಮಿಷನರ್ ಜೇಮ್ಸ್ ಬೆವನ್ ಅವರೊಂದಿಗೆ ಮಾತನಾಡಿದ್ದಾರೆ ಎಂದು ತೋರಿಸುವ ಇಮೇಲ್‌ಗಳು ಒಂದು ವರ್ಷದ ನಂತರ (2015ರಲ್ಲಿ) ಬಹಿರಂಗವಾಗುತ್ತವೆ.

ಸೋರಿಕೆಯಾದ ಇಮೇಲ್‌ಗಳನ್ನು ಉಲ್ಲೇಖಿಸಿದ ಬ್ರಿಟಿಷ್ ಮಾಧ್ಯಮಗಳ ಪ್ರಕಾರ, ಲಲಿತ್ ಮೋದಿಗೆ ಬ್ರಿಟಿಷ್ ಪ್ರಯಾಣ ಪತ್ರಗಳನ್ನು ನೀಡಲು ಯುಕೆ (ಯುನೈಟೆಡ್ ಕಿಂಗ್ ಡಂ) ಯ ಉನ್ನತ ವಲಸೆ ಅಧಿಕಾರಿಯ ಮೇಲೆ ಒತ್ತಡ ಹೇರುವ ಸಂದರ್ಭದಲ್ಲಿ ಸುಷ್ಮಾ ಸ್ವರಾಜ್ ಅವರ ಹೆಸರನ್ನು ಬ್ರಿಟಿಷ್ ಸಂಸದ ಕೀತ್ ವಾಜ್ ಉಲ್ಲೇಖಿಸಿದ್ದಾರೆ. ನಂತರ 24 ಗಂಟೆಗಳೊಳಗೆ, ತೀರಾ ಕಡಿಮೆ ಅವಧಿಯಲ್ಲಿ ಲಲಿತ್ ಮೋದಿ ಪ್ರಯಾಣದ ದಾಖಲೆಗಳನ್ನು ಪಡೆದರು.

"ಬ್ರಿಟಿಷ್ ಸರ್ಕಾರವು ಲಲಿತ್ ಮೋದಿಗೆ ಪ್ರಯಾಣದ ದಾಖಲೆಗಳನ್ನು ನೀಡಲು ನಿರ್ಧರಿಸಿದರೆ – ಅದು ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಹಾಳು ಮಾಡುವುದಿಲ್ಲ" ಎಂದು ಸುಷ್ಮಾ ಅವರು ಬ್ರಿಟಿಷ್ ಹೈ ಕಮಿಷನರ್‌ಗೆ ತಿಳಿಸಿದ್ದರು. ಸುಷ್ಮಾ ಅವರು "ಮಾನವೀಯ ದೃಷ್ಟಿಕೋನ" ವನ್ನು ತೆಗೆದುಕೊಂಡಿದ್ದಾರೆ ಎಂದು ಬಿಜೆಪಿಯವರು ಇದನ್ನು ಸಮರ್ಥಿಸಿಕೊಂಡರು.

ಕಾನೂನಿನಿಂದ ಪಲಾಯನಗೈದವರಿಗೆ ಸಹಾಯ ಮಾಡುವಲ್ಲಿ ಸಚಿವೆಯ ಕಡೆಯಿಂದ ಗಂಭೀರವಾದ ಅನುಚಿತತೆಯನ್ನು ಆರೋಪಿಸಿದ ವಿರೋಧ ಪಕ್ಷಗಳು, ಸುಷ್ಮಾ ಅವರ ರಾಜೀನಾಮೆಗೆ ಒತ್ತಾಯಿಸಿದವು. ಸರ್ಕಾರ, ಬಿಜೆಪಿ ಮತ್ತು ಆರ್‌ಎಸ್‌ಎಸ್, ಸ್ವರಾಜ್ ಅವರ ಕ್ರಮವನ್ನು ಬಲವಾಗಿ "ಸಮರ್ಥನೆ" ಮಾಡಿತು ಮತ್ತು ರಾಜೀನಾಮೆ ಬೇಡಿಕೆಗಳನ್ನು ತಿರಸ್ಕರಿಸಿತು. ಗೃಹ ಸಚಿವ ರಾಜನಾಥ್ ಸಿಂಗ್ ಮತ್ತು ಬಿಜೆಪಿ ಅಧ್ಯಕ್ಷ ಅಮಿತ್ ಶಾ 'ಅವರು ಯಾವುದೇ ತಪ್ಪು ಮಾಡಿಲ್ಲ ಮತ್ತು ಕೇವಲ "ಮಾನವೀಯ" ಆಧಾರದ ಮೇಲೆ ಕಾರ್ಯನಿರ್ವಹಿಸಿದ್ದಾರೆ' ಎಂದು ಪ್ರತಿಪಾದಿಸಿದರು.

ಸರ್ಕಾರ ಯಾವುದೇ ತಪ್ಪು ಮಾಡಿಲ್ಲ, ಪ್ರತಿಪಕ್ಷಗಳು ಗುಡ್ಡವನ್ನು ಬೆಟ್ಟವನ್ನಾಗಿ ಮಾಡುತ್ತಿವೆ ಎಂದು ಪರಿಸರ ಸಚಿವರಾಗಿದ್ದ ಬಿಜೆಪಿ ನಾಯಕ ಪ್ರಕಾಶ್ ಜಾವಡೇಕರ್ ಹೇಳಿದರು. ಸುಷ್ಮಾ ಅವರು ರಾಷ್ಟ್ರೀಯತೆ ಮತ್ತು ದೇಶಭಕ್ತಿಯ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿಲ್ಲ. ಆಕೆಯಲ್ಲಿ ಮಾನವೀಯ ಮೌಲ್ಯಗಳು ತುಂಬಿವೆ. ಆಕೆಯ ಎಲ್ಲಾ ಕಾರ್ಯಗಳು ಈ ಮೌಲ್ಯಗಳಿಂದ ಬಂದಿವೆ ಎನ್ನುತ್ತಾ ಆರೆಸ್ಸೆಸ್ ಮುಖಂಡ ಇಂದ್ರೇಶ್ ಕುಮಾರ್, ಸುಷ್ಮಾ ಅವರ ರಕ್ಷಣೆಗೆ ನಿಂತರು.

ಆದರೆ, ನಮ್ಮ ಪ್ರಧಾನಿ ನರೇಂದ್ರ ಮೋದಿಯವರು, ನಿರ್ಣಾಯಕ ಸಂದರ್ಭಗಳಲ್ಲಿ ಮತ್ತು ಸರ್ಕಾರದ ಅಥವಾ ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳ ಮೇಲೆ ಇಂತಹ ಗಂಭೀರ ಆರೋಪಗಳು ಬಂದ ಸಂದರ್ಭಗಳಲ್ಲಿ ಮೌನ ವಹಿಸುವಂತೆ ಈ ವಿಷಯದಲ್ಲಿಯೂ ಮೌನವಾಗಿರುತ್ತಾರೆ.

ಸಚಿವೆ ಪತಿ ಮತ್ತು ಮಗಳು ಆರೋಪಿ ಪರ ವಕೀಲರು

ವಿದೇಶಾಂಗ ವ್ಯವಹಾರಗಳ ಸಚಿವೆ ಸುಷ್ಮಾ ಸ್ವರಾಜ್ ಅವರ ಪುತ್ರಿ ಬಾನ್ಸುರಿ ಸ್ವರಾಜ್ ಅವರು 9 ವರ್ಷಗಳಿಂದ ಲಲಿತ್ ಮೋದಿ ಅವರನ್ನು ನ್ಯಾಯಾಲಯದಲ್ಲಿ ಪ್ರತಿನಿಧಿಸಿದ್ದಾರೆ ಎಂದು 2015ರಲ್ಲಿ ಬಹಿರಂಗಗೊಂಡಿತು. ನ್ಯಾಯಾಲಯದ ದಾಖಲೆಗಳಲ್ಲಿ, ಬಾನ್ಸುರಿ ಸ್ವರಾಜ್ ಅವರನ್ನು ದೆಹಲಿ ಹೈಕೋರ್ಟ್‌ನಲ್ಲಿ ಮೋದಿ ಪರವಾಗಿ ಹಾಜರಾದ ವಕೀಲರಲ್ಲಿ ಒಬ್ಬರು ಎಂದು ಪಟ್ಟಿಮಾಡಲಾಗಿದೆ. ಸುಷ್ಮಾ ಅವರ ಪತಿ ಸ್ವರಾಜ್ ಕೌಶಲ್ ಕೂಡ ಅದುವರೆಗೆ 22 ವರ್ಷಗಳ ಕಾಲ ಲಲಿತ್ ಮೋದಿಗೆ ಕಾನೂನು ಸಲಹೆಯನ್ನು ನೀಡಿದ್ದರು.

ಸುಷ್ಮಾ ಸ್ವರಾಜ್ ಅವರ ಪತಿ ಮತ್ತು ಹಿರಿಯ ವಕೀಲ ಸ್ವರಾಜ್ ಕೌಶಲ್ ಅವರು, ತಮ್ಮ ಮಗಳು ಬಾನ್ಸುರಿ (ವಕೀಲೆ) ಮತ್ತು ತಾನು ಇಂಡಿಯನ್ ಪ್ರೀಮಿಯರ್ ಲೀಗ್ ಮಾಜಿ ಕಮಿಷನರ್ ಲಲಿತ್ ಮೋದಿ ಅವರೊಂದಿಗೆ ವೃತ್ತಿಪರವಾಗಿ ಸಂಬಂಧ ಹೊಂದಿದ್ದೆವು ಎಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ.

ಭಾರತಕ್ಕೆ ಬೇಕಾದ ಆರೋಪಿಯನ್ನು ದೇಶಕ್ಕೆ ಕರೆತಂದು, ತನಿಖೆಗೆ ಒಪ್ಪಿಸಬೇಕಾದ ಜವಬ್ಧಾರಿ ಮತ್ತು ಕರ್ತವ್ಯವನ್ನು ಸಚಿವೆಯಾಗಿ ಸುಷ್ಮಾ ಸ್ವರಾಜ್ ಮಾಡಬೇಕಿತ್ತು. ಆದರೆ, ಅವರು ಆ ಕೆಲಸ ಮಾಡಲಿಲ್ಲ. ಬದಲಿಗೆ, ಮತ್ತೊಂದು ದೇಶಕ್ಕೆ ಪ್ರಯಾಣಿಸಲು ಆರೋಪಿಗೆ ನೆರವು ನೀಡಿದರು. ಸಚಿವರದು ಮಾನವೀಯತೆ ದೃಷ್ಟಿ ಎಂದೇ ಅಂದುಕೊಂಡರೂ, ಅವ ಪತಿ ಮತ್ತು ಮಗಳು ಆರೋಪಿಗೆ ಕಾನೂನು ನೆರವು


ಪುಟ 14 ಕ್ಕೆ

ವಿದೇಶಗಳಲ್ಲಿ ಭಾರತದ ಸೂಪರ್ ಶ್ರೀಮಂತರ ಸಂಪತ್ತಿನಲ್ಲಿ 3 ವರ್ಷಗಳಲ್ಲಿ 65% ಏರಿಕೆ!

ಭಾರತೀಯ ನಿವಾಸಿಗಳ ವಿದೇಶೀ ಸಂಪತ್ತಿನ ಶೇಖರಣೆ 2018ರಲ್ಲಿ 19.8 ಶತಕೋಟಿ ಡಾಲರುಗಳು ಇದ್ದದ್ದು 2021ರಲ್ಲಿ 32.6 ಶತಕೋಟಿಗೆ ಏರಿದೆ. ಇದು ಇತ್ತೀಚೆಗೆ ಪ್ರಕಟವಾದ ಯುರೋಪಿಯನ್ ಒಕ್ಕೂಟದ ತೆರಿಗೆ ನಿರೀಕ್ಷಣಾ ಕೇಂದ್ರದ 'ಗ್ಲೋಬಲ್ ಟ್ಯಾಕ್ಸ್ ಇವೇಷನ್ ರಿಪೋರ್ಟ್(ಜಾಗತಿಕ ತೆರಿಗೆಗಳ್ಳತನದ ವರದಿ) 2024' ಯಲ್ಲಿನ ಅಂಕಿ–ಅಂಶಗಳಿಂದ ತಿಳಿದು ಬರುವ ಸಂಗತಿ.(ವಿವರಗಳಿಗೆ ನೋಡಿ https://janashakthimedia.com/65-increase-wealth-abroad-thee-years/). ಜಿ.ಎಸ್.ಮಣಿಯವರ ಈ ಲೇಖನದ ಮುಖ್ಯ ಅಂಶಗಳನ್ನು ನಮ್ಮ ಓದುಗರಿಗಾಗಿ ಈ ಮುಂದೆ ಕೊಡಲಾಗಿದೆ:

ಜಗತ್ತಿನ ಬಹುತೇಕ ದೇಶಗಳಲ್ಲಿ 2018 ರ ನಂತರ ಬ್ಯಾಂಕುಗಳ ಮಾಹಿತಿ ವಿನಿಮಯ ಅವಕಾಶ ಹೆಚ್ಚಿದಂತೆಲ್ಲ ಸಾಗರೋತ್ತರ ಸಂಪತ್ತು ಶೇಖರಣೆ ಕಡಿಮೆಯಾಗಿದೆ. ಆದರೆ ಭಾರತದಲ್ಲಿ ಮಾತ್ರ ಇದು ಹೆಚ್ಚಿದೆ. ಅಂದರೆ ಭಾರತದಲ್ಲಿನ ಆರ್ಥಿಕ ಬೆಳವಣಿಗೆಯ ಅಳತೆ ಮೀರಿದ ಭಾಗ ಶ್ರೀಮಂತರಿಗೆ ಹೋಗಿದ್ದು ಅದನ್ನು ಅವರು ಆಕ್ರಮವಾಗಿ ಸಾಗರೋತ್ತರ ತೆರಿಗೆ–ಆಶ್ರಯ ತಾಣಗಳಲ್ಲಿ ಶೇಖರಣೆ ಮಾಡಿರುವುದು ಸ್ಪಷ್ಟ ಎನ್ನುತ್ತಾರೆ ಇದರ ವಿಶ್ಲೇಷಣೆ ಮಾಡಿರುವ ಆರ್ಥಿಕ ತಜ್ಞರಾದ ಪ್ರೊ. ಜಯತಿ ಘೋಷ್ ಮತ್ತು ಡಾ. ಸಿ.ಪಿ. ಚಂದ್ರಶೇಖರ್ (New Estimates of Offshore Wealth held by Indians- Macroscan, Nov 14th 2023).

ಈ ಸಂಪತ್ತಿನ ಹರಿವಿನ ದಿಕ್ಕೂ ಸಹ ಗಮನಿಸುವಂತಹದು. ಇದುವರೆಗೆ ಹೇಳುತ್ತಿದ್ದಂತೆ ಇವೆಲ್ಲ ಅಂತಿಮವಾಗಿ ಸ್ವಿಜಲ್ಯಾಂಡ್‌ಗೇ ಹೋಗುತ್ತಿಲ್ಲ, ಬದಲಾಗಿ, ಆ ದೇಶದ ಮೂಲಕ ಅಮೆರಿಕ ಮತ್ತು ಯುರೋಪಿನ ದೇಶಗಳಿಗೆ ಹರಿಯುತ್ತಿರುವಂತೆ ಕಾಣುತ್ತದೆ. ಈಗ ಈ ದೇಶಗಳ ಹೊರತಾಗಿ ಯುಎಇ ಮತ್ತು ಸಿಂಗಾಪುರ್ ದೇಶಗಳಿಗೆ ಈ ಸಂಪತ್ತು ಹರಿಯುತ್ತಿದೆ.



ಈ ಚಿತ್ರದ ಪ್ರಕಾರ, ಸ್ವಿತ್ಸರ್ಲ್ಯಾಂಡಿಗೆ ಹೋಗಿರುವ ಹಣದ ಪ್ರಮಾಣ ಕಡಿಮೆಯಗಿದ್ದು, ಅಮೆರಿಕಾ ಮತ್ತು ಏಷ್ಯಾದ ತೆರಗೆ –ಆಶ್ರಯ ಧಾಮಗಳಿಗೆ ಹೋದ ಸಂಪತ್ತಿನ ಪ್ರಮಾಣವೇ ಬಹಳಷ್ಟು ಹೆಚ್ಚಿದೆ– ಕೃಪೆ: ಮಾಕ್ರೊಸ್ಕಾನ್

ಈಗ ಏಳುತ್ತಿರುವ ಮುಖ್ಯ ಪ್ರಶ್ನೆ: ಭಾರತವೂ ಬ್ಯಾಂಕಿಂಗ್ ಮಾಹಿತಿಗಳ ವಿನಿಮಯದ ಭಾಗವಾಗಿರುವಾಗ ಇಂತಹ ಅಕ್ರಮ ಸಂಪತ್ತಿನ ಹರಿವನ್ನು ತಡೆಯಲು ಹೆಚ್ಚಿನ ಕ್ರಮಗಳೇಕಿಲ್ಲ ಎಂಬುದು ಎನ್ನುತ್ತಾರೆ ಈ ಆರ್ಥಿಕ ತಜ್ಞರು. ಖಂಡಿತವಾಗಿಯೂ ಈ ವಿಷಯ ನಮ್ಮ ತೆರಿಗೆ ಅಧಿಕಾರಿಗಳ ಗಮನಕ್ಕೆ ಬಂದಿರುತ್ತದೆ. ಆದರೂ ಈ ಅಕ್ರಮ ಹೇಗೆ ತಡೆರಹಿತವಾಗಿ ಮುಂದುವರೆಯುತ್ತಿದೆ?

ವಿರೋಧ ಪಕ್ಷಗಳ ನಾಯಕರನ್ನು ಮತ್ತು ಭಿನ್ನ ನಿಲುವು ಹೊಂದಿದವರ ಮೇಲೆ ಕೇಂದ್ರ ಸರಕಾರದ ಏಜೆನ್ಸಿಗಳಾದ ಇ.ಡಿ., ಐ.ಟಿ., ಸಿಬಿಐ ಇತ್ಯಾದಿ ಸದಾ ಸಕ್ರಿಯರಾಗಿರುವಂತೆ ಕಾಣುತ್ತಿರುವಾಗ ದೇಶದ ಆರ್ಥಿಕವನ್ನು ಹಾಳುಗೆಡಹುತ್ತಿರುವ ಈ ಅಕ್ರಮ ಶೇಖರಣೆಯನ್ನು ತಡೆಯುವ ಬಗ್ಗೆ ಅವೆಲ್ಲವುಗಳ ಮೂಲಕ ಸರಕಾರ ಗಮನ ಹರಿಸಿರುವುದು ಕಾಣ ಬರುತ್ತಿಲ್ಲ, ಏಕೆ? ಇದು ಸಹಜವಾಗಿ ಏಳುವ ಪ್ರಶ್ನೆ, ವಿಶೇಷವಾಗಿ ನಮ್ಮ ಇಂದಿನ ಪ್ರಧಾನ ಮಂತ್ರಿಗಳು 2014 ರಲ್ಲಿ ಅಧಿಕಾರಕ್ಕೆ ಬರಲು ಮಾಡಿದ ಭಾಷಣಗಳಲ್ಲಿ ಈ ವಿಷಯವನ್ನು ಬಹಳ ರಮ್ಯವಾಗಿ, ತಾನು ಅಧಿಕಾರಕ್ಕೆ ಬಂದರೆ ಪ್ರತಿಯೊಬ್ಬ ಭಾರತೀಯನ ಖಾತೆಗೂ ಹದಿನೈದು ಲಕ್ಷ ರೂಪಾಯಿಗಳು ಬರುವಂತೆ ಮಾಡುತ್ತೇನೆಂದು ಭರವಸೆ ನೀಡಿರುವಾಗ!

ನಮ್ಮ ದೇಶದಲ್ಲಿ ಶ್ರೀಮಂತರು ಅಪಾರ ಆಸ್ತಿ ಹೊಂದಿಯೂ ತೆರಿಗೆ ತೆರದೆ ಇರಲು ದಾರಿಗಳು ಹಲವು ಇವೆ. ತೆರಿಗೆ ಪದ್ಧತಿಯಲ್ಲಿನ ದೋಷಗಳು ಒಂದು ಕಡೆಯಾದರೆ ಆಸ್ತಿ ವಿವರ ಸಲ್ಲಿಸಬೇಕಾದ ಪ್ರಮೇಯವೇ ಕಡಿಮೆ ಇರುವಾಗ ತೆರಿಗೆ ಕಳ್ಳತನ ಸುಲಭ. ಚಿಪ್ಪು ಕಂಪನಿಗಳು ಮತ್ತು ಟ್ರಸ್ಟ್ ಗಳನ್ನು ಮಾಡಿಕೊಂಡು ಅವುಗಳ ಅತಿ ಕಡಿಮೆ ವಿವರ ಸಲ್ಲಿಸಿ ತೆರಿಗೆ ಕಳ್ಳತನ ಮುಚ್ಚಿಡಲು ಸಾಧ್ಯವಿರುವಾಗ ಅವನ್ನು ಬಳಸದೆ ಇರುತ್ತಾರೆಯೇ?

ಮೇಲೆ ಹೇಳಿದ ಜಾಗತಿಕ ತೆರಿಗೆಗಳ್ಳತನದ ವರದಿ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ತರಗಳಲ್ಲಿ ತೆರಿಗೆಗಳ್ಳತನವನ್ನು ತಪ್ಪಿಸಲು ಏನೇನು ಮಾಡಬಹುದು ಎಂಬ ಬಗೆಗೆ ಹಲವು ಸೂಚನೆಗಳನ್ನು ನೀಡಿದೆ. ಕೆಲವು ಮುಖ್ಯ ಶಿಫಾರಸುಗಳು ಹೀಗಿವೆ:

1. ಕಂಪನಿಗಳ ತೆರಿಗೆ ಬಗೆಗಿನ ಅಂತರ್ರಾಷ್ಟ್ರೀಯ ಒಪ್ಪಂದದಲ್ಲಿ ಸುಧಾರಣೆ ತಂದು 'ತೆರಿಗೆ ಸ್ಪರ್ಧೆ' ಇಲ್ಲದಂತೆ ಮಾಡಿ ಕನಿಷ್ಠ ಶೇ 25 ರಷ್ಟು ತೆರಿಗೆ ಹೇರುವುದು.
2. ಶತಕೋಟ್ಯಾಧಿಪತಿಗಳ ಸಂಪತ್ತಿನ ಮೇಲೆ ಜಾಗತಿಕ ಕನಿಷ್ಠ ತೆರಿಗೆಯಾಗಿ ಶೇ 2 ರಷ್ಟು ವಸೂಲು ಮಾಡುವುದು
3. ಬಹಳ ವರ್ಷಗಳ ಕಾಲ ನಿವಾಸಿಗಳಾಗಿದ್ದವರು ಕಡಿಮೆ ತೆರಿಗೆಯ ದೇಶಗಳಿಗೆ ವಲಸೆ ಹೋಗದಂತೆ ತಡೆ ನೀತಿಗಳನ್ನು ರೂಪಿಸುವುದು
4. ಈ ವಿಷಯಗಳಲ್ಲಿ ಜಾಗತಿಕ ಒಪ್ಪಂದ ಸಾಧ್ಯವಾಗದೆ ಇದ್ದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಶತಕೋಟ್ಯಾಧಿಪತಿಗಳ ಮೇಲೆ ಏಕಮುಖವಾಗಿ ತೆರಿಗೆ ಹೇರಿ ಕನಿಷ್ಠ ತೆರಿಗೆ ವಸೂಲು ಮಾಡುವುದು
5. ತೆರಿಗೆ ವಂಚನೆ ತಡೆಯಲು ಜಾಗತಿಕ ಆಸ್ತಿ ನೋಂದಣಿ ಪುಸ್ತಕ ಪ್ರಾರಂಭಿಸುವುದು
6. ಆರ್ಥಿಕ ದುರುಪಯೋಗದ ತಡೆಗೆ ಕ್ರಮಗಳನ್ನು ಕೈಗೊಳ್ಳುವುದು.

ಅದಾಣಿ ಸಮೂಹ ಸಾಗರೋತ್ತರ ತೆರಿಗೆ–ಆಶ್ರಯಧಾಮಗಳಲ್ಲಿ ಚಿಪ್ಪು ಕಂಪನಿಗಳನ್ನು ಹುಟ್ಟು ಹಾಕಿ ಅವುಗಳ ಮೂಲಕ ಭಾರತದೊಳಗಿನ ಅವರದೇ ಕಂಪನಿಗಳಲ್ಲಿ ಹೂಡಿಕೆ ಸೋಗು ಹಾಕಿ ಷೇರು ಬೆಲೆಗಳನ್ನು ಏರಾಪೇರು ಮಾಡಿ ಲಾಭ ಗುಡ್ಡೆ ಹಾಕುತ್ತಿರುವ ಕಥನಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದರೂ ಬಾಯಿ ಮುಚ್ಚಿ ಕುಳಿತಿರುವ ಸರಕಾರದಿಂದ ಇಂತಹ ಕ್ರಮಗಳನ್ನು ನಿರೀಕ್ಷಿಸಬಹುದೇ?



"ಬಾಕಿ ಸಮೇತ 2024ರಲ್ಲಿ ನಿಮಗೆ ಎಷ್ಟು ಸಿಗುತ್ತದೆ - ಅಂದಾಜು ಮಾಡಿ ನೋಡಿ!

(ಇದು 19.06.2021ರ ವ್ಯಂಗ್ಯಚಿತ್ರ. ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್. ಆಗ ಸ್ವಿಸ್ ಬ್ಯಾಂಕ್‌ಗಳಲ್ಲಿ ಭಾರತೀಯರ ಸಂಪತ್ತು 13 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ಮಟ್ಟಕ್ಕೆ ಏರಿದೆ ಎಂಬ ಸುದ್ದಿ ಬಂದಿತ್ತು. ಈಗ, ಮತ್ತೆ 65% ಏರಿಕೆಯಾಗಿದೆ, ಅಲ್ಲದೆ ಸ್ವಿತ್ಸರ್ಲ್ಯಾಂಡ್ ಗಿಂತ ಹೆಚ್ಚಾಗಿ ದುಬೈ, ಸಿಂಗಪುರಗಳಿಗೆ ಹೋಗಿರುವಾಗ ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ ಈಗ 50ಲಕ್ಷ ರೂ. ಆದರೂ ಬರಬೇಕು!)

ಪಿಎಂಜಿಕೆಎವೈ ವಿಸ್ತರಣೆಗೆ ಈಗ 'ಸಂಪುಟ ನಿರ್ಧಾರ'!

ವಿಧಾನಸಭಾ ಚುನಾವಣೆಗಳ ನಡುವೆ ನವಂಬರ್ 4ರಂದು ಛತ್ತೀಸ್‌ಗಡದಲ್ಲಿ ಪ್ರಧಾನಿಗಳು 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನಾ' (ಪಿಎಂಜಿಕೆಎವೈ) ಅಡಿಯಲ್ಲಿ 5 ಕೆಜಿ ಉಚಿತ ಧಾನ್ಯ ವಿತರಣೆಯನ್ನು ಇನ್ನೂ 5 ವರ್ಷ ವಿಸ್ತರಿಸುವುದಾಗಿ 'ಗ್ಯಾರಂಟಿ' ಕೊಟ್ಟಿದ್ದರು. **"ನಾನು,** ದೇಶದ 80 ಕೋಟಿ ಬಡ ಜನರಿಗೆ ಉಚಿತ ರೇಷನ್ ಕೊಡುವ ಯೋಜನೆಯನ್ನು ಬಿಜೆಪಿ ಸರಕಾರ ಮುಂದಿನ ಐದು ವರ್ಷಗಳ ವರೆಗೆ ವಿಸ್ತರಿಸುತ್ತದೆ ಎಂದು ನಿರ್ಧರಿಸಿದ್ದೇನೆ. ನಿಮ್ಮ ಪ್ರೀತಿ ಮತ್ತು ಆಶೀರ್ವಾದ **ನನಗೆ** ಇಂತಹ ನಿರ್ಧಾರಗಳನ್ನು ಕೈಗೊಳ್ಳುವ ಶಕ್ತಿಯನ್ನು ಕೊಡುತ್ತದೆ" ಎಂದು ಚುನಾವಣಾ ಪ್ರಚಾರ ಸಭೆಯಲ್ಲಿ ಘೋಷಿಸಿದ್ದರು. ಇಲ್ಲಿ 'ನಾನು' ಎಂಬುದರ ಮೇಲಿನ ಒತ್ತನ್ನು ಗಮನಿಸಬಹುದು. ಆಗ ಈ ಬಗ್ಗೆ ಸಂಪುಟ ನಿರ್ಧಾರ ಆಗಿರಲಿಲ್ಲ. ಹೀಗಿರುವಾಗ ಮಾದರಿ ಆಚಾರ ಸಂಹಿತೆ ಜಾರಿಯಲ್ಲಿರುವಾಗ ಇಂತಹ ಘೋಷಣೆಗೆ ಅವಕಾಶ ಇದೆಯೇ ಎಂದು ಪ್ರತಿಪಕ್ಷಗಳು ಆಕ್ಷೇಪಿಸಿದ್ದವು, ಚುನಾವಣಾ ಆಯೋಗಕ್ಕೆ ದೂರನ್ನೂ ಸಲ್ಲಿಸಿದ್ದವು. ಆದರೆ ನಿರೀಕ್ಷಿಸಿದಂತೆ ಆಯೋಗ ಏನೂ ಹೇಳಲಿಲ್ಲ. ಈಗ ನವಂಬರ್ 29ರಂದು ಕೇಂದ್ರ ಸಂಪುಟ ಈ ಕುರಿತು ನಿರ್ಣಯ ತಗೊಂಡಿದೆ ಎಂದು ವರದಿಯಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಈ ಹಿಂದೆ ಮನರೇಗ ಯೋಜನೆ ಕಾಂಗ್ರೆಸಿನ ವಿಫಲತೆಗೆ ಜೀವಂತ ಸಾಕ್ಷಿ ಎಂದಿದ್ದ ಪ್ರಧಾನಿಗಳು, ಅದೇ ತರ್ಕವನ್ನು ಅನ್ವಯಿಸುವುದಾದರೆ, ತನ್ನ ಈ ಘೋಷಣೆಯ ಮೂಲಕ ಈಗ ದೇಶದಲ್ಲಿ ಉಚಿತ 'ಅನ್ನ'ದ ಅಗತ್ಯ ಇರುವ 80 ಕೋಟಿ ಬಡವರಿದ್ದಾರೆ ಎಂದು ಒಪ್ಪಿಕೊಂಡಂತಾಗಿದೆ ಎಂದು ಹಲವರು ವಿಶ್ಲೇಷಿಸಿದ್ದರು. ಇನ್ನೂ ಒಂದು ಸಂಗತಿಯೆಂದರೆ, ಅದರ ಮೂರು ವಾರಗಳ ಮೊದಲಷ್ಟೇ, ಅಂದರೆ ಅಕ್ಟೋಬರ್ 12 ರಂದು ಪ್ರಕಟವಾದ ಜಾಗತಿಕ ಹಸಿವು ಸೂಚ್ಯಂಕದ ವರದಿ ಭಾರತದ ಸ್ಥಾನವನ್ನು 125 ದೇಶಗಳಲ್ಲಿ 111ಕ್ಕೆ ಕ್ಕೆ ಇಳಿಸಿದಾಗ ಅದು ದೋಷಪೂರಿತವಾಗಿದೆ ಎಂದು ಭಾರತ ಸರಕಾರ ಅದನ್ನು ತಿರಸ್ಕರಿಸಿತ್ತು! ●

ಕೃಷಿ ಕಾರ್ಮಿಕರಿಗೆ ದಿನಗೂಲಿ: ಮಧ್ಯಪ್ರದೇಶ ಮತ್ತು ಗುಜರಾತಿನಲ್ಲಿ ಅತ್ಯಂತ ಕಡಿಮೆ, ಕೇರಳದಲ್ಲಿ ಅತ್ಯಂತ ಹೆಚ್ಚು– ಆರ್‌ಬಿಐ ವರದಿ

ರಿಸರ್ವ್ ಬ್ಯಾಂಕ್ ನ ಹಣಕಾಸು ವರ್ಷ (FY) 2022–23ರ ಇತ್ತೀಚಿನ ವರದಿಯ ಪ್ರಕಾರ ಒಬ್ಬ ಪುರುಷ ಕೃಷಿ ಕಾರ್ಮಿಕನಿಗೆ ದೇಶದಲ್ಲಿ ಸಿಗುವ ಸರಾಸರಿ ದಿನಗೂಲಿ ರೂ. 345.70. ಅಂದರೆ ತಿಂಗಳಿಗೆ 25 ದಿನಗಳ ಕೆಲಸ ದೊರೆತರೂ ತಿಂಗಳ ಗರಿಷ್ಟ ಆದಾಯ ರೂ.8640 ಆದರೆ ಮಧ್ಯಪ್ರದೇಶದಲ್ಲಿ ಇದು ರೂ. 229.20 ಮತ್ತು ಗುಜರಾತ್‌ನಲ್ಲಿ ರೂ.241.90, ಅಂದರೆ ಮಾಸಿಕ ಗರಿಷ್ಟ ವರಮಾನ ಅನುಕ್ರಮವಾಗಿ 5,730 ರೂ. ಮತ್ತು ಗುಜರಾತ್‌ನಲ್ಲಿ 6,047 ರೂ. ಇಡೀ ದೇಶದಲ್ಲೇ ಕೃಷಿ ಕೂಲಿಕಾರರಿಗೆ ಅತ್ಯಂತ ಕಡಿಮೆ ಕೂಲಿಯಿರುವ ರಾಜ್ಯಗಳಿವು–ಎರಡೂ ಬಿಜೆಪಿ ಆಳ್ವಿಕೆಯ ರಾಜ್ಯಗಳು. ಒಂದಂತೂ ಬಿಜೆಪಿಯ 'ಮಾದರಿ' ರಾಜ್ಯ!

ಕ್ರಿಸಿಲ್ ರೇಟಿಂಗ್ ಸಂಸ್ಥೆ ಪ್ರಕಾರ, ಒಂದು ಸಸ್ಯಾಹಾರಿ ಊಟಕ್ಕೆ ರೂ 27.9 ಅಥವಾ 5 ಸದಸ್ಯರಿರುವ ಒಂದು ಕೃಷಿ ಕಾರ್ಮಿಕರ ಕುಟುಂಬಕ್ಕೆ ಎರಡು ಹೊತ್ತು ಸಸ್ಯಾಹಾರೀ ಊಟಕ್ಕೆ ತಿಂಗಳಿಗೆ ರೂ.8,400 ಬೇಕು. ಮಾಂಸಾಹಾರಿ ಊಟಕ್ಕೆ ಥಾಲಿಗೆ ರೂ. 61.40 ಎಂದು ಲೆಕ್ಕ ಹಾಕಲಾಗಿದೆ. ಅಂದರೆ ಇದು ಈ ಎರಡು ರಾಜ್ಯಗಳಲ್ಲಿ ಒಂದು ಸರಾಸರಿ ಕೃಷಿ ಕಾರ್ಮಿಕ ಕುಟುಂಬದ ಕೈಗೆಟುಕದ್ದು. ಅವರು ತಿಂಗಳ ಕೆಲವು ದಿನಗಳಲ್ಲಿ ಬರಿ ಹೊಟ್ಟೆಯಲ್ಲಿರಬೇಕಾಗುತ್ತದೆ ಎಂದು ತೋರಿಸುತ್ತದೆ ಎಂದು ಸಿಐಟಿಯು ಮುಖಂಡ ಜೆ ಎಸ್ ಮಜುಂದಾರ್ ಲೆಕ್ಕ ಹಾಕಿದ್ದಾರೆ.

ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ದಿನಗೂಲಿ ಇರುವ ಎಲ್ಲ ರಾಜ್ಯಗಳ ಸಂದರ್ಭದಲ್ಲೂ ನಿಜ. ಇಂತಹ ಇತರ ಕೆಲವು ರಾಜ್ಯಗಳೆಂದರೆ, ಉತ್ತರ ಪ್ರದೇಶ – ರೂ 309.30; ಒಡಿಶಾ – ರೂ 285.10; ಮಹಾರಾಷ್ಟ್ರ ರೂ. 303.50. ಇವುಗಳಲ್ಲಿ ಮಹಾರಾಷ್ಟ್ರ ಅತ್ಯಂತ ಹೆಚ್ಚು ಕೈಗಾರಿಕೀಕರಣಗೊಂಡಿರುವ ರಾಜ್ಯ ಎನಿಸಿಕೊಂಡಿದೆ ಎಂಬುದನ್ನು ಗಮನಿಸಬಹುದು.

ಇನ್ನೊಂದೆಡೆಯಲ್ಲಿ, ಕೃಷಿ ಕೂಲಿಕಾರರಿಗೆ ರಾಷ್ಟ್ರೀಯ ಸರಾಸರಿಗಿಂತ ಮೇಲೆ, ಅತ್ಯಧಿಕ ಕೂಲಿ ಸಿಗುವ ರಾಜ್ಯವೆಂದರೆ ಕೇರಳ. ಇಲ್ಲಿ ದಿನಗೂಲಿ ರೂ. 764.30, ಅಥವ ತಿಂಗಳಲ್ಲಿ 25 ದಿನಗಳ ಕೆಲಸಕ್ಕೆ ರೂ. 19,107.

ತುಲನಾತ್ಮಕವಾಗಿ ಹೆಚ್ಚು ಕೂಲಿ ಸಿಗುವ ಇತರ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಮ್ಮು ಮತ್ತು ಕಾಶ್ಮೀರ (ರೂ. 550.40), ಹಿಮಾಚಲ ಪ್ರದೇಶ (ರೂ 473.3), ತಮಿಳುನಾಡು – (470 ರೂ.) ಸೇರಿವೆ.

ಕೃಷಿಯೇತರ ಕಾರ್ಮಿಕರ ಸಂದರ್ಭದಲ್ಲಿಯೂ ಅತ್ಯಂತ ಕಡಿಮೆ ಕಡಿಮೆ ಸರಾಸರಿ ದಿನಗೂಲಿ ಮಧ್ಯಪ್ರದೇಶದಲ್ಲಿ (ರೂ 246.3) ಮತ್ತು ಗುಜರಾತ್ (ರೂ. 273.10) ಗಳಲ್ಲೇ; ರಾಷ್ಟ್ರೀಯ ಸರಾಸರಿ 348 ರೂ.

ಕೃಷಿಯೇತರ ಕಾರ್ಮಿಕರಿಗೆ ಕೂಡ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ಕೂಲಿ/ವೇತನ–ವೇತನ ಸಿಗುವ ರಾಜ್ಯಗಳು ಕೇರಳ–ದಿನಕ್ಕೆ ರೂ. 696.60; ಜಮ್ಮು ಮತ್ತು ಕಾಶ್ಮೀರ–ರೂ. 517.90; ತಮಿಳುನಾಡು – ರೂ 481.50; ಹರಿಯಾಣ – 451 ರೂ.

2022–23 ರಲ್ಲಿ ಕಟ್ಟಡ ಕಾರ್ಮಿಕರಿಗೆ ರೂ. 393.30 ರ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ದಿನಗೂಲಿಯ ರಾಜ್ಯಗಳಲ್ಲಿಯೂ ಎದ್ದು ಕಾಣುವ ಹೆಸರುಗಳೆಂದರೆ ಗುಜರಾತ್ ಮತ್ತು ಮಧ್ಯಪ್ರದೇಶ. ಗುಜರಾತ್‌ನಲ್ಲಿ ಸರಾಸರಿ ವೇತನ–ರೂ 323.20; ಮಧ್ಯಪ್ರದೇಶದಲ್ಲಿ–ರೂ 278.70 ಮತ್ತು ತ್ರಿಪುರಾ – ರೂ 286.10.

ಹೆಚ್ಚಿನ ಕೂಲಿ ಸಿಗುವ ನೀಡುವ ರಾಜ್ಯಗಳಲ್ಲಿಯೂ ಅವೇ ಹೆಸರುಗಳನ್ನು ಕಾಣಬಹುದು. ಕೇರಳ – ರೂ 852.50; ಜಮ್ಮು & ಕಾಶ್ಮೀರ – 534.50; ತಮಿಳುನಾಡು – ರೂ500.90; ಮತ್ತು ಹಿಮಾಚಲ ಪ್ರದೇಶ –ರೂ. 498.30.

ವಾಸ್ತವಿಕವಾಗಿ ನಿಜವಾದ ಗ್ರಾಮೀಣ ಕೂಲಿ ಬೆಳವಣಿಗೆ 2022–23ರಲ್ಲಿ ಕೃಷಿಯಲ್ಲಿ ಸರಾಸರಿ 5.8% ಮಾತ್ರ. ಕೃಷಿಯೇತರ ಇನ್ನೂ ಕಡಿಮೆ, 4.9 ಶೇ. ●

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಭಾರತದಲ್ಲಿ ವ್ಯಾಪಕ ಬಡತನ: ಬಿಹಾರದ ಜಾತಿಗಣತಿ ಕಣ್ಣು ತೆರೆಸಬೇಕು



5 ಟ್ರಿಲಿಯನ್ ಡಾಲರ್ ಜಿಡಿಪಿಯ ಗುರಿ ಸಾಧಿಸುವುದೇ ತನ್ನ ಕಿರೀಟದಲ್ಲಿ ಸಿಕ್ಕಿಸಿಕೊಳ್ಳುವ ಕಟ್ಟಕಡೆಯ ಗುರಿ ಎಂಬಂತೆ ಸಾರುತ್ತಲೇ ಬಂದಿದೆ ಬಿಜೆಪಿ ಒಕ್ಕೂಟ ಸರ್ಕಾರ. ಆದರೆ, ಇದರ ಹಿಂದೆ ಒಂದು ಭಯಾನಕ ಸತ್ಯವಿದೆ. ಒಟ್ಟು ಜನಸಂಖ್ಯೆಯಲ್ಲಿ ಜಾತಿವಾರು ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಸಿದ ಒಂದು ಸಮೀಕ್ಷೆಯ ಅಂಕಿ–ಅಂಶಗಳು, ದೇಶದ ಒಟ್ಟು ಜನಸಂಖ್ಯೆಯ ಮೂರನೇ ಎರಡರಷ್ಟು ಮಂದಿ ಸಂಪೂರ್ಣ ಬಡತನದಲ್ಲಿ ಮುಳುಗಿದ್ದಾರೆ ಎಂದು ಹೇಳುತ್ತವೆ. ಇದು, ಒಂದು ನಿರಾಶಾದಾಯಕ ವಾಸ್ತವವೂ ಹೌದು. ಆದರೆ ಬಿಜೆಪಿ ಸರ್ಕಾರವು ಅನುಮಾನಾಸ್ಪದವಾದ 'ಬಹು ಆಯಾಮೀಯ ಬಡತನ' ಎಂಬ ಪರಿಕಲ್ಪನೆಯನ್ನು ಆಧರಿಸಿ, ಜಿಡಿಪಿ ಬೆಳವಣಿಗೆಯು ಬಡತನವನ್ನು ತಂತಾನೇ ನಿರ್ಮೂಲನೆ ಮಾಡುತ್ತದೆ ಎಂದು ಹೇಳುತ್ತಲೇ ಇದೆ. ಇದು ಅದರ ನಿಲುವಿನ ಟೊಳ್ಳುತನವೋ ಅಥವ ಒಳ ಉದ್ದೇಶವೋ. ಏನೇ ಇರಲಿ, ಈಗ ಬಿಹಾರ ಜಾತಿ ಜನಗಣತಿಯ ಫಲಿತಾಂಶಗಳು ಇಂಥ ಸರಕಾರೀ ಪ್ರಚಾರದಿಂದ ಆಕರ್ಷಿತರಾದ ಎಲ್ಲರ ಕಣ್ಣುಗಳನ್ನೂ ತೆರೆಸಬೇಕು.

ಬಿಹಾರ ಜಾತಿ ಸಮೀಕ್ಷೆಯ ಒಂದು ಗಮನಾರ್ಹ ಅಂಶವೆಂದರೆ, ಸರ್ಕಾರಗಳು ಅಧಿಕೃತವಾಗಿ ಹೇಳುವುದಕ್ಕಿಂತಲೂ ಹೆಚ್ಚಿನ ಮಟ್ಟದ ಬಡತನವು ದೇಶದಲ್ಲಿದೆ ಎಂದು ಅನೇಕ ವರ್ಷಗಳಿಂದಲೂ ಎಡಪಂಥೀಯರು ಹೇಳುತ್ತಾ ಬಂದಿರುವ ಸಂಗತಿ ನಿಜವೆಂದು ಅದು ದೃಢಪಡಿಸಿದೆ. ಬಿಹಾರದ ಶೇ. 34.1ರಷ್ಟು ಜನರ ಕೌಟುಂಬಿಕ ಮಾಸಿಕ ಆದಾಯವು 6,000 ರೂ ಅಥವಾ ಅದಕ್ಕಿಂತಲೂ ಕಡಿಮೆ ಇದೆ ಎಂದು ಸಮೀಕ್ಷೆ ಹೇಳುತ್ತದೆ. ಮಾಸಿಕ 6000 ರೂ.ಗಳ ಆದಾಯವು, ಸರ್ಕಾರವೇ ಅಧಿಕೃತವಾಗಿ ನಿಗದಿಪಡಿಸಿದ "ಬಡತನ ರೇಖೆ"ಯ ಮಟ್ಟಕ್ಕೆ ಹೊಂದಿಕೆಯಾಗುತ್ತದೆ. ಆದರೆ, ಬಡತನ ರೇಖೆಯ ಉಲ್ಲೇಖವನ್ನೇ ಸರ್ಕಾರ ಇತ್ತೀಚೆಗೆ ನಿಲ್ಲಿಸಿಬಿಟ್ಟಿದೆ. ಕೆಲವು ವರ್ಷಗಳ ಹಿಂದೆ ಉಲ್ಲೇಖ ಮಾಡುತ್ತಿದ್ದ ಈ "ಬಡತನ ರೇಖೆ" ಮಾನದಂಡದ ಬದಲಿಗೆ, ಸರ್ಕಾರವು ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳು ರೂಪಿಸಿದ "ಬಹು ಆಯಾಮದ ಬಡತನ" ಎಂಬ ಪರಿಕಲ್ಪನೆಯನ್ನು ಬಳಸುತ್ತದೆ. ಈ "ಬಹು ಆಯಾಮದ ಬಡತನ" ಪರಿಕಲ್ಪನೆಯ ಪ್ರಕಾರವಾಗಿ ನೋಡಿದರೆ, ದೇಶದಲ್ಲಿ ಕೇವಲ ಶೇ. 15ರಷ್ಟು ಮಂದಿ ಮಾತ್ರ ಬಡತನದಲ್ಲಿರುವುದು ಕಂಡುಬರುತ್ತದೆ! ಬಿಹಾರವು ಇಡೀ ದೇಶದ ಪ್ರತಿಬಿಂಬವಲ್ಲ ಎಂಬುದು ನಿಜ. ಆದರೆ, ಬಿಹಾರ ಸಮೀಕ್ಷೆಯ ಅಂಕಿ–ಅಂಶಗಳು ದೇಶದಲ್ಲಿ ಬಡತನದ ವ್ಯಾಪಕತೆಯನ್ನು ಅಲ್ಲಗಳೆಯಲಾಗದಷ್ಟು ಸಮಗ್ರವಾಗಿವೆ.


ಬಡತನವನ್ನು ಅಳೆಯಲು 6,000 ರೂ.ಗಳ ಮಟ್ಟವನ್ನು ಒಂದು ಮಾನದಂಡವಾಗಿ ತೆಗೆದುಕೊಳ್ಳುವ ತರ್ಕವು ಈ ಕೆಳಗಿನ ಕಾರಣಕ್ಕಾಗಿ ಉದ್ಭವಿಸುತ್ತದೆ. ಸರ್ಕಾರವೇ ನೇಮಿಸಿದ್ದ ತೆಂಡೂಲ್ಕರ್ ಸಮಿತಿಯು, 2011–12ರ ವರ್ಷಕ್ಕಾಗಿ, ಗ್ರಾಮೀಣ ಭಾರತದ ಬಡತನ ರೇಖೆಯನ್ನು ನಿರ್ಧರಿಸಲು ದೈನಿಕ 29 ರೂ.ಗಳ ಮಟ್ಟವನ್ನು ಶಿಫಾರಸು ಮಾಡಿತ್ತು. 2011–12 ಮತ್ತು 2021–22ರ ನಡುವೆ ಕೃಷಿ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಶೇ. 77.5ರಷ್ಟು ಏರಿಕೆಯಾಗಿದೆ. ಈ ಏರಿಕೆ ಆಧರಿತ ಲೆಕ್ಕಾಚಾರದ ಪ್ರಕಾರ, 2021–22ರ ಬಡತನ ರೇಖೆಯ ಮಟ್ಟವು ದೈನಿಕ 51.47 ರೂ.ಗಳಾಗುತ್ತದೆ. ಅಂದರೆ, ತಿಂಗಳಿಗೆ 6177ರೂ.ಗಳಿಗಿಂತ ಕಡಿಮೆ ವರಮಾನ ಗಳಿಸುವ ನಾಲ್ಕು ಜನರ ಒಂದು ಗ್ರಾಮೀಣ ಕುಟುಂಬವನ್ನು ಬಡತನದ ರೇಖೆಯ ಕೆಳಗಿದೆ ಎಂದು ಪರಿಗಣಿಸಲಾಗುತ್ತದೆ. ಮೇಲಾಗಿ, ಸರ್ಕಾರ ನಿಗದಿಪಡಿಸಿದ ಮಾನದಂಡದ ಪ್ರಕಾರವೇ, ಮಾಸಿಕ 6000 ರೂ.ಗಳ ವರಮಾನವನ್ನು ಗ್ರಾಮೀಣ ಬಡತನದ ಮಾನದಂಡವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಸಮರ್ಥನೀಯವೂ ಹೌದು.

ನಗರ ಬಡತನ ಮಾನದಂಡವು ತುಸು ಹೆಚ್ಚಿನ ಮಟ್ಟದ್ದೇ ಇರಬೇಕಾಗುತ್ತದೆ. ನಗರ ಮತ್ತು ಗ್ರಾಮೀಣ ಜನರ ಬಡತನದ ವ್ಯಾಪ್ತಿಯನ್ನು ಒಟ್ಟಾರೆಯಾಗಿ ನೋಡುವುದಕ್ಕಾಗಿ, ಮಾಸಿಕ 6,000 ರೂ.ಗಳ ಮಟ್ಟವನ್ನೇ ಈ ಎರಡೂ ಪ್ರದೇಶಗಳಿಗೂ ಮಾನದಂಡವಾಗಿ ತೆಗೆದುಕೊಳ್ಳುವುದರಿಂದ ಬಡತನದ ಅಗಾಧತೆಯನ್ನು ಸಂಪೂರ್ಣವಾಗಿ ಕೀಳಂದಾಜು ಮಾಡಿದಂತಾಗುತ್ತದೆ. ಆದಾಗ್ಯೂ, ಬಡತನದ ಪ್ರಮಾಣವನ್ನು ಉತ್ಪ್ರೇಕ್ಷಿಸಿ ಹೇಳುತ್ತಿದ್ದಾರೆ ಎಂದು ಯಾರೂ ನಮ್ಮ ಮೇಲೆ ಆರೋಪ ಹೊರಿಸಬಾರದು ಎಂಬುದನ್ನು ಖಚಿತಪಡಿಸಿಕೊಳ್ಳಲು ಉದ್ದೇಶಪೂರ್ವಕವಾಗಿಯೇ ನಾವು ಮಾಸಿಕ 6,000 ರೂ.ಗಳ ಏಕರೂಪದ ಮಾನದಂಡವನ್ನೇ ಈ ದತ್ತಾಂಶಗಳಿಗೆ ಅನ್ವಯಿಸಿ ನೋಡೋಣ.

ಭಯಾನಕ ಸತ್ಯ –ನಿರಾಶಾದಾಯಕ ವಾಸ್ತವ

ಮಾಸಿಕ 6,000 ರೂ.ಗಳ ಮಾನದಂಡವು ಸರ್ಕಾರದ ಅಧಿಕೃತ ಮಾನದಂಡದೊಂದಿಗೆ ಹೋಲುತ್ತದೆಯಾದರೂ, ನಿಜಕ್ಕೂ ಅದು ಸೂಕ್ತವಲ್ಲ. ತೆಂಡೂಲ್ಕರ್ ಸಮಿತಿಯು ಸರ್ಕಾರದಿಂದ ಅಧಿಕೃತವಾಗಿ ನೇಮಕಗೊಂಡ ಒಂದು ಸಮಿತಿಯಾಗಿದ್ದುದರಿಂದ, ಬಡತನ ರೇಖೆಯನ್ನು ಸೂಚಿಸುವಲ್ಲಿ ಸರ್ಕಾರದ ಬಯಕೆಯನ್ನು ಗೌರವಿಸಲು ಅದು ಬದ್ಧವಾಗಿತ್ತು. ಆದರೆ ನಾವು ಸಮಸ್ಯೆಯನ್ನು ತುಸು ಭಿನ್ನವಾಗಿ ನೋಡೋಣ. ಗ್ರಾಮೀಣ ಭಾರತದ ಪ್ರತಿ ವ್ಯಕ್ತಿಗೆ ದಿನಕ್ಕೆ 2200 ಕ್ಯಾಲೊರಿಗಳ ಅವಶ್ಯಕತೆಯನ್ನು ಬಡತನದ ಮಾನದಂಡವಾಗಿ ಯೋಜನಾ ಆಯೋಗವೇ ಮೂಲತಃ ಒಪ್ಪಿಕೊಂಡಿತ್ತು. ಗ್ರಾಮೀಣ ಭಾರತದಲ್ಲಿ 2200 ಕ್ಯಾಲೊರಿಗಳ ಸೇವನೆಗಾಗಿ ತಗಲುವ ತಲಾ ವೆಚ್ಚವು, 2017–18 ರಲ್ಲಿ, ರಾಷ್ಟ್ರೀಯ ಮಾದರಿ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ, ತಲಾ 70 ರೂ.ಗಳಾಗುತ್ತದೆ. ಅಂದರೆ, ದೈನಿಕ 2200 ಕ್ಯಾಲೊರಿಗಳ ಸೇವನೆಗಾಗಿ ನಾಲ್ಕು ಜನರ ಒಂದು ಕುಟುಂಬವು ತಿಂಗಳಿಗೆ 8400 ರೂ.ಗಳನ್ನು ಖರ್ಚುಮಾಡಬೇಕಾಗುತ್ತದೆ. 2017–18 ಮತ್ತು 2021–22ರ ಅವಧಿಯಲ್ಲಿ, ಕೃಷಿ ಕಾರ್ಮಿಕ ಬೆಲೆ ಸೂಚ್ಯಂಕದ ಪ್ರಕಾರ ಬೆಲೆಗಳಲ್ಲಿ ಶೇ. 21ರಷ್ಟು ಹೆಚ್ಚಳವಾಗಿದೆ. ಹಾಗಾಗಿ, 2021–22 ರಲ್ಲಿ ಗ್ರಾಮೀಣ ಭಾರತದ ಬಡತನವನ್ನು ವ್ಯಾಖ್ಯಾನಿಸುವ ಮಾನದಂಡದ ಪ್ರಕಾರ, ನಾಲ್ಕು ಸದಸ್ಯರ ಕುಟುಂಬದ ಮಾಸಿಕ ವೆಚ್ಚವು 10,164 ರೂ.ಗಳಾಗುತ್ತದೆ. ಆದ್ದರಿಂದ, ಗ್ರಾಮೀಣ ಬಡತನವನ್ನು ವ್ಯಾಖ್ಯಾನಿಸುವ ಕುಟುಂಬ ಆದಾಯದ ಮಾನದಂಡವಾಗಿ ನಾವು ಕನಿಷ್ಠ ಪಕ್ಷ 10,000 ರೂ.ಗಳನ್ನಾದರೂ ತೆಗೆದುಕೊಳ್ಳಬೇಕಾಗುತ್ತದೆ. ನಗರ ಬಡತನವನ್ನು ವ್ಯಾಖ್ಯಾನಿಸುವ ವರಮಾನದ ಮಟ್ಟವು ಇನ್ನೂ ಹೆಚ್ಚಿನ ಮಟ್ಟದಲ್ಲೇ ಇರಬೇಕಾಗುತ್ತದೆ. ಆದರೆ, ಬಡತನವನ್ನು ಅತಿಶಯಗೊಳಿಸಿದ ಆರೋಪವನ್ನು ನಮ್ಮ ಮೇಲೆ ಹೊರಿಸುವ ಅವಕಾಶವನ್ನು ತಪ್ಪಿಸುವ ಸಲುವಾಗಿ ನಾವು ಉದ್ದೇಶಪೂರ್ವಕವಾಗಿಯೇ ನಗರ ಮತ್ತು ಗ್ರಾಮೀಣ ಕುಟುಂಬಗಳ ಆದಾಯಗಳೆರಡಕ್ಕೂ ಸಮಾನವಾಗಿ 10,000 ರೂ.ಗಳ ಮಾನದಂಡವನ್ನೇ ಅನ್ವಯಿಸೋಣ.

ಬಿಹಾರ ಜಾತಿ ಸಮೀಕ್ಷೆಯ ಪ್ರಕಾರ, ಆ ರಾಜ್ಯದ ಶೇ. 64ರಷ್ಟು ಮಂದಿಯ ವರಮಾನವು ಈ ಮಾನದಂಡದ ಮಟ್ಟಕ್ಕಿಂತಲೂ ಕೆಳಗಿರುವುದು ಕಂಡುಬರುತ್ತದೆ. 2022–23 ವರ್ಷದಲ್ಲಿ ಭಾರತದ ಪ್ರಮುಖ ರಾಜ್ಯವೊಂದರ ಜನಸಂಖ್ಯೆಯಲ್ಲಿ ಕನಿಷ್ಠ ಶೇ.64ರಷ್ಟು ಮಂದಿ ಸಂಪೂರ್ಣ ಬಡತನದಲ್ಲಿ ಮುಳುಗಿದ್ದಾರೆ ಎಂಬುದನ್ನು ಕಲ್ಪಿಸಿಕೊಳ್ಳಲೂ ಸಹ ಆಶ್ಚರ್ಯವಾಗುತ್ತದೆ. ಸರ್ಕಾರದ ಅಧಿಕೃತ ವಕ್ತಾರರು ಜಿಡಿಪಿಯ ಬೆಳವಣಿಗೆಯೇ ದೇಶದ ಎಲ್ಲಾ ಆರ್ಥಿಕ ಸಮಸ್ಯೆಗಳಿಗೂ ಪರಿಹಾರವೆಂಬಂತೆ ಜಿಡಿಪಿಯ ಬೆಳವಣಿಗೆಯ ಬಗ್ಗೆ ಹೇಳಿಕೊಳ್ಳುತ್ತಲೇ ಬಂದಿದ್ದಾರೆ. 5 ಟ್ರಿಲಿಯನ್ ಡಾಲರ್ ಜಿಡಿಪಿಯ ಗುರಿ ಸಾಧಿಸುವುದೇ ತನ್ನ ಕಿರೀಟದಲ್ಲಿ ಸಿಕ್ಕಿಸಿಕೊಳ್ಳುವ ಕಟ್ಟಕಡೆಯ ಗುರಿ ಎಂಬಂತೆ ಸಾರುತ್ತಲೇ ಬಂದಿದೆ ಸರ್ಕಾರ. ಆದರೆ, ಜಿಡಿಪಿ ಬೆಳವಣಿಗೆಯ ಈ ಹೊಗಳಿಕೆಯ ಹಿಂದೆ ಒಂದು ಭಯಾನಕ ಸತ್ಯವಿದೆ. ನಾವು ಬಿಹಾರ ಜಾತಿ ಸಮೀಕ್ಷೆಯ ಅಂಕಿ ಅಂಶಗಳನ್ನು ಇಡೀ ದೇಶಕ್ಕೆ ಅನ್ವಯಿಸಿ ಲೆಕ್ಕಹಾಕಿದರೆ, ಭಾರತದ ಒಟ್ಟು ಜನಸಂಖ್ಯೆಯ ಮೂರನೇ ಎರಡರಷ್ಟು ಮಂದಿ ಸಂಪೂರ್ಣ ಬಡತನದಲ್ಲಿ ಮುಳುಗಿದ್ದಾರೆ ಎಂಬುದು ಕಂಡುಬರುತ್ತದೆ. ಇದುವೇ ಆ ಭಯಾನಕ ಸತ್ಯ.



ಸಮಾನತೆ–ಸಮತ್ವ–ವಾಸ್ತವತೆ (ಚಿತ್ರಕೃಪೆ: ಎಲ್ಎಟಿ ಬ್ಲಾಗ್)



ಈ ಭಯಾನಕ ಸತ್ಯದ ಒಂದು ಮಿನುಗು ನೋಟವು ಈಗಾಗಲೇ ಹಲವಾರು ಇತರ ಸೂಚಕಗಳ ಮೂಲಕ, ಅದರಲ್ಲೂ ವಿಶೇಷವಾಗಿ ಒಟ್ಟು 125 ದೇಶಗಳ ಪೈಕಿ ಭಾರತವನ್ನು 111ನೇ ಸ್ಥಾನದಲ್ಲಿರಿಸಿರುವ ಜಾಗತಿಕ ಹಸಿವು ಸೂಚ್ಯಂಕದ ಮೂಲಕ, ಲಭ್ಯವಿದೆ. ಆದರೆ, ಇಂತಹ ಪ್ರತಿಯೊಂದು ಸೂಚಕವನ್ನೂ ಕ್ಷುಲ್ಲಕವೆಂದು ಸರ್ಕಾರ ತಳ್ಳಿಹಾಕಿದೆ. ಒಟ್ಟು ಜನಸಂಖ್ಯೆಯಲ್ಲಿ ಜಾತಿವಾರು ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಸಿದ ಒಂದು ಸಮೀಕ್ಷೆಯೂ ಸಹ ದೇಶದಲ್ಲಿ ಬಡತನವನ್ನು ಮತ್ತು ಅದರ ಅಗಾಧತೆಯನ್ನು ಹೇಳುತ್ತದೆ. ಇದು, ಒಂದು ನಿರಾಶಾದಾಯಕ ವಾಸ್ತವವೂ ಹೌದು.

ಬಿಜೆಪಿಯ ತರ್ಕದ ಟೊಳ್ಳುತನ ಮತ್ತು ಒಳ ಉದ್ದೇಶ

ಈ ನಿರಾಶಾದಾಯಕ ವಾಸ್ತವವು ನಿರ್ದಿಷ್ಟವಾಗಿ ಅರ್ಥವ್ಯವಸ್ಥೆಯ ಬಗ್ಗೆ ಬಿಜೆಪಿಯು ಹೊಂದಿರುವ ನಿಲುವಿನ ಟೊಳ್ಳುತನವನ್ನು, ಅಷ್ಟೇ ಏಕೆ, ಬಿಜೆಪಿಯ ಒಳ ಉದ್ದೇಶವನ್ನು ಬಹಿರಂಗಪಡಿಸುತ್ತದೆ. ಬಿಜೆಪಿಯು ಏಕಸ್ವಾಮ್ಯ ಬಂಡವಾಳಶಾಹಿಗಳ, ಅದರಲ್ಲೂ ವಿಶೇಷವಾಗಿ ಬಂಟ(ಕ್ರೋನಿ) ಏಕಸ್ವಾಮ್ಯ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಎತ್ತಿಹಿಡಿಯುವ ಪಕ್ಷವಾಗಿದೆ ಎಂಬ ಅಂಶವು ಎಲ್ಲರಿಗೂ ಸ್ಪಷ್ಟವಾಗಿದೆ. ಹಾಗೆ ನೋಡಿದರೆ, ಎಲ್ಲ ಫ್ಯಾಸಿಸ್ಟ್ ಸಂಘಟನೆಗಳೂ ಈ ಲಕ್ಷಣವನ್ನು ಹೊಂದಿವೆ. ಆದರೆ, ಜಿಡಿಪಿಯ ಬೆಳವಣಿಗೆಯು ಭಾರತದ ಅರ್ಥವ್ಯವಸ್ಥೆಗೆ ಅತ್ಯಂತ ಮಹತ್ವದ್ದಾಗಿದೆ ಮತ್ತು ಅಂಥಹ ಬೆಳವಣಿಗೆಯನ್ನು ಬಂಡವಾಳಶಾಹಿಗಳು, ಅದರಲ್ಲೂ ವಿಶೇಷವಾಗಿ ಏಕಸ್ವಾಮ್ಯ ಬಂಡವಾಳಶಾಹಿಗಳು ಮಾತ್ರವೇ ಆಗುಮಾಡುತ್ತಾರೆ ಎಂದು ಹೇಳುವ ಮೂಲಕ ಬಿಜೆಪಿಯು ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತದೆ. ಜಿಡಿಪಿಯ ಬೆಳವಣಿಗೆಗಾಗಿ ಬಂಡವಾಳಗಾರರಿಗೆ ವರ್ಗಾವಣೆ ರೂಪದಲ್ಲಿ ಪ್ರೋತ್ಸಾಹಕಗಳೂ ಸೇರಿದಂತೆ ಎಲ್ಲ ಸೌಲಭ್ಯಗಳನ್ನೂ ಸರ್ಕಾರ ಒದಗಿಸುತ್ತಿದೆ. ಮತ್ತು ಜಿಡಿಪಿ ಬೆಳವಣಿಗೆಗೆ ಒತ್ತು ನೀಡುವ ಮೂಲಕ ಏಕಸ್ವಾಮ್ಯ ಬಂಡವಾಳಶಾಹಿಗಳ ಹಿತಾಸಕ್ತಿಗಳೇ "ರಾಷ್ಟ್ರದ ಹಿತಾಸಕ್ತಿಗಳು" ಎಂಬಂತೆ ವರ್ತಿಸುತ್ತದೆ. ವಿಶ್ವದ ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ತನ್ನ ಜಿಡಿಪಿ ಬೆಳವಣಿಗೆಯೇ ಅತಿ ಹೆಚ್ಚಿನದೆಂದು ಸರ್ಕಾರ ಹೇಳಿಕೊಳ್ಳುತ್ತದೆ. ಆದರೆ, ಭಾರತದ ಜಿಡಿಪಿ ಬೆಳವಣಿಗೆಯು ದೇಶದ ಮೂರನೇ ಎರಡರಷ್ಟು ಭಾಗದ ಜನರನ್ನು ಸಂಪೂರ್ಣ ಬಡತನದಲ್ಲಿ ಮುಳುಗಿಸಿದೆ ಎಂಬ ವಾಸ್ತವವು ಬಿಜೆಪಿಯ ತರ್ಕದ ಟೊಳ್ಳುತನ ಮತ್ತು ಒಳ ಉದ್ದೇಶ ಈ ಎರಡನ್ನೂ ಎತ್ತಿ ತೋರುತ್ತದೆ.

ಬಹು ಆಯಾಮದ ಬಡತನ ಸೂಚ್ಯಂಕದ ಆವಿಷ್ಕಾರದ ಬಗ್ಗೆ ನೀವೇನು ಹೇಳುತ್ತೀರಿ ಎಂದು ಕೇಳಬಹುದು. ಈ ಸೂಚ್ಯಂಕವು ಬೌದ್ಧಿಕ ಗೊಂದಲವನ್ನು ಆಧರಿಸಿದೆ ಎಂದೇ ಹೇಳಬಹುದು. ಪ್ರತಿಯೊಂದು ಉತ್ಪಾದನಾ ವಿಧಾನವೂ ಒಂದು ನಿರ್ದಿಷ್ಟ ರೀತಿಯಲ್ಲಿ ನಡೆದುಕೊಳ್ಳುವ

ಪುಟ 14 ಕ್ಕೆ

'ಮೋದಿಗೇಟ್' ಎಂದೇ ಹೆಸರಾದ ಲಲಿತ್ ಮೋದಿಯ....... ಪುಟ 11 ರಿಂದ

ನೀಡುವುದನ್ನು ಏನೆಂದು ಕರೆಯಬೇಕು? ಅದು ಅವರ ವೃತ್ತಿ ಧರ್ಮ, ಅವರದು ವೃತ್ತಿಪರ ಸಂಬಂಧ ಎನ್ನಬೇಕೇನು? ಒಂದು ಸರ್ಕಾರದ ಪ್ರಮುಖ ಸಂಪುಟ ಸ್ಥಾನದಲ್ಲಿದ್ದು, ದೇಶದಿಂದ ಪರಾರಿಯಾದ ವಂಚಕರನ್ನು ಹಿಡಿದು ತಂದು ಕಾನೂನಿಗೆ ಒಪ್ಪಿಸಬೇಕಾದ ಸಚಿವರಿಗೆ, ತಮ್ಮದೇ ಕುಟುಂಬದ ಸದಸ್ಯರು ವಂಚಕ, ದೇಶಭ್ರಷ್ಟನೊಬ್ಬನ ನೆರವಿಗೆ ನಿಂತಿದ್ದಾರೆ ಎಂಬುದನ್ನು ಹೇಗೆ ತಾನೆ ಸಹಿಸಿಕೊಳ್ಳಲು ಸಾಧ್ಯ!!

ಸೋದರಳಿಯನಿಗೆ ಬ್ರಿಟಿಷ್ ವಿಶ್ವವಿದ್ಯಾಲಯ ಪ್ರವೇಶ ಪಡೆಯಲು

ಮತ್ತೊಂದೆಡೆ, ಲಲಿತ್ ಮೋದಿ ಅವರು ಸುಷ್ಮಾ ಸ್ವರಾಜ್ ಅವರ ಸೋದರಳಿಯನಿಗೆ ಬ್ರಿಟಿಷ್ ವಿಶ್ವವಿದ್ಯಾಲಯ ಪ್ರವೇಶ ಪಡೆಯಲು ಸಹಾಯ ಮಾಡಲು ಬ್ರಿಟಿಷ್ ಸಂಸದ ಕೀತ್ ವಾಜ್ ಅವರಿಂದ ಶಿಫಾರಸು ಮಾಡಿಸಿದ್ದರು ಎಂದೂ ವರದಿಯಾಗಿವೆ.

'ಉನ್ನತ ನಾಯಕ'ರಿಂದಲೇ ರಹಸ್ಯ ಬಯಲಾಯಿತೆ!!

ಸುಷ್ಮಾ ಅವರ ಈ ಹಗರಣ ಅವರದೇ ಪಕ್ಷದ ಪ್ರತಿಸ್ಪರ್ಧಿಗಳಿಗೂ ಸಹಾಯ ಮಾಡಿತು. ಅವರನ್ನು ರಾಜಕೀಯವಾಗಿ ಮತ್ತು ನಿಧಾನವಾಗಿ ಉತ್ತಮ ಮಂತ್ರಿ ಎಂಬ ಖ್ಯಾತಿಯನ್ನು ನಿರ್ಮಿಸುವ ಸಮಯದಲ್ಲಿ ಈ ಪ್ರಕರಣ ಅವರನ್ನು ದುರ್ಬಲಗೊಳಿಸಿತು. ಭವಿಷ್ಯದ ಪೈಪೋಟಿಯ ಸಂದರ್ಭದಲ್ಲಿ ಅವರು ಉನ್ನತ ಸ್ಥಾನವನ್ನು ಒಳಗೊಂಡಂತೆ, ಯಾವುದೇ ಹುದ್ದೆಗೆ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮುವ ಯಾವುದೇ ಅವಕಾಶ ಇರದಂತಾಯ್ತು.

ಕೆಲವು ಹಿರಿಯ– ಮಂತ್ರಿಗಳ ನಡುವೆ ಪೈಪೋಟಿ ಅಂದೂ ಇತ್ತು ಎಂಬುದು ಅಷ್ಟೇನೂ ರಹಸ್ಯವಲ್ಲ. ಸುಷ್ಮಾ ಅವರನ್ನು ಉನ್ನತಸ್ಥಾನಕ್ಕೆ ಬರುವುದನ್ನು ತಡೆಯುವ ಮತ್ತು ತಮ್ಮ 'ಉನ್ನತಸ್ಥಾನ'ಕ್ಕೆ ಇರುವ ಪೈಪೋಟಿಯನ್ನು ತಡೆಯುವ ಉದ್ದೇಶದಿಂದ ಬಿಜೆಪಿಯ 'ಹಿರಿಯ–ಮಂತ್ರಿ' ಗಳೇ ಸುಷ್ಮಾ ಮಾಡಿದ ಇಮೇಲ್‌ಗಳನ್ನು ಸೋರಿಕೆ ಮಾಡಿರಬಹುದು ಎಂಬ ಗುಸುಗುಸು ರಾಜಕೀಯ ವಲಯದಲ್ಲಿ ಕೇಳಿಬಂದಿದೆ.

ಬಾನ್ಸುರಿ ಸ್ವರಾಜ್ ಬಿಜೆಪಿ ಕಾನೂನು ಘಟಕಕ್ಕೆ ನೇಮಕ

ಭಾರತಕ್ಕೆ ಬೇಕಾಗಿರುವ ಆರೋಪಿ ಪರ ವಕಾಲತ್ತು ವಹಿಸಿದ ಬಾನ್ಸುರಿ ಸ್ವರಾಜ್ (ಸುಷ್ಮಾ ಸ್ವರಾಜ್ ಅವರ ಪುತ್ರಿ) ಅವರು 2023ರ ಮೇ ನಲ್ಲಿ ದೆಹಲಿ ಭಾರತೀಯ ಜನತಾ ಪಕ್ಷದ ಕಾನೂನು ಘಟಕದ ಸಹ ಸಂಚಾಲಕರಾಗಿ ನೇಮಕಗೊಳ್ಳುವುದರೊಂದಿಗೆ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ್ದಾರೆ.

ಮೋದಿ ಸೋಲಬೇಕು ದೇಶ ಉಳಿಯಬೇಕು..... ಪುಟ 9 ರಿಂದ

ಮಾಡಬೇಕಿದೆ.

ಅಂಬೇಡ್ಕರ್ ಅವರು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸರ್ಕಾರಗಳು ಜನಪರವಾದ ನೀತಿಗಳನ್ನು ತರಬೇಕು ಎಂದು ಹೇಳಿದ್ದಾರೆ. ಆದರೆ, ಅವರ ಆಶಯಕ್ಕೆ ವಿರೋಧವಾಗಿ ನೀತಿಗಳು ಜಾರಿಯಾಗುತ್ತಿವೆ. ಅದಾನಿ, ಅಂಬಾನಿಗಳಂತಹ ಬಂಡವಾಳಿಗರ ಸಂಪತ್ತು ಹೆಚ್ಚುತ್ತಿವೆ. ಸುಳ್ಳು ಭರವಸೆಗಳನ್ನು ನೀಡಿ, ಜನರನ್ನು ಸರ್ಕಾರಗಳು ಯಾಮಾರಿಸುತ್ತಿವೆ. ಈಗ ಎರಡನೇ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾಗಬೇಕಿದೆ. ಕೋಮುವಾದಿ, ಬಂಡವಾಳಶಾಹಿ ಪರವಾದ ಬಿಜೆಪಿ ಕೇಂದ್ರ ಸರ್ಕಾರವನ್ನು ಸೋಲಿಸಬೇಕಿದೆ. ಇದಕ್ಕಾಗಿ ಸುದೀರ್ಘ ನಡೆಯಬೇಕಿದೆ.

ಟಿ. ಯಶವಂತ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ

ಮೋದಿ ಆಡಳಿತದ ಕಾರ್ಪೊರೇಟ್ ಹಿಂದುತ್ವ ಅಜೆಂಡಾದಿಂದಾಗಿ ಭಾರತದ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಂವಿಧಾನಕ್ಕೆ ಭಾರಿ ದೊಡ್ಡ ಗಂಡಾತರ ಬಂದಿದೆ. ಇಂಡಿಯಾ ಅಂದರೆ ಇಂದಿರಾ ಎಂದು ಹೇಳುತ್ತಾ, ಸರ್ವಾಧಿಕಾರ ಹೇರಿದಾಗ ಅವರ ವಿರುದ್ಧ ತೀರ್ಪು ನೀಡಿತ್ತು. ವಾಜಪೇಯಿ ಕಾಲದಲ್ಲಿ ಕೋಮುವಾದ ಮತ್ತು ಉದಾರವಾದಿ ನೀತಿಗಳನ್ನು ತೀವ್ರವಾಗಿ ಹೇರಿದಾಗ ಅದನ್ನೂ ಜನರು ತಪ್ಪಿಸಿದ್ದಾರೆ. ಇದೀಗ ಕಾರ್ಪೊರೇಟ್‌ಗಳು ರೈತರನ್ನು ಹೇಗೆ ಬೇಕಾದರೂ ಶೋಷಣೆ ಮಾಡಲು ಮೋದಿ ಸರ್ಕಾರ ಅವಕಾಶ ಮಾಡುಕೊಟ್ಟಿದೆ. ಇಂತಹ ಕಾರ್ಪೊರೇಟ್ ಹಿಂದುತ್ವ ಮೋದಿ ಸರ್ಕಾರವನ್ನು ಕಿತ್ತೊಗೆಯಲು ರೈತ ಮತ್ತು ಕಾರ್ಮಿಕರ ಐಕ್ಯ ಹೋರಾಟ ನಿಂತಿದೆ.

ಈ ಹಿಂದೆ ರೈತರ ಆತ್ಮಹತ್ಯೆ ನೀರಾವರಿ ಮತ್ತು ವಾಣಿಜ್ಯ ಬೆಳೆಗಳಿಗೆ ಮಾತ್ರ ನಡೆಯುತ್ತಿತ್ತು. ಆದ್ರೆ ಇಂದು ಎಲ್ಲಾ ಬೆಳೆಗಳನ್ನು ಬೆಳೆಯುವ ರೈತರು ಆತ್ಮಹತ್ಯೆ ಮಾಡುತ್ತಿದ್ದಾರೆ. ಕೇರಳ ಮತ್ತು ತಮಿಳುನಾಡು ಸರ್ಕಾರಗಳು ಕೇಂದ್ರದ ವಿದ್ಯುತ್ತಕ್ತಿ ನೀತಿಯನ್ನು ಜಾರಿ ಮಾಡುವುದಿಲ್ಲ ಎಂದು ಹೇಳುವುದಾರೆ, ರಾಜ್ಯದ ಸಿದ್ದರಾಮಯ್ಯ ಸರ್ಕಾರ ಕೂಡಾ ಹೀಗೆ ಹೇಳಲು ಯಾಕೆ ಸಾಧ್ಯವಿಲ್ಲ?

ಬಸವರಾಜಪ್ಪ, ರೈತ ಹೋರಾಟಗಾರರು

ಅಸಮಾನತೆ ತೊರೆದು ಸಮಾನತೆ, ಸಮತಾವಾದ ಆಶಯದೊಂದಿಗೆ ದೇಶದ ಜನರು ಬದುಕಬೇಕೆಂಬ ಆಶಯ ಸ್ವಾತಂತ್ರ್ಯ ಹೋರಾಟದ್ದಾಗಿತ್ತು. ಅದರೆ, ಇಂದಿನ ಸರ್ಕಾರ ಸ್ವಾತಂತ್ರ್ಯದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ"

ಕೇಂದ್ರವು ಮಂದಿರದ ಹೆಸರಲ್ಲಿ ಚುನಾವಣೆ ಎದುರಿಸಲು ಸಜ್ಜಾದಂತಿದೆ. ಮಂದಿರ ಕಟ್ಟುವುದರಿಂದ ರೈತರ, ಬಡವರ ಸಮಸ್ಯೆಗಳ ಪರಿಹಾರ ಆಗುವುದಾದರೆ ಜಿಲ್ಲೆಗೊಂದು, ತಾಲೂಕಿಗೊಂದು ಮಂದಿರ ಕಟ್ಟಬಹುದು. ಆದರೆ, ಮಂದಿರ ಕಟ್ಟುವುದರಿಂದ ಸಂಪತ್ತು ಸೃಷ್ಟಿಯಾಗುವುದಿಲ್ಲ. ದೇಶದ ಜನರ ದುಡಿಮೆಯಿಂದ ಸಂಪತ್ತು ಬರುತ್ತದೆ. "ರಾಮಮಂದಿರದ ಹೆಸರಲ್ಲಿ ಮತ್ತೆ ಅಧಿಕಾರಕ್ಕೆ ಬರಬಹುದೆಂದು ಬಿಜೆಪಿ ಭಾವಿಸಿದೆ. ಅದರೆ, ಬಿಜೆಪಿಗೆ ರಾಜ್ಯದಲ್ಲಾದಂತೆ ಕೇಂದ್ರದಲ್ಲೂ ಆಗಲಿದೆ.

ಬೆಂಗಳೂರಿನ ಕಂಬಳ ಮಿಳಿತಗೊಂಡಿರುವ... ಪುಟ 16 ರಿಂದ

ಮಕ್ಕಳನ್ನು ಲೈಂಗಿಕವಾಗಿ ಶೋಷಿಸಲಾಗುತ್ತಿತ್ತು. ಇದಕ್ಕೆ ಸಾಂಸ್ಕೃತಿಕ, ಧಾರ್ಮಿಕ ಆಯಾಮವನ್ನೂ ನೀಡಲಾಗಿತ್ತು. ತುಳುನಾಡಿನ ಜಾತಿ ವ್ಯವಸ್ಥೆಯಲ್ಲಿ ಬಹಿರಂಗವಾಗಿ ನಡೆಯುತ್ತಿದ್ದ ಈ ಲೈಂಗಿಕ ಶೋಷಣೆ ಈಗ ಸಂವಿಧಾನದ ಭಯದಿಂದ ನಿಂತಿದೆಯಷ್ಟೆ.

ಹಾಗೆ ನೋಡಿದರೆ, ಕಂಬಳ ಪ್ರಾರಂಭವಾಗಿದ್ದೇ ಒಕ್ಕಲು ರೈತರನ್ನು ಸುಲಿಯಲು ಮತ್ತು ಕೆಳ ಸಮುದಾಯಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಲುವಾಗಿ! ತುಳುನಾಡಿನಲ್ಲಿ ಜಾತಿ ಶ್ರೇಣೀಕರಣದ ಉಳಿವು ಮತ್ತು ಮುಂದುವರಿಕೆಯಲ್ಲಿ ಕಂಬಳದ ಪಾತ್ರ ಗಣನೀಯವಾಗಿದೆ.

ಜಾತಿ ಶ್ರೇಣೀಕರಣದ...

ಕಂಬಳ ಜಾತಿ ಶ್ರೇಣೀಕರಣದ ಅಸಮಾನ ಮತ್ತು ಶೋಷಕ ಸ್ವರೂಪದೊಂದಿಗೆ ಅವಿಭಾಜ್ಯ ಸಂಬಂಧವನ್ನು ಹೊಂದಿದೆ. ಹಲವು ಅಮಾನವವೀಯ ಅಸ್ಪೃಶ್ಯತಾ ಆಚರಣೆಗಳು ಮತ್ತು ಅಜಲು ಪದ್ಧತಿ ಈ ಕಂಬಳ ಕ್ರೀಡೆಯ ಮೂಲಕ ತೀರಾ ಇತ್ತೀಚಿನವರೆಗೂ ನಡೆಯುತ್ತಿದ್ದವು. ಕಂಬಳ ಅನ್ನೋದು ಹಲವು ಊರಿನ ಗುತ್ತು ಮನೆತನಗಳ ನಡುವೆ ನಡೆಯುತ್ತಿದ್ದ ಪ್ರತಿಷ್ಠಿತ ಸ್ಪರ್ಧೆಯಾಗಿದ್ದರಿಂದ ಪ್ರತಿಸ್ಪರ್ಧಿ ಗುತ್ತಿನ ಜನರು ಬಂದು ಕಂಬಳದ ಗದ್ದೆಯನ್ನು ಹಾಳು ಮಾಡಬಹುದು ಎಂಬ ಕಾರಣಕ್ಕಾಗಿ, ಕೊರಗ ಎಂಬ ಅತಿ ಶೋಷಿತ ಸಮುದಾಯ 'ಪನಿ ಕುಲ್ಲುನು' ಎಂಬ ಸಂಪ್ರದಾಯವನ್ನು ಆಚರಿಸಬೇಕಿತ್ತು.

'ಪನಿ ಕುಲ್ಲುನು' ಅಂದರೆ ಕೊರಗರು ತಮ್ಮ ಹೆಂಡತಿ ಮಕ್ಕಳ ಜೊತೆ ಇಡೀ ರಾತ್ರಿ ಕಂಬಳ ಗದ್ದೆಯನ್ನು ಕಾಯಬೇಕು. ಇದಕ್ಕಿಂತಲೂ ಅಮಾನುಷವೆಂದರೆ, ಕಂಬಳ ನಡೆಯುವ ಒಂದೆರಡು ಗಂಟೆಗಳ ಮೊದಲು ಕಂಬಳ ಗದ್ದೆಯಲ್ಲಿ ಕೊರಗರು ಓಡಬೇಕು. ಕಂಬಳ ಗದ್ದೆಯಲ್ಲಿ ಗುತ್ತಿನ ಮನೆಯ ವೈರಿಗಳು ಗಾಜು, ಕಲ್ಲುಗಳನ್ನು ಹಾಕಿರುವ ಸಾಧ್ಯತೆ ಹಿನ್ನಲೆಯಲ್ಲಿ ಕೊರಗರು ಓಡಿ ಪರಿಶೀಲನೆಯನ್ನು ಮಾಡಬೇಕು. ಗುತ್ತಿನ ಕೋಣಗಳಿಗೆ ಗಾಜು ಚುಚ್ಚುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗುತ್ತದೆ. ಜಮೀನ್ದಾರಿ ಕುಟುಂಬಗಳ ಮಧ್ಯೆ ನಡೆಯುವ ಪಕ್ಕಾ ಫ್ಯೂಡಲ್ ಕ್ರೀಡೆಯಾಗಿರುವ ಕಂಬಳ ಈಗ ಸ್ವರೂಪದಲ್ಲಿ ಸ್ವಲ್ಪ ಮಾರ್ಪಾಡುಗಳನ್ನು ಹೊಂದಿದೆಯಾದರೂ ಆಳದಲ್ಲಿ ಫ್ಯೂಡಲ್ ವ್ಯವಸ್ಥೆಯನ್ನು ಜಾರಿಯಲ್ಲಿಡುವ ತಂತ್ರವೇ ಆಗಿದೆ.

ಫ್ಯೂಡಲ್ ವರ್ಗದ ಮೋಜಿನ ಆಟ

ಕಂಬಳ ಎಂಬುದು ಕೇವಲ ಕ್ರೀಡೆಯಾಗಿ ಪ್ರಾರಂಭವೂ ಆಗಿಲ್ಲ, ಮುಂದುವರಿಕೆಯೂ ಅಲ್ಲ. ಕಂಬಳ ಎಂಬುದು ಜಮೀನ್ದಾರಿಗಳ ಐಶಾರಾಮಿ ಬದುಕಿನ ಪಳಿಯುಳಿಕೆಯಾಗಿ ಮುಂದುವರೆಯುತ್ತಿದೆ. ಕಂಬಳ ಎಂಬುದು ಬಹುಜನರ ಸಂಸ್ಕೃತಿಯೂ ಅಲ್ಲ, ಜನಪದ ಕ್ರೀಡೆಯೂ ಅಲ್ಲ. ಕಂಬಳ ಎಂಬುದು ಪಕ್ಕಾ ಬಹುಜನ ವಿರೋಧಿ ಫ್ಯೂಡಲ್ ವರ್ಗದ ಮೋಜಿನ ಆಟವಷ್ಟೆ ಎನ್ನುತ್ತಾರೆ ನವೀನ್ ಸೂರಿಂಜೆ ಅವರು.

ಭಾರತದಲ್ಲಿ ವ್ಯಾಪಕ ಬಡತನ: ಬಿಹಾರದ ಜಾತಿಗಣತಿ ಕಣ್ಣು ತೆರೆಸಬೇಕು.... ಪುಟ 13 ರಿಂದ

ಬಡವರನ್ನು ಹೊಂದಿರುತ್ತದೆ. ಆದ್ದರಿಂದ, ಪ್ರತಿಯೊಂದು ಉತ್ಪಾದನಾ ವಿಧಾನವೂ ಬಡತನವನ್ನು ಗುರುತಿಸಲು ತನ್ನದೇ ಆದ ಮಾನದಂಡಗಳನ್ನು ಹೊಂದಿರಬೇಕಾಗುತ್ತದೆ. ಉದಾಹರಣೆಗೆ, ಪಾಳೆಗಾರಿ ಪದ್ಧತಿಯ ಅಡಿಯಲ್ಲಿ ಬಡತನವು, ಮಕ್ಕಳು ಹಸಿವಿನಿಂದ ಬಳಲುವ, ಅಶಿಕ್ಷಿತರಾಗಿ ಉಳಿಯುವ ಮತ್ತು ಶ್ರಮಿಕ ಪಡೆಗೆ ಸೇರಬೇಕಾದ ಅನಿವಾರ್ಯತೆಯ ಮೂಲಕ ಅವರನ್ನು ಒಂದು ತೀವ್ರ ಶೋಷಣೆಗೆ ಒಳಪಡಿಸುವ ನಿರ್ದಿಷ್ಟ ರೂಪವನ್ನು ತಳೆಯುತ್ತದೆ. ಮತ್ತೊಂದೆಡೆ, ಬಂಡವಾಳಶಾಹಿಯ ಅಡಿಯಲ್ಲಿ ಬಡತನವು, ವಿಶೇಷವಾಗಿ ಮುಂದುವರಿದ ಬಂಡವಾಳಶಾಹಿಯ ಅಡಿಯಲ್ಲಿ, ಕೆಲಸ ಮಾಡಲೇಬೇಕಾದ ಒತ್ತಾಯಕ್ಕೆ ಮಕ್ಕಳನ್ನು ಒಳಪಡಿಸುವ ನಿರ್ದಿಷ್ಟ ರೂಪವನ್ನು ತಳೆಯುವುದಿಲ್ಲ. ಆದರೆ, ಮಕ್ಕಳು ನಿರ್ಲಕ್ಷ್ಯಕ್ಕೊಳಗಾದ ಶಾಲೆಗಳು, ಕಳಪೆ ಆರೋಗ್ಯ ಸೌಲಭ್ಯಗಳು, ಓಬಿರಾಯನ ಕಾಲದ ಸಲಕರಣೆಗಳು, ಜೀರ್ಣಾವಸ್ಥೆಯಲ್ಲಿರುವ ಪೀಠೋಪಕರಣಗಳು, ಮತ್ತು ಕೊಳಕು ಪರಿಸರದ ವಾಸದೊಂದಿಗೆ ಬದುಕುತ್ತಾರೆ ಮತ್ತು ಅಪರಾಧಗಳ ಲೋಕಕ್ಕೆ ತಳ್ಳಲ್ಪಡುತ್ತಾರೆ. ಮುಂದುವರೆದ ಬಂಡಾಳಶಾಹಿಯಲ್ಲಿ ಬಡತನ ಮತ್ತು ಅಪರಾಧಗಳ ನಡುವೆ ಒಂದು ಬಲವಾದ ನಂಟು ಇದೆ. ಅದರ ಬಗ್ಗೆ ಒಂದು ಕಾರಣವನ್ನು ಹೇಳಬಹುದಾದರೆ, ಬಡತನದ ಬಗ್ಗೆ ಕೈಗೊಳ್ಳುವ ಸಮೀಕ್ಷೆಗಳು ಜೈಲು ಕೈದಿಗಳನ್ನು ಒಳಗೊಳ್ಳದ ಕಾರಣದಿಂದಾಗಿ ಅಪೂರ್ಣವಾಗುತ್ತವೆ.

ಮಕ್ಕಳು ಶಾಲೆಗೆ ಹೋಗುತ್ತಾರೋ ಇಲ್ಲವೋ ಎಂಬುದನ್ನು ಆಧರಿಸಿ ಬಡತನವನ್ನು ವ್ಯಾಖ್ಯಾನಿಸುವುದು ಒಂದು ಪಾಳೇಗಾರಿ ಸಮಾಜದಲ್ಲಿ ಅರ್ಥಪೂರ್ಣವಾಗಿರುತ್ತದೆ. ಆದರೆ, ಮಕ್ಕಳು ಶಾಲೆಗಳಿಗೆ ಹೋಗುತ್ತಿರುವ ಮುಂದುವರಿದ ಬಂಡವಾಳಶಾಹಿ ಸಮಾಜದಲ್ಲಿ ಅಲ್ಲ. ಅಲ್ಲಿ ಬಡ ಮಕ್ಕಳು ಹೋಗುವ ಶಾಲೆಗಳ ಗುಣಮಟ್ಟವು ಅತ್ಯಂತ ಕಳಪೆಯದ್ದೇ ಆಗಿರುತ್ತದೆ. ಹಾಗಾಗಿ, ಬಡತನವನ್ನು ಗುರುತಿಸುವ ಮಾನದಂಡಗಳು ಒಂದು ಉತ್ಪಾದನಾ ವಿಧಾನದಿಂದ ಇನ್ನೊಂದಕ್ಕೆ ಭಿನ್ನವಾಗಿರಬೇಕಾಗುತ್ತದೆ. ಮತ್ತು, ಅನೇಕ ರೀತಿಯ ಉತ್ಪಾದನಾ ವಿಧಾನಗಳ ಮಿಶ್ರಣವನ್ನು ಹೊಂದಿರುವ ನಮ್ಮಂತಹ ಸಮಾಜದಲ್ಲಿ ಎಲ್ಲ ರೀತಿಯ ಬಡತನವನ್ನು ಅಳೆಯುವ ಒಂದು ಮಾನದಂಡವನ್ನು ಹೊಂದಬೇಕು ಎಂದಾದರೆ, ಅದು ಆದಾಯದ ಮಟ್ಟವೇ.

ಅಳತೆ ಮಾಡಲು ಆದಾಯವು ಒಂದು ಸುಲಭದ ಪರಿಕಲ್ಪನೆಯಲ್ಲ. ಹಾಗಾಗಿ, ಸುಲಭವಾಗಿ ಅಳೆಯಬಹುದಾದ ಒಂದು ಬದಲಿಯನ್ನು ಕಂಡುಹಿಡಿಯಬೇಕಾಗುತ್ತದೆ. ಪೌಷ್ಟಿಕತೆಯ ಮಟ್ಟವು, ಅಂತಹ ಒಂದು ಬದಲಿ ಅಳತೆಯಾಗಿದೆ. ಸ್ವತಃ ಅದು ಮುಖ್ಯವೂ ಹೌದು. ನಾವು ಬಡತನವನ್ನು ಪಾಳೇಗಾರಿ ವ್ಯವಸ್ಥೆಯೊಳಗೆ ನೋಡಲಿ ಅಥವಾ ಬಡತನವನ್ನು ಮುಂದುವರಿದ ಬಂಡವಾಳಶಾಹಿ ವ್ಯವಸ್ಥೆಯೊಳಗೆ ನೋಡಲಿ, ಬಡವರು ಯಾವಾಗಲೂ ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನೇ ಕಾಣುತ್ತೇವೆ. ಒಂದು ವ್ಯವಸ್ಥೆಯಲ್ಲಿ ಅವರು ಚಿಕ್ಕ ವಯಸ್ಸಿನಲ್ಲಿಯೇ ಶ್ರಮಿಕ ಪಡೆಗೆ ಸೇರುತ್ತಿರಬಹುದು, ಮತ್ತೊಂದರಲ್ಲಿ ಅವರು ಕಳಪೆ ಗುಣಮಟ್ಟದ ಶಾಲೆಗಳಿಗೆ ಹೋಗುತ್ತಿರಬಹುದು. ಬಹು ಆಯಾಮದ ಬಡತನ ಸೂಚ್ಯಂಕದ ಸಮಸ್ಯೆಯೆಂದರೆ, ಪೌಷ್ಟಿಕತೆಯ ಬಗ್ಗೆ ಅದು ನೀಡುವ ಪ್ರಾಮುಖ್ಯತೆಯು ಬಹಳ ಕಡಿಮೆಯೇ (ಮತ್ತು, ಶಾರೀರಿಕ ಎತ್ತರ–ತೂಕ ಅನುಪಾತ ಸೂಚ್ಯಂಕದಂತಹ ಕಳಪೆ ಅಂದಾಜನ್ನು ಪರಿಗಣಿಸುತ್ತದೆ). ಮತ್ತು, ಅದೇ ಸಮಯದಲ್ಲಿ ಬಡತನ ನಿವಾರಣೆಯನ್ನು ಸೂಚಿಸುವ ಶಾಲಾ ಹಾಜರಾತಿ ಮತ್ತು ಸಲಕರಣೆಗಳ ಬಳಕೆ, ಇಂಥಹ ಕೆಲವು ಅಂಶಗಳನ್ನು ಪರಿಗಣಿಸುತ್ತದೆ. ಆದರೆ, ಈ ಅಂಶಗಳು ಪಾಳೇಗಾರಿ ಬಡತನದಿಂದ ಬಂಡವಾಳಶಾಹಿ ಬಡತನಕ್ಕೆ ಹೊಂದಿದ ಬದಲಾವಣೆಯನ್ನು ಮಾತ್ರ ಸೂಚಿಸುತ್ತವೆ.

ಇಂಥಹ ಒಂದು ಅನುಮಾನಾಸ್ಪದವಾದ ಬಹು ಆಯಾಮ ಬಡತನದ ಪರಿಕಲ್ಪನೆಯನ್ನು ಆಧರಿಸಿ ಬಿಜೆಪಿ ಸರ್ಕಾರವು, ಜಿಡಿಪಿ ಬೆಳವಣಿಗೆಯು ಬಡತನವನ್ನು ತಂತಾನೇ ನಿರ್ಮೂಲನೆ ಮಾಡುತ್ತದೆ ಎಂದು ಹೇಳುತ್ತಿದೆ. ಇಂಥಹ ಸರಕಾರೀ ಪ್ರಚಾರದಿಂದ ಆಕರ್ಷಿತರಾದ ಎಲ್ಲರ ಕಣ್ಣನ್ನೂ ಬಿಹಾರ ಜಾತಿ ಜನಗಣತಿಯ ಫಲಿತಾಂಶಗಳು ತೆರೆಸಬೇಕು.

ಉತ್ತರಾಖಂಡದ ಸುರಂಗ ಅಪಘಾತ: ಸುರಕ್ಷಿತವಾಗಿ ಹೊರಬಂದ 41 ಕಾರ್ಮಿಕರು

ಮಾನವ ಶ್ರಮದ ಶ್ರೇಷ್ಠತೆಯನ್ನು ಜಗತ್ತಿಗೆ ಮತ್ತೊಮ್ಮೆ ತೋರಿಸಿದ ಗಣಿ ಕಾರ್ಮಿಕರು

ಉತ್ತರಾಖಂಡದ ಸುರಂಗದಲ್ಲಿ ಸಿಲುಕಿದ್ದ 41 ಕೂಲಿ ಕಾರ್ಮಿಕರು ಸುರಕ್ಷಿತವಾಗಿ ಹೊರಗೆ ಬಂದಿದ್ದು, ಇಡೀ ದೇಶ ಸಂತಸದಿಂದ ನಿಟ್ಟುಸಿರು ಬಿಟ್ಟಿದೆ. ಚಾರ್ಧಾಮ್ ಯಾತ್ರಾಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಭಾಗವಾಗಿ, ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾದಲ್ಲಿ ಬೃಹತ್ ಸುರಂಗ ಕೊರೆಯುವ ವೇಳೆ ನವೆಂಬರ್ 12ರಂದು ಭೂಕುಸಿತ ಸಂಭವಿಸಿ, 41 ಕಾರ್ಮಿಕರು ಒಳಗೆ ಸಿಲುಕಿಕೊಂಡಿದ್ದರು. ಈ ಘಟನೆ ದೇಶವನ್ನೇ ಬೆಚ್ಚಿಬೀಳಿಸಿತ್ತು. ಕಾರ್ಮಿಕರು 17 ದಿನಗಳ ಕಾಲ ಸುರಂಗದಲ್ಲಿ ದಿಕ್ಕು ತೋಚದ ಸ್ಥಿತಿಯಲ್ಲಿ ಕಳೆಯಬೇಕಾಗಿ ಬಂದಿದ್ದು ಮತ್ತಷ್ಟು ಆತಂಕಕ್ಕೆ ಕಾರಣವಾಗಿತ್ತು. ಸುರಂಗದಿಂದ ಯಾವಾಗ ಹೊರಗೆ ಬರುತ್ತಾರೆ ಎಂದು ಸುರಂಗದ ಹೊರಭಾಗದಲ್ಲಿ ಕಾರ್ಮಿಕರ ಕುಟುಂಬಗಳು ಹಗಲು ರಾತ್ರಿ ಆತಂಕದಿಂದ ಕಾಯುತ್ತಿದ್ದರು. ಕೂಲಿ ಕಾರ್ಮಿಕರ ಕುಟುಂಬಗಳ ಸಂಕಷ್ಟ ಹೇಳತೀರದಾಗಿತ್ತು. ಮೇಲಾಗಿ ಎಲ್ಲ ಕಾರ್ಮಿಕರೂ ದುಡಿಮೆಗಾಗಿ ಹೊಟ್ಟೆ ಹೊರೆಯುತ್ತಾ ರಾಜ್ಯಗಳನ್ನು ದಾಟಿ ಬಂದ ವಲಸೆ ಕಾರ್ಮಿಕರು. ಅಂತಹವರ ಯೋಗಕ್ಷೇಮದ ಮಾಹಿತಿಯು ಕುಟುಂಬಗಳಿಗೆ ಬೇಗನೆ ತಲುಪುವುದಿಲ್ಲ. ಅಂತಹ ಉದ್ವಿಗ್ನತೆಯ ನಡುವೆ, ಪರಿಹಾರ ಕಾರ್ಯಗಳು ಹಲವು ದಿನಗಳ ಕಾಲ ನಡೆದವು. ಕೊನೆಗೂ ನವೆಂಬರ್ 28ರಂದು ಸಂಜೆ ಸುರಂಗದಲ್ಲಿ ಸಿಲುಕಿದ್ದವರೆಲ್ಲ ಸುರಕ್ಷಿತವಾಗಿ ಹೊರ ಬಂದಿದ್ದು, ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಸಾರ್ವಜನಿಕರು, ವಿಶೇಷವಾಗಿ ಕಾರ್ಮಿಕರು, ದಣಿವರಿಯದೆ ಪರಿಹಾರ ಕಾರ್ಯಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರನ್ನು ಶ್ಲಾಘಿಸಿದರು. ಸ್ಥೈರ್ಯ ಕಳೆದುಕೊಳ್ಳದೆ ಬದುಕಿ ಬಂದ ಕಾರ್ಮಿಕರ ಧೈರ್ಯ ನಿಜಕ್ಕೂ ಶ್ಲಾಘನೀಯ.



ತಕ್ಷಣ ಕಾರ್ಯಾಚರಣೆ ಕೈಗೊಳ್ಳದ ಡಬಲ್ ಇಂಜಿನ್ ಸರ್ಕಾರ

ಅವಘಡ ಸಂಭವಿಸಿದ ಮೊದಲೆರಡು ದಿನಗಳಲ್ಲಿ ಹೆಸರಿಗಷ್ಟೇ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಯಿತು. ಮೊದಲ ವಾರ ಆಡಳಿತ ವ್ಯವಸ್ಥೆ ಏನು ಮಾಡಬೇಕು, ಹೇಗೆ ಮಾಡಬೇಕು ಎಂಬ ಗೊಂದಲದಲ್ಲಿ ಮುಳುಗಿತ್ತು. ಕಾರ್ಮಿಕರು ಸುರಂಗದಲ್ಲಿ ಸಿಲುಕಿದ ತಕ್ಷಣ ಪರಿಸ್ಥಿತಿಯ ತೀವ್ರತೆಯನ್ನು ನಿರ್ಣಯಿಸಲು ಮತ್ತು ತಕ್ಷಣ ರಕ್ಷಣಾ ಕಾರ್ಯಾಚರಣೆಯನ್ನು ಕೈಗೊಳ್ಳುವುದನ್ನು ಉತ್ತರಾಖಂಡದ ಬಿಜೆಪಿ ಸರ್ಕಾರ ನಿರ್ಲಕ್ಷಿಸಿತು. ಡಬಲ್ ಇಂಜಿನ್ ಸರ್ಕಾರದ ಮಾತನಾಡುವ ಪ್ರಧಾನಿ ಮೋದಿ ತಮ್ಮ ಪಕ್ಷದ ಆಡಳಿತದ ಉತ್ತರಾಖಂಡದಲ್ಲಿ ಕೂಲಿಕಾರ್ಮಿಕರು ಅಪಘಾತಕ್ಕೀಡಾದರೆ, ಆ ಕಡೆ ಗಮನ ಕೊಡಲಿಲ್ಲ. ಮುಖ್ಯವಾಹಿನಿಯ ಮಾಧ್ಯಮಗಳು ಅಪಾಯವನ್ನು ನಿರ್ಲಕ್ಷಿಸಿದವು. ದಿನಗಳು ಕಳೆದರೂ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಕಾಣದೆ ಸಿಪಿಎಂ, ಎಡಪಕ್ಷಗಳು, ಕಾರ್ಮಿಕ ಸಂಘಟನೆಗಳು ಮತ್ತು ಪ್ರತಿಪಕ್ಷಗಳು ಕೇಂದ್ರ ಮತ್ತು ಉತ್ತರಾಖಂಡ ಸರ್ಕಾರಗಳ ನಿರ್ಲಕ್ಷ್ಯದ ವಿರುದ್ಧ ಧ್ವನಿ ಎತ್ತಿದವು. ನಂತರ ಅಂತರರಾಷ್ಟ್ರೀಯ ಗುಣಮಟ್ಟದ ಭಾರೀ ಯಂತ್ರೋಪಕರಣಗಳನ್ನು ತಂದು ಕಾರ್ಯಾಚರಣೆಗೆ ಇಳಿಯಿತು.

ಕಾರ್ಮಿಕರ ಜೀವಗಳನ್ನು ರಕ್ಷಿಸಿದ ಕಲ್ಲಿದ್ದಲು ಗಣಿಗಾರರು

ಸುರಂಗದಲ್ಲಿ ಸಿಲುಕಿಕೊಂಡ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ವಿಪತ್ತು ನಿರ್ವಹಣೆ, ಒಎನ್‌ಜಿಸಿ, ಮಿಲಿಟರಿ ಇಂಜಿನಿಯರ್‌ಗಳು, ಏಳು ಏಜೆನ್ಸಿಗಳು ಪೂರ್ಣಪ್ರಮಾಣದಲ್ಲಿ ಕ್ಷೇತ್ರಕ್ಕೆ ಪ್ರವೇಶಿಸಿದವು. ಇವರು ಅಂತರರಾಷ್ಟ್ರೀಯ ಗುಣಮಟ್ಟದ ಭಾರೀ ಯಂತ್ರೋಪಕರಣಗಳನ್ನು ತಂದು ಕಾರ್ಯಾಚರಣೆಗೆ ಇಳಿದರು. ಆದರೆ, ಈ ಭಾರೀ ಯಂತ್ರೋಪಕರಣಗಳಿಂದ ಕಾರ್ಮಿಕರ ರಕ್ಷಣೆ ಸಾಧ್ಯವಾಗಲಿಲ್ಲ. ಅಂತಿಮವಾಗಿ ಒಂದು ಡಜನ್ ಗೂ ಹೆಚ್ಚು ನುರಿತ ಕಲ್ಲಿದ್ದಲು ಗಣಿಗಾರರು ಕುಶಲವಾಗಿ ಸಣ್ಣ ಉಪಕರಣಗಳೊಂದಿಗೆ ರಂಧ್ರ ಕೊರೆಯಲು ಮುಂದಾದರು. ಅಂತಿಮವಾಗಿ ಇದೇ ಗಣಿ ಕಾರ್ಮಿಕರು ಸಿಕ್ಕಿಬಿದ್ದ ಕಾರ್ಮಿಕರನ್ನು ಹೊರಗೆ ತಂದರು. ಮಾನವ ಶ್ರಮದ ಶ್ರೇಷ್ಠತೆಯನ್ನು ಜಗತ್ತಿಗೆ ಮತ್ತೊಮ್ಮೆ ತೋರಿಸಿದರು.

ಕಾರ್ಮಿಕರು ಸುರಂಗದಲ್ಲಿ ಸಿಲುಕಿದ್ದಾಗ ಪ್ರಧಾನಿ ಮೋದಿಯವರ ಹೆಚ್ಚಿನ ಗಮನ ಚುನಾವಣಾ ಪ್ರಚಾರ ಮತ್ತು ಕ್ರಿಕೆಟ್ ಮೈದಾನದ ಕಡೆಗಿತ್ತು. ಆದರೆ, ನುರಿತ ಗಣಿ ಕಾರ್ಮಿಕರ ಶ್ರಮ ಮತ್ತು ಕೌಶಲ್ಯದಿಂದ 41 ಕಾರ್ಮಿಕರು ಸುರಕ್ಷಿತವಾಗಿ ಹೊರಬಂದಾಗ ಮೋದಿ, ಹಾಗೂ ಇತರೆ ಬಿಜೆಪಿ ನಾಯಕರು ಕಾರ್ಮಿಕರ ರಕ್ಷಣೆಯ ಕ್ರೆಡಿಟ್ ತಮ್ಮದೆಂದು ಪ್ರಚಾರ ಮಾಡತೊಡಗಿದ್ದಾರೆ.

ಕಾರ್ಪೊರೇಟ್ ವ್ಯವಹಾರದ ಲಾಭಕ್ಕಾಗಿ

ಉತ್ತರಾಖಂಡದಲ್ಲಿ ಕೈಗೊಂಡ ಸಂಪೂರ್ಣ ಚಾರ್ಧಾಮ್ ರಾಷ್ಟ್ರೀಯ ಹೆದ್ದಾರಿ ಯೋಜನೆಯು ಹಿಮಾಲಯದ ಇಳಿಜಾರಿನಲ್ಲಿದೆ. ಈ ಪ್ರದೇಶವು ತೀವ್ರ ಭೂಕಂಪದ ವಲಯದಲ್ಲಿದೆ. ಮೇಲ್ಮೈ ಪದರಗಳು ಮತ್ತು ಮಣ್ಣು ದುರ್ಬಲವಾಗಿರುತ್ತದೆ. ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯಿಂದಾಗಿ ಹಿಮಾಲಯದಲ್ಲಿ ಹಿಮ ಕರಗುತ್ತಿದೆ. ಈ ಪರಿಣಾಮಗಳಿಂದಾಗಿ ಅಕಾಲಿಕ ಮಳೆ ಮತ್ತು ಪ್ರವಾಹಗಳು ಪ್ರವಾಹಕ್ಕೆ ಸಿಲುಕುತ್ತಿವೆ. ಚಾರ್‌ಧಾಮ್‌ನ ಹೆಬ್ಬಾಗಿಲು ಜೋಶಿಮಠ ಎಂಬ ಗ್ರಾಮವು ಕುಸಿಯುತ್ತಿದೆ ಎಂಬ ಆತಂಕವಿದೆ. ಕಾರ್ಪೊರೇಟ್ ಹಾಕ್‌ಗಳು ಮತ್ತು ಅದಕ್ಕೆ ಸಹಕರಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೈಸರ್ಗಿಕ ಸಂಪನ್ಮೂಲಗಳ ಶೋಷಣೆಯಿಂದ ಇದೆಲ್ಲವೂ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಸಿಲ್ಕ್ಯಾರಾ ಸುರಂಗ ಮಾರ್ಗದ ರಚನೆಯನ್ನು ನೋಡಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರವಾಸೋದ್ಯಮ ಮತ್ತು ಕಾರ್ಪೊರೇಟ್ ವ್ಯವಹಾರದ ಲಾಭಕ್ಕಾಗಿ ಅತ್ಯಂತ ಪರಿಸರ ಸೂಕ್ಷ್ಮ ಉತ್ತರಾಖಂಡದಲ್ಲಿ ಇಂತಹ ಬೃಹತ್ ಯೋಜನೆಗಳಿಗೆ ಅನುಮತಿ ನೀಡುವುದು ದುಷ್ಪತನವಾಗಿದೆ. ಸೂಕ್ತ ಸುರಕ್ಷತಾ ಕ್ರಮಗಳಿಲ್ಲದೆ, ಪರಿಸರದ ಮೇಲಾಗುವ ಪರಿಣಾಮದ ಬಗ್ಗೆ ಸೂಕ್ತ ಮೌಲ್ಯಮಾಪನ ಮಾಡದೆ ಸುರಂಗ ನಿರ್ಮಿಸಿರುವ ನಿರ್ಮಾಣ ಸಂಸ್ಥೆಯ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಅಂತಹ ರಚನೆಗಳನ್ನು ಅನುಮತಿಸಲು ಡಬಲ್ ಎಂಜಿನ್ ಸರ್ಕಾರವು ದೂಷಿಸುತ್ತದೆ. ಈ ಸತ್ಯದಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಮೋದಿ ಮತ್ತು ಬಿಜೆಪಿಯ ಪ್ರಚಾರದ ಧಾವಂತ. ಈ ಸತ್ಯವನ್ನು ಜನತೆ ಅರ್ಥಮಾಡಿಕೊಳ್ಳಬೇಕಿದೆ.

ರಕ್ಷಣಾ ಕಾರ್ಯದಲ್ಲಿ ಹಿಂದೂ, ಮುಸ್ಲಿಂ ಕಾರ್ಮಿಕರು

ಸುರಂಗದಲ್ಲಿ ಸಿಲುಕಿಕೊಂಡ 41 ಕಾರ್ಮಿಕರನ್ನು ರಕ್ಷಿಸಲು ಶ್ರಮವಹಿಸಿದರೆಲ್ಲರೂ 20 ರಿಂದ 45 ವರ್ಷ ವಯಸ್ಸಿನವರು. ಇವರಲ್ಲಿ ಹಿಂದೂಗಳು ಮತ್ತು ಮುಸ್ಲಿಮರಿದ್ದಾರೆ. ಇವರ ಹೆಸರುಗಳು ಹೀಗಿವೆ: ಹಸನ್, ಮುನ್ನಾ ಖುರೇಷಿ, ನಸೀಮ್ ಮಲಿಕ್, ಮೋನು ಕುಮಾರ್, ಸೌರಭ್, ಜತಿನ್ ಕುಮಾರ್, ಅಂಕುರ್, ನಾಸಿರ್ ಖಾನ್, ದೇವೇಂದ್ರ, ಫಿರೋಜ್ ಖುರೇಷಿ, ರಶೀದ್ ಅನ್ಸಾರಿ ಮತ್ತು ಇರ್ಷಾದ್ ಅನ್ಸಾರಿ. ಸುರಂಗದಲ್ಲಿ ಗುತ್ತಿಗೆ ಕೂಲಿಕಾರರಾಗಿ ದುಡಿಯುತ್ತಿರುವ ಮತ್ತು ಅಪಾಯದಲ್ಲಿ ಸಿಲುಕಿಕೊಂಡಿದ್ದವರಲ್ಲಿಯೂ ಹಿಂದೂ, ಮುಸ್ಲೀಮರಿದ್ದಾರೆ. ಇವರೆಲ್ಲರೂ ಸಾಮರಸ್ಯದಿಂದ ಒಟ್ಟಾಗಿ ದುಡಿಯುತ್ತಾರೆ. ಕಾರ್ಮಿಕರ ನಡುವೆ ಧಾರ್ಮಿಕ ದ್ವೇಷ ಬಿತ್ತುವವರಿಗೆ ಈ ಕಾರ್ಮಿಕರ ಕೋಮು ಸಾಮರಸ್ಯದ ಜೀವನ ಒಂದು ಪಾಠವಾಗಬೇಕು.

ದೆಹಲಿ ಮೂಲದ ರಾಕ್‌ವೆಲ್ ಎಂಟರ್‌ಪ್ರೈಸಸ್ ಮಾಲೀಕ ವಕೀಲ್ ಹಸನ್ ಮಾಧ್ಯಮವೊಂದರ ಜೊತೆ ಮಾತನಾಡುತ್ತಾ ಹೇಳಿದ್ದು ಹೀಗೆ: "ನಮ್ಮ ತಂಡದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಇಬ್ಬರೂ ಇದ್ದಾರೆ ಮತ್ತು ಎರಡೂ ಧರ್ಮಗಳ ಜನರು ಈ 41 ಜೀವಗಳನ್ನು ಉಳಿಸಲು ಶ್ರಮಿಸಿದರು. ಅವರಲ್ಲಿ ಯಾರೂ ಇದನ್ನು ಒಬ್ಬರೇ ಮಾಡಲು ಸಾಧ್ಯವಿಲ್ಲ, ಮತ್ತು ನಾನು ಎಲ್ಲರಿಗೂ ನೀಡಲು ಬಯಸುವ ಸಂದೇಶ ಇದು. ನಾವೆಲ್ಲರೂ ಸಾಮರಸ್ಯದಿಂದ ಬದುಕಬೇಕು ಮತ್ತು ದ್ವೇಷದ ವಿಷವನ್ನು ಹರಡಬಾರದು."

ಅವೈಜ್ಞಾನಿಕ ಎಂದು ನಿಷೇಧಿಸಲ್ಪಟ್ಟ ವಿಧಾನವೇ 41 ಜೀವ ಉಳಿಸಿತು

ಕೈಗಳಿಂದ ಗುದ್ದಲಿ ಬಳಸಿ ಕೊರೆಯುವ ಇಲಿ–ರಂಧ್ರ (**Rat-hole miner**) (ಇಲಿಗಳು ಬಿಲವನ್ನು ತೋಡುವಂತೆ) ಗಣಿಗಾರಿಕೆಯು ಸಣ್ಣ ಹೊಂಡಗಳನ್ನು ಅಗೆಯುವ ಮೂಲಕ ಕಲ್ಲಿದ್ದಲನ್ನು ಹೊರತೆಗೆಯುವ ಒಂದು ವಿಧಾನವಾಗಿದೆ. ಇದು ಅವೈಜ್ಞಾನಿಕ ಎಂದು ಕಲ್ಲಿದ್ದಲು ಹೊರತೆಗೆಯುವ ವಿಧಾನವನ್ನು 2014 ರಲ್ಲಿ ನಿಷೇಧಿಸಲಾಗಿದೆ.

ನವೆಂಬರ್ 28 ರ ಸಂಜೆಯವರೆಗೆ, ಜನರು ಇಲಿ–ರಂಧ್ರ ಗಣಿಗಾರರ ಕೆಲಸಗಳನ್ನು ಕೀಳಾಗಿ ನೋಡುತ್ತಿದ್ದರು. ಆದರೆ ನವೆಂಬರ್ 12 ರಿಂದ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಸುರಂಗದಲ್ಲಿ ಸಿಕ್ಕಿಬಿದ್ದ ಎಲ್ಲಾ 41 ಕಾರ್ಮಿಕರನ್ನು ಸುರಕ್ಷಿತವಾಗಿ ರಕ್ಷಿಸಿದ ಯಶಸ್ವಿ ರಕ್ಷಣಾ ಕಾರ್ಯಾಚರಣೆಯ ನಂತರ ಅವರು ಹೀರೋಗಳಾಗಿ ಹೊರಹೊಮ್ಮಿದರು.

ಫಿರೋಜ್ ಖುರೇಷಿ

ಇವರು 34 ವರ್ಷದ ಇಲಿ–ರಂಧ್ರ ಗಣಿಗಾರ. ಕೊನೆಯ 12 ಮೀಟರ್ ಅವಶೇಷಗಳನ್ನು ತೆಗೆದುಹಾಕಲು ಉತ್ತರಾಖಂಡಕ್ಕೆ ಕರೆತರಲಾದ ಗಣಿಗಾರರಲ್ಲಿ ಒಬ್ಬರು.

"ಸಮಾಜ ನಮ್ಮ ಕೆಲಸಕ್ಕೆ ಹೆಚ್ಚಿನ ಗೌರವ ನೀಡುವುದಿಲ್ಲ. ಎಂಜಿನಿಯರ್‌ಗಳು ಮತ್ತು ಮೇಲ್ವಿಚಾರಕರು ಸೇರಿದಂತೆ ಉನ್ನತ ವೃತ್ತಿಪರರು ನಮ್ಮ ಕೆಲಸವನ್ನು ಮತ್ತು ನಮ್ಮಂತಹ ಕಾರ್ಮಿಕರನ್ನು ಕೀಳಾಗಿ ಕಾಣುತ್ತಾರೆ ಮತ್ತು ನಮಗೆ ಹೆಚ್ಚು ಪ್ರಾಮುಖ್ಯತೆ ಕೊಡುವುದಿಲ್ಲ. ಕಾರ್ಮಿಕರು ಕೆಲಸ ಮಾಡದಿದ್ದರೆ, ಯಾವುದೇ ಕೆಲಸವನ್ನು ಪೂರ್ಣಗೊಳಿಸಲಾಗುವುದಿಲ್ಲ" ಎಂದು ಉತ್ತರ ಪ್ರದೇಶದ ಕಾಸ್ಗಂಜ್ ನಿವಾಸಿ ಖುರೇಷಿ ಹೇಳಿದರು.

ಕಳೆದ 10 ವರ್ಷಗಳಿಂದ ಖುರೇಷಿ ಇದೇ ಕೆಲಸವನ್ನು ಮಾಡುತ್ತಿದ್ದಾರೆ. "ನಮ್ಮ ಕೆಲಸವನ್ನು ಜ್ಯಾಕ್ ಪುಶಿಂಗ್ ಅಥವಾ ಚುಹಾ (ಇಲಿ) ತಳ್ಳುವುದು ಎಂದು ಕರೆಯಲಾಗುತ್ತದೆ. ರೈಲ್ವೆಗಳು, ರಸ್ತೆ ದಾಟುವಿಕೆಗಳು ಮತ್ತು ಕಿರಿದಾದ ಲೇನ್‌ಗಳಂತಹ ಯಂತ್ರಗಳನ್ನು ಬಳಸಲಾಗದ ಭೂಗತ ಒಳಚರಂಡಿ ಮತ್ತು ನೀರಿನ ಪೈಪ್‌ಲೈನ್‌ಗಳನ್ನು ಹಾಕುವುದು ನಮ್ಮ ಕೆಲಸವಾಗಿದೆ. ಅಗೆಯಲು ಗುದ್ದಲಿ, ಅಗೆದ ಮಣ್ಣನ್ನು ಇನ್ನೊಂದು ಬದಿಗೆ ಕೊಂಡೊಯ್ಯಲು ಟ್ರಾಲಿ ಮುಂತಾದ ಕೈಯಲ್ಲಿ ಹಿಡಿಯುವ ಉಪಕರಣಗಳನ್ನು ಬಳಸುತ್ತೇವೆ. ಯಂತ್ರಗಳು ಕೆಲಸ ಮಾಡದಿದ್ದರೆ, ನಮ್ಮ ಕೈಗಳು ಕೆಲಸ ಮಾಡುತ್ತವೆ" ಎಂದು ಖುರೇಷಿ ಹೇಳಿದರು.

ಕಾರ್ಮಿಕರನ್ನು ಅಭಿನಂದಿಸಿದ ಸಿಪಿಐ(ಎಂ)

ಉತ್ತರಾಖಂಡದ ಉತ್ತರಕಾಶಿ ಸುರಂಗದಿಂದ 17 ದಿನಗಳ ಕಾಲ ಧೈರ್ಯದಿಂದ ಮತ್ತು ಶಾಂತವಾಗಿ ಹೊರಬಂದ 41 ಕಾರ್ಮಿಕರನ್ನು ಸಿಪಿಐ(ಎಂ) ಅಭಿನಂದಿಸಿದೆ. ಶೋಚನೀಯ ಪರಿಸ್ಥಿತಿಯಲ್ಲಿ ಕಾರ್ಮಿಕರನ್ನು ಸುರಂಗದಿಂದ ಹೊರಗೆ ತಂದ ಗುತ್ತಿಗೆ ಕಾರ್ಮಿಕರನ್ನು ಅವರು ವೀರರು ಎಂದು ಬಣ್ಣಿಸಿದೆ. ರಕ್ಷಣಾ ಕಾರ್ಯಾಚರಣೆಯಲ್ಲಿ ಕೆಲಸ ಮಾಡಿದ ಎಲ್ಲಾ ತಂಡಗಳು ಮತ್ತು ಏಜೆನ್ಸಿಗಳಿಗೆ ಅಭಿನಂದನೆಗಳು. ಸೂಕ್ಷ್ಮ ವಲಯಗಳಲ್ಲಿ ಸುರಂಗ ಕೊರೆಯುವಾಗ ಹೆಚ್ಚಿನ ಮುಂಜಾಗ್ರತೆ ವಹಿಸುವಂತೆ ಸರ್ಕಾರಕ್ಕೆ ಸಲಹೆ ನೀಡಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 4-10, 2023 Price: Rs. 10/- Date of Publication: 1 December 2023 RNI No. KARKAN /2006/17926 Posted on 02-12-2023
Posted at BG PSO, BG - 560026 **Posted at Periodical Rate -** Rs. 2

ಬೆಂಗಳೂರಿನಲ್ಲಿ ಕಂಬಳ ಮಿಳಿತಗೊಂಡಿರುವ ಹಲವು ನಂಬಿಕೆ–ಆಚರಣೆಗಳು

ಕರಾವಳಿ ಕರ್ನಾಟಕದ ಬೇಸಾಯ ವೃತ್ತಿಯೇ ಪ್ರಮುಖವಾಗಿರುವ ಸಮಾಜದಲ್ಲಿ ಕೋಣಗಳು ಅವರ ಬದುಕಿನ ಅವಿಭಾಜ್ಯ ಅಂಗ. 'ಕಂಬಳ', ಬೇಸಾಯಗಾರರು ಭತ್ತದ ಗದ್ದೆಗಳಲ್ಲಿ ಕೊಯ್ಲಿನ ಬಳಿಕ ಕೋಣಗಳನ್ನು ಓಡಿಸುತ್ತಿದ್ದ ಆಚರಣೆ ಮತ್ತು ಆಟವಷ್ಟೇ ಆಗದೇ ಅದರೊಂದಿಗೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆ ಮಿಳಿತಗೊಂಡಿದೆ.

ಸಾಮಾನ್ಯವಾಗಿ ಗದ್ದೆಗಳ ಸಾಲಿನಲ್ಲಿ ಕೊನೆಯದಾದ, ಅತ್ಯಂತ ಕೆಳಗಿನ ಗದ್ದೆಗೆ ತುಳುವಿನಲ್ಲಿ ಕಂಬಳ ಎನ್ನುತ್ತಾರೆ. ಕೊನೆಯಲ್ಲಿರುವ ಗದ್ದೆಯಾದ ಕಾರಣ ಇದರಲ್ಲಿ ಸಾಮಾನ್ಯವಾಗಿ ಕೆಸರು ಜಾಸ್ತಿಯೇ ಇರುತ್ತದೆ.

ಮೊದಲ ಭತ್ತದ ಬೆಳೆಯ ಕೊಯ್ಲು ಮುಗಿದು ಎರಡನೆಯ ಸುಗ್ಗಿ ಬೆಳೆಗೆ ಭೂಮಿ ಹದಮಾಡುವ ಸಮಯದಲ್ಲಿ ದೊರೆಯುವ ಬಿಡುವಿನ ವೇಳೆಯಲ್ಲಿ ನಡೆಯುವ ಆಚರಣೆಯೇ ಕಂಬಳ. ಕಾರ್ತಿಕ ಮಾಸದ ದೀಪಾವಳಿ ಹಬ್ಬದ ನಂತರ ಚಳಿಗಾಲದಲ್ಲಿ (ನವೆಂಬರ್ ಆಸುಪಾಸು) ಆರಂಭವಾಗುವ ಈ ಜಾನಪದ ಕ್ರೀಡೆಯನ್ನು, ಮಾರ್ಚ್ ತಿಂಗಳವರೆಗೂ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ವಿವಿಧ ಭಾಗದಲ್ಲಿ ಆಯೋಜಿಸಲಾಗುತ್ತದೆ. ಈ ಕಂಬಳದಲ್ಲಿ ಒಟ್ಟು ಎರಡು ವಿಧವಿದೆ, ಒಂಟಿ ಗದ್ದೆಯ ಕಂಬಳ ಮತ್ತು ಜೋಡುಕರೆ ಕಂಬಳ. ಅಂದಾಜು 100–200 ಮೀಟರ್ ಉದ್ದದ ಓಟದ ಕಣಗಳಲ್ಲಿ ಕಂಬಳ ಸಾಮಾನ್ಯವಾಗಿ ನಡೆಯುತ್ತದೆ. ಗದ್ದೆಯ ಮಣ್ಣಿಗೆ ಮರಳು ಸೇರಿಸಿ, ಅದರ ಮೇಲೆ ನೀರು ನಿಲ್ಲಿಸಲಾಗುತ್ತದೆ. ಕಂಬಳದ ಅಂಕಣವು ನೆಲ ಮಟ್ಟಕ್ಕಿಂತ ಕೆಲವು ಅಡಿಗಳಷ್ಟು ಆಳದಲ್ಲಿರುತ್ತದೆ. ನೀರು ತುಂಬಿದ ಕೆಸರುಗದ್ದೆ ಅಥವಾ ನದಿಯ ದಡದ ಮರಳುದಂಡೆಗಳ ಬದಿಯಲ್ಲಿ ಕೃತಕವಾಗಿ ನಿರ್ಮಿಸಿರುವ ಕೊಳದಲ್ಲಿ, ಕೋಣಗಳ ನಡುವೆ ಓಟದ ಪಂದ್ಯವನ್ನು ನಡೆಸಲಾಗುತ್ತದೆ.

ಇನ್ನು ಕಂಬಳದಲ್ಲಿ 'ಬಾರೆ ಕಂಬಳ', 'ಪೂಕರೆ ಕಂಬಳ', 'ಅರಸು ಕಂಬಳ' ಮತ್ತು ಈಗ ನಡೆಯುತ್ತಿರುವ 'ಆಧುನಿಕ ಕಂಬಳ' ಎಂಬ ನಾಲ್ಕು ಬಗೆಗಳನ್ನು ಗುರುತಿಸಬಹುದು. ಬಾರೆ ಕಂಬಳ ಮತ್ತು ಪೂಕರೆ ಕಂಬಳಗಳಲ್ಲಿ ಕೋಣಗಳ ಪಂದ್ಯಕ್ಕಿಂತ, ಇತರ ಆಚರಣೆಗಳಿಗೆ ಹೆಚ್ಚಿನ ಮಹತ್ವವಿದೆ. ಬಾರೆ ಕಂಬಳದಲ್ಲಿ, ಗದ್ದೆಯ ನಡುವೆ ಒಂದು ಬಾಳೆಯ ಗಿಡವನ್ನು ನೆಡುವುದೇ ಬಹಳ ಮುಖ್ಯ. ಕೋಣಗಳ ಓಟ ಕೇವಲ ಸಾಂಕೇತಿಕವಾದುದು. ಅರಸು ಕಂಬಳದಲ್ಲಿ ಆಚರಣೆಗಳು ಮತ್ತು ಪಂದ್ಯ ಎರಡಕ್ಕೂ ಸಮಾನ ಮಹತ್ವವಿದೆ.

ಕರಾವಳಿಯಲ್ಲಿ ಕಂಬಳದ ಆಚರಣೆಗೆ ಸುಮಾರು 800–900 ವರ್ಷಗಳ ಹಿನ್ನೆಲೆ ಇದೆ. ಉಡುಪಿ ತಾಲೂಕಿನ ಕೆಂಜೂರಿನ ಸಮೀಪ ದೊರಕಿದ ಆಳುಪ ರಾಣಿ ಬಲ್ಲಮಹಾದೇವಿಗೆ ಸಂಬಂಧಿಸಿದ ಶಾಸನದಲ್ಲಿ ಕಂಬಳದ ಬಗ್ಗೆ ಹೇಳಲಾಗಿದೆ. ಇದರ ಕಾಲ ಕ್ರಿ. ಶ.1200 ಆಗಿದ್ದು ಕಂಬಳ ಕನಿಷ್ಠ 800 ವರ್ಷಗಳಿಂದ ಆಚರಿಸಲ್ಪಡುತ್ತಾ ಬಂದಿದೆ ಎಂದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಂಬಳಕ್ಕೆ ಸುದೀರ್ಘ ಶ್ರೀಮಂತ ಇತಿಹಾಸವಿರುವುದು ವೇದ್ಯವಾಗುತ್ತದೆ. ಕಂಬಳ ಆಟದಲ್ಲಿ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆ ಮಿಳಿತಗೊಂಡಿದೆ. ಜಮೀನ್ದಾರಿ ಕುಟುಂಬಗಳ ಮಧ್ಯೆ ನಡೆಯುವ ಪಕ್ಕಾ ಫ್ಯೂಡಲ್ ಕ್ರೀಡೆಯಾಗಿರುವ ಕಂಬಳ ಈಗ ಸ್ವರೂಪದಲ್ಲಿ ಸ್ವಲ್ಪ ಮಾರ್ಪಾಡುಗಳನ್ನು ಹೊಂದಿದೆಯಾದರೂ ಆಳದಲ್ಲಿ ಫ್ಯೂಡಲ್ ವ್ಯವಸ್ಥೆಯನ್ನು ಜಾರಿಯಲ್ಲಿಡುವ ತಂತ್ರವೇ ಆಗಿದೆ.



ನಾಲ್ಕು ಬಗೆಯ ಓಟಗಳು

ಕೋಣಗಳ ಓಟದ ಪಂದ್ಯವನ್ನು ನಡೆಸುವ ವಿಧಾನವನ್ನು ಅವಲಂಬಿಸಿ ಕಂಬಳದಲ್ಲಿ ಮತ್ತೆ ನಾಲ್ಕು ಬಗೆಗಳಿವೆ. ಹಗ್ಗದ ಓಟ, ಅಡ್ಡಹಲಗೆ ಓಟ, ನೇಗಿಲ ಓಟ ಮತ್ತು ಕಣೆ ಹಲಗೆ ಓಟ ಎಂಬ ಹೆಸರುಗಳಿಂದ ಅವುಗಳನ್ನು ಕರೆಯುತ್ತಾರೆ. ಹಗ್ಗದ ಓಟದಲ್ಲಿ, ಕೋಣಗಳು ಒಂದು ನೊಗವನ್ನು ಕಟ್ಟಿಕೊಂಡು ಓಡುತ್ತವೆ. ಆ ನೊಗದ ಮಧ್ಯಕ್ಕೆ ಕಟ್ಟಿದ ಹಗ್ಗಗಳನ್ನು ಹಿಡಿದುಕೊಂಡಿರುವ ಮನುಷ್ಯನು ಕೋಣಗಳ ಜೊತೆ ತಾನೂ ಓಡುತ್ತಾನೆ. ಅಡ್ಡ ಹಲಗೆ ಓಟದಲ್ಲಿ ಆ ಮನುಷ್ಯನು, ನೊಗಕ್ಕೆ ಸೇರಿಸಿರುವ ಹಲಗೆಯ ಮೇಲೆ ನಿಂತುಕೊಂಡು ಕೋಣಗಳ ಓಟವನ್ನು ನಿಯಂತ್ರಿಸುತ್ತಾನೆ. ನೇಗಿಲ ಓಟದಲ್ಲಿ ನೊಗದ ಜಾಗದಲ್ಲಿ ನೇಗಿಲು ಇರುತ್ತದೆ. ಇಲ್ಲಿ ಸಾರಥಿಯು ನೇಗಿಲನ್ನು ಹಿಡಿದಿರುತ್ತಾನೆ. ಆ ನೇಗಿಲಿಗೆ ಕೋಣಗಳನ್ನು ಕಟ್ಟಿರುತ್ತಾರೆ. ಈ ಮೂರು ಪ್ರಭೇದಗಳಲ್ಲಿ, 'ಮಂಜೊಟ್ಟಿ'ಯನ್ನು (ಪಂದ್ಯದ ಹಾದಿಯ ಕೊನೆ ಬಿಂದು) ಮೊದಲು ತಲುಪುವ ಕೋಣಗಳ ಜೋಡಿಯನ್ನು ವಿಜಯಿಯೆಂದು ಘೋಷಿಸಲಾಗುವುದು. ಆದರೆ, 'ಕಣೆ ಹಲಗೆ ಓಟ'ದಲ್ಲಿ ಪಂದ್ಯದಲ್ಲಿ ಗೆಲ್ಲುವ ಜೋಡಿಯನ್ನು ನಿರ್ಧರಿಸುವ ವಿಧಾನ ಬೇರೆ. ಕಂಬಳದ ಗದ್ದೆಯ ಎರಡೂ ಬದಿಗಳಲ್ಲಿ, ನೆಲಮಟ್ಟದಿಂದ ಸುಮಾರು ಎರಡು ಮೀಟರುಗಳ ಎತ್ತರದಲ್ಲಿ, ಅಗಲವಾದ ಬಟ್ಟೆ ಅಥವಾ ಮರದ ಹಲಗೆಗಳನ್ನು ಕಟ್ಟಿರುತ್ತಾರೆ. ಇವುಗಳನ್ನು 'ನಿಶಾನೆ' ಎಂದು ಕರೆಯುತ್ತಾರೆ. ಕೋಣಗಳು ಓಡುವಾಗ, ನೀರು ಮತ್ತು ಕೆಸರುಗಳ ಮಿಶ್ರಣವು ಎಗರುವ ಎತ್ತರವನ್ನು ಪರಿಗಣಿಸಿ, ಗೆಲ್ಲುವ ಜೋಡಿಯನ್ನು ತೀರ್ಮಾನಿಸುತ್ತಾರೆ.

ವಾರ್ಷಿಕ ಸಾಕಣೆ ವೆಚ್ಚ 3 ಲಕ್ಷದಷ್ಟು

ಕಂಬಳದಲ್ಲಿ ಬಳಸುವ ಕೋಣಗಳನ್ನು ಬೇರೆ ಯಾವ ಕೆಲಸಕ್ಕೂ ಬಳಸುವುದಿಲ್ಲ. ಒಂದು ಜೋಡಿ ಕಂಬಳದ ಕೋಣಗಳ ವಾರ್ಷಿಕ ಸಾಕಣೆ ವೆಚ್ಚ 3 ಲಕ್ಷ ರೂ.ಗಳಷ್ಟು ಇರುತ್ತದೆ. ವರ್ಷವಿಡೀ ಜತನದಿಂದ ಸಾಕಲ್ಪಡುವ ಈ ಕೋಣಗಳಿಗೆ ರಾಜ ಮರ್ಯಾದೆ ಹಾಗೂ ಕಂಬಳದಲ್ಲಿ ಓಡುವ ನಿರಂತರ ತರಬೇತಿಯನ್ನು ನೀಡಲಾಗಿರುತ್ತದೆ. ಕೋಣಗಳಿಗೆ ತಿನ್ನಲು ಬಹುವಿಧದ ಪುಷ್ಟಿದಾಯಕ ಆಹಾರವನ್ನು ನೀಡಲಾಗುತ್ತದೆ.

ಕೋಣಗಳನ್ನು ಓಡಿಸಲು ಶಿಸ್ತುಬದ್ಧವಾದ ತರಬೇತಿ ನೀಡಲು ಅಕಾಡೆಮಿಕ್ ಶಾಲೆಯನ್ನೇ ಸ್ಥಾಪಿಸಲಾಗಿದೆ. ಇದರಲ್ಲಿ ಕ್ರೀಡಾಳು, ದೈಹಿಕ ಶಿಕ್ಷಕರು ಮತ್ತು ಸಮಾಜದ ಎಲ್ಲ ವರ್ಗದವರು ತರಬೇತಿ ಪಡೆದವರಾಗಿರುತ್ತಾರೆ.

ಕಂಬಳ ಪ್ರಾರಂಭವಾಗಿದ್ದೇ ಒಕ್ಕಲು ರೈತರನ್ನು ಸುಲಿಯಲು ಮತ್ತು ಕೆಳ ಸಮುದಾಯಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಲುವಾಗಿ! ತುಳುನಾಡಿನಲ್ಲಿ ಜಾತಿ ಶ್ರೇಣೀಕರಣದ ಉಳಿವು ಮತ್ತು ಮುಂದುವರಿಕೆಯಲ್ಲಿ ಕಂಬಳದ ಪಾತ್ರ ಗಣನೀಯವಾಗಿದೆ.

ಕಂಬಳವು ಕರಾವಳಿ ಕರ್ನಾಟಕ ಜಿಲ್ಲೆಗಳಲ್ಲಿ ಜನಪ್ರಿಯವಾಗಿರುವ ಕೋಣಗಳ ಓಟದ ಸ್ಪರ್ಧೆ.

ರೈತರು ತಮ್ಮ ಕೋಣಗಳ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತಾರೆ ಮತ್ತು ಅವುಗಳಲ್ಲಿ ಕೆಲವನ್ನು ಕಂಬಳಕ್ಕಾಗಿಯೇ ವಿಶೇಷವಾಗಿ ಸಲಹಿ ಉತ್ತಮ ಆಹಾರ, ಎಣ್ಣೆಯ ಮಾಲಿಶ್ ಮಾಡಿ ಪೋಷಿಸುತ್ತಾರೆ. ಕಂಬಳ ಓಟದ ಸಮಯದಲ್ಲಿ ಸಾಮಾನ್ಯವಾಗಿ ಕೋಣಗಳನ್ನು ಜೋಡಿಯಾಗಿ ಓಡಿಸಲಾಗುತ್ತದೆ, ನೇಗಿಲು ಮತ್ತು ಹಗ್ಗ ಬಳಸಿ ನಿಯಂತ್ರಿಸಲಾಗುತ್ತದೆ. ಭತ್ತದ ಗದ್ದೆಯೊಂದನ್ನು ಕಂಬಳದ ಓಟಕ್ಕೆ ಕರಾವಳಿಯಲ್ಲಿ ಸಿದ್ಧಪಡಿಸಲಾಗುತ್ತದೆ. ಕಂಬಳವನ್ನು ಎರಡು ಸಮಾನಾಂತರ ರೇಸ್ ಟ್ರ್ಯಾಕ್‌ಗಳಲ್ಲಿ ನಡೆಸಲಾಗುತ್ತದೆ.

ಪ್ರಮುಖ ಕಂಬಳಗಳು

ಕರಾವಳಿ ಕರ್ನಾಟಕದ 45 ಕ್ಕೂ ಹೆಚ್ಚು ವಿವಿಧ ಗ್ರಾಮಗಳು ಪ್ರತಿವರ್ಷ ಕಂಬಳ ಆಚರಿಸಲಾಗುತ್ತದೆ.

ಕದ್ರಿ ಮತ್ತು ಪಿಲಿಕುಲ, ಮಂಗಳೂರು,

ಮೂಡುಬಿದಿರೆ, ಪುತ್ತೂರು,

ಕಕ್ಕೆಪದವು, ಕೂಳೂರು, ಸುರತ್ಕಲ್, ಉಪ್ಪಿನಂಗಡಿ, ವೇಣೂರು, ಈದು, ಬಜಗೋಳಿ ಸಮೀಪದ ಮೀಯಾರು ಕಂಬಲ ಹೆಸರುವಾಸಿಯಾಗಿದೆ.

ಹೆಣ್ಣು ಮಕ್ಕಳ ಲೈಂಗಿಕ ಶೋಷಣೆ ನಡೆಯುತ್ತಿತ್ತು

ಒಂದು ಕಾಲದಲ್ಲಿ ಕಂಬಳಕ್ಕಿಂತ ಮುಂಚಿನ ದಿನ ರಾತ್ರಿ ಕಂಬಳದ ಗದ್ದೆಯ ಪಕ್ಕದ ಗದ್ದೆಯಲ್ಲಿ ಅತ್ಯಂತ ಹಿಂದುಳಿದ, ಸೂಕ್ಷ್ಮ ಆದಿಮ ಬುಡಕಟ್ಟು ಸಮುದಾಯವೊಂದರ ಹೆಣ್ಣು **ಪುಟ 14 ಕ್ಕೆ**

ಬೆಂಗಳೂರಿನ ಕಂಬಳದಲ್ಲಿ ಗಮನ ಸೆಳೆದ ಮಲೆಕುಡಿಯರು

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ "ಬೆಂಗಳೂರು ಕಂಬಳ"ದಲ್ಲಿ ಬೆಳ್ತಂಗಡಿ ತಾಲ್ಲೂಕಿನ ದಿಡುಪೆ ಪರಂಬೇರಿನ ನಾರಾಯಣ ಮಲೆಕುಡಿಯ ಅವರ ಕೋಣಗಳು ನೇಗಿಲು ಹಿರಿಯ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆಯಿತು. ಪಾರಂಬೇರಿನ ಗುಂಡ ಮತ್ತು ಬಿಳಿಯೂರು ದಾಸ ಮಹರಾಜಕೆರೆಯಲ್ಲಿ ಜಯಗಳಿಸಿತು. ಧನಂಜಯ ಗೌಡ ಸರಪಾಡಿ ಕೋಣಗಳನ್ನು ಓಡಿಸಿದರು.

ಫೈನಲ್ ಗೆದ್ದ ನಾರಾಯಣ ಮಲೆಕುಡಿಯ ಅವರ ಕೋಣವು ಒಂದು ಲಕ್ಷ ನಗದು 16 ಗ್ರಾಂ ಚಿನ್ನ ಮತ್ತು ಟ್ರೋಫಿ ಗೆದ್ದಿದೆ. ಭಾನುವಾರ ಸಾಯಂಕಾಲ 4.30ಕ್ಕೆ ಬಹುಮಾನ ವಿತರಣೆ ನಡೆಯಿತು. ಬೆಂಗಳೂರು ಕಂಬಳ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ರೈ ಸಹಿತ ವಿವಿಧ ಗಣ್ಯರು ಬಹುಮಾನ ವಿತರಿಸಿದರು.

ಬೆಂಗಳೂರು ಕಂಬಳದಲ್ಲಿ ಫೈನಲ್ ತಲುಪಿ ಗೆದ್ದ ಕೊಣಗಳೊಂದಿಗೆ ಪ್ರೀತಿ, ವಿಶ್ವಾಸ, ನಂಬಿಕೆಗಳೂ ಗೆದ್ದವು. ಸಾಗಿದ್ದು ಕೋಣಗಳು ಮಾತ್ರ ಅಲ್ಲ. ತಳಸಮುದಾಯದಿಂದ ಬಂದ ಮಲೆಕುಡಿಯ ಸಮುದಾಯದ ಹೆಸರೂ ಆಗಿತ್ತು. ಮಲೆಕುಡಿಯ ಸಮುದಾಯದ ಕೋಣ *ಮಲೆಕುಡಿಯರ* ಹೆಸರಿನಲ್ಲೇ ಬೆಂಗಳೂರು ಕಂಬಳದಲ್ಲಿ ಓಡಲೇಬೇಕೆಂದು ಪಣತೊಟ್ಟವರು ಮಂಗಳೂರಿನ ಜನಪರ ವಕೀಲ ದಿನೇಶ್ ಹೆಗ್ಡೆ ಉಳೆಪಾಡಿ ಅವರು. ಈ ಕೋಣಗಳಿಗೆ ಅವರೇ ಪ್ರಾಯೋಜಕತ್ವ ವಹಿಸಿದ್ದರು.

ಇತ್ತೀಚೆಗಷ್ಟೇ ಬಂಗಾಡಿ ಪಾರಂಬೇರಿಗೆ ಭೇಟಿ ನೀಡಿದ್ದ ಅವರು ಕೋಣಗಳನ್ನು ನೋಡಿ, ಬೆಂಗಳೂರು ಕಂಬಳದಲ್ಲಿ ಪಾಲು ಪಡೆಯಲೇಬೇಕೆಂದು ಪಣತೊಟ್ಟು, ಬೆಂಗಳೂರಿಗೆ ಕಳುಹಿಸುವ ವ್ಯವಸ್ಥೆ ಮಾಡಿದ್ದು ಮಾತ್ರವಲ್ಲ, ಕಂಬಳ ಮುಗಿಯುವವರೆಗೂ ಜತೆಗೇ ಇದ್ದರು. ಕೊನೆಗೂ ವಿಶ್ವಾಸ, ಪ್ರೀತಿ ಗೆದ್ದಿತು.

ಮಲೆಕುಡಿಯರು ತಮ್ಮ ಕೃಷಿ ಚಟುವಟಿಕೆ ಮುಗಿದ ನಂತರ ತಮ್ಮ ಜಮೀನುಗಳಲ್ಲಿ ಕಂಬಳ ಓಡಿಸುತ್ತಿದ್ದ ಇತಿಹಾಸ ಇದೆ. ಮಲೆಕುಡಿಯರಲ್ಲಿ ಕಂಬಳ ಗದ್ದೆ ಈಗಲೂ ಇದೆ. ದೈವಾರಾಧನೆಯ ಸಂದರ್ಭದಲ್ಲಿ ಇದಕ್ಕೆ ಪೂಜೆ ಸಲ್ಲಿಸುವ ಕ್ರಮವೂ ಇದೆ. ಆಧುನಿಕ ಯುಗದಲ್ಲಿ ಈ ಆಚರಣೆ ಮಲೆಕುಡಿಯರಲ್ಲಿ ಕಡಿಮೆಯಾಗುತ್ತ ಬಂದಿದ್ದರೂ ಕೆಲವೊಂದು ಕಡೆಗಳಲ್ಲಿ ಈ ಕಂಬಳ ಉಳಿದುಕೊಂಡಿದೆ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**